REQUIRED BE/ Diploma Civil Engineer for Drafting, Estimations, site visits and Office Assistant for Office in Malleswaram. Contact: 08095044633, Email: ambas.ecc@gmail.com

Multiple Vacancy

REQUIRED
The following personnel with relevant experience.
- Marketing Manager (Admission & Marketing activities & liasioning)
- Male & Female Warden (Ex-Servicemen preferred for Male)
- Graphic Designer
- Office Admin & Office Assistant (Male & Female) (Graduates with Typing & Knowledge in Computer)
- Male Canteen Manager
- Cook
- Canteen Helper
- Administrative Officer
- Receptionist
- Librarian
- Accountant
- Lab Attendant (PUC – PCMB)
- Male Lab Technician (D.Pharm)
- Office Attendant (PUC)

Aditya Group of Institutions
12, Kogilu Main Road, Maruthi Nagar, Yelahanka, Bangalore-64
Email : hrdept.aditya@gmail.com

Receptionist/ Secretary

HAEID @ Rajajinagar Requires Career oriented Experienced Front Office Executive with exposure to Accounts, Computers, Construction, Secretarial & Travel tasks for Immediate Placement. Contact +91 6366443134 or Email to haeidhn@yahoo.com

WANTED FEMALE FRONT OFFICE EXECUTIVE, NS Fitness Revolution @ ITPL Main Road, Opposite to Brookefield Mall with Basic computer knowledge & good communication skill. Shift time 7am to 2pm & 2pm to 9pm. Contact: 9513668615

Security & Detectives

FORCE 18 ACADEMY & SECURITY SERVICES PVT. LTD. Require SECURITY OFFICER'S (Ex Service Man Preferred) and CCTV OPERATOR (Minimum 3 year Experience) In Age Group of 30-55 Years Bangalore Location: Marathahalli, Bommanahalli, Thanisandra & Yelahanka. Send Resume: service@force18security.com Contact: 8197502829

WANTED SECURITY Guard, Security Officer, and Supervisor for Yelahanka, Sarjapur areas contact: 080-25443259/ 99722 14845

DH DECCAN HERALD — ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH | MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752 | 9845114560 | 9886213331 | 080 - 45557163 / 164
Email: dhclassifieds@deccanherald.co.in

REAL ESTATE SELLING

Flat

BTM Layout

FLATS 14' units for sale (G+2)`Kudlu Gate,BBMP A`Katha, urgency Sale, expecting 2,90,00,000/- (for`14 units) negotiable -8904522650/ 9108853139

HSR Layout

NEW FLAT for sale 3`BHK furnished HSR Layout, Swimming pool,`Gym etc,`Bank loan availed, urgency`sale (old Rate 1,10,00,000/-`Now 95,00,000/-) 8904522650/ 9108853139

Industrial & Factory

General

AVAILABLE INDUSTRIAL Warehouse, Residencial, Commercial Land 5 to 150 Acres Nelamangala, Dabaspet IVC Doddaballapur, Chikkaballapur, Hoskote, Malur, Hosur Road. NAIK: 9141326819, 9972636255

Sites

Lingarajapuram

BDA APPROVED KSFC EHBCS Layout Site for Sale 47X52 Oil Mill Road, Lingarajauram.Contact: 9481388064.

West

BMRDA 'E' Khata, West 20×30 Site for SALE, Near Big Banyan Tree, Brokers Excuse. 9886107471

BUSINESS

Business Offers

Finance

NRI'S INVESTMENT And Finance Available On Low Interest Against Properties, Land & Building,Sites,Flats, Converted& Agriculture Lands Call:7411265189

INVESTOR INVITED for upgrading and expanding running business. Regular monthly returns plus perks assured. Contact 9980883950

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

PERSONAL

Change of Name

I, SALINI YARATAPALLI W/o Penchala Reddy Chinthala residing at No. 25, 2nd main, Indira Gandhi Street, Near Ever Grace Public School, A.Narayanapura, Bangalore North, Bangalore- 560016 has mentioned my surname in my Son Monish Reddy Chinthala Passport as SALINI instead of SALINI YARATAPALLI hereby declaring that SALINI & SALINI YARATAPALLI both names belongs to me. Henceforth I shall be called as SALINI YARATAPALLI only, vide affidavit dated 03/11/2022 before notary Y.V Shankar, Bangalore

I, GANAPATHI PRABHU SAI BALASUBRAMANIAN S/o.GANAPATHI BALASUBRAMANIAN residing at: "Sai Krupa" 1589, 20th Main, Sector-1, H. S. R. Layout Bengaluru 560102 have changed my name to PRABHU BALASUBRAMANIAN IYER as per the General Judgment for change of name dated 03.11.2022 passed in Case No.22CU36736 by the Circuit Court of the State of Oregon, Washington County, USA.

JC671457H SUB/SKT Basanta Kumar Sahu 340 ASC Supply, mother's name Records MATHYANI SAHU to MATIANI SAHU, Notary BM Chandrshekar

CHANGE OF NAME I, Kum. Preethi @ Preethi S. Nair, D/o. Late P.A. Gopinathan, residing at No. 4A, 3rd 'A' Cross, Sir M.V. Nagar, Ramamurthy Nagar, Bangalore - 560 016 declare that both the names pertain to me and in my late father's Pension Records my name has been mentioned as Kum. Preethi. Henceforth I shall be known as Preethi S. Nair vide affidavit dated: 05.11.2022 before Notary G. Rajendra, Bangalore.

I, MOHAMMED SALEEM S/o. Mohammed Kaleem residing at No. 1745, Dr. S.L. Thimmaiah street, Ijoor, Ramanagara Town & District, Karnataka wrongly mentioned my name as MOHAMED SALEEM. Hereby declaring that my actual & correct name is MOHAMMED SALEEM only. Vide affidavit dated 04/11/2022 before notary Vinod Kumar. S., Ramanagara.

I, HEMANTH KUMAR S R #417, 1st 'C' Cross, 8th 'A' Main, 3rd Stage, 4th Block, Basaveshwaranagar, Bangalore-79. have changed my name From HEMANTHKUMAR to HEMANTH KUMAR S R vide affidavit dated 07.11.2022 Sworn before Notary Ratna.N Bangalore. Henceforth I shall be called HEMANTH KUMAR S R Only.

JC680034W EX/SUB Abdus Sukar, R/a Kharinda (Vill) Dechapra (P.O) Kandi (Teh) Murshidabad (Dist) W.B., have changed my name from ABDUS SUKAR to ABDUS SUKUR before Public Notary Kandi dated 31.10.2022.

I, M.N. SHEKAR BABU R/a #.2670/27, 11th main road D block 2nd Stage, Next to Balamurti Ganapathi Temple, Rajajinagar, Bangalore 560010 Have Changed my Name to SHEKAR BABU Vide Affidavit Dated 21/10/2022 before Notary P.N. Nagesha, Bangalore

I, ASHRITH KRISHNA R/a #75, Srinivasa Nilaya 1st N Block Dr.Rajkumar Road Opposite Corporation Bank Rajajinagar Bengaluru-560010, Have Changed My Name to AASHRITH KRISHNA vide Affidavit Dated 02-11-2022 Before Notary A. Manjula, Bangalore-09

I, PUNEET, Residing at 189, Model Officers Colony Post, T.Dasarahalli, Bengaluru-57 have changed my name as PUNEET CHOUDHARY, vide affidavit dated 7/11/2022 before Notary V.Anjanappa, Bengaluru

I, CHANDRA JAIN H residing at Bengaluru-1, have changed my name as CHANDRA KUMARI JAIN, vide affidavit dated 8/11/2022 before Notary P.C.Ramaiah, Bengaluru

I, BALU DAS residing at Bengaluru-91 have changed my name as BALUDAS GOUTAMDAS VAISHNAV, vide affidavit dated 8/11/2022 before Notary P.C.Ramaiah, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪಿಯು: 1,500 ಪ್ರತಿಗಳ ಮುದ್ರಣ; 650 ಸರ್ಕಾರಿ ವಿಜ್ಞಾನ ಕಾಲೇಜುಗಳಿಗೆ ರವಾನೆ

ಕನ್ನಡ ಮಾಧ್ಯಮದಲ್ಲಿ ಪಿಸಿಎಂಬಿ ಪುಸ್ತಕ

• ಮಲ್ಲಿಕಾರ್ಜುನ ನಾಲವಾರ

ಪ್ರಜಾವಾಣಿ ವಿಶೇಷ

ಕಲಬುರಗಿ: ವಿಜ್ಞಾನ ಸಂಯೋಜನೆ ಹೊಂದಿದ ರಾಜ್ಯದ 650 ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ಕೋರ್ಸ್‌ನ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಗಳ ಒಂದು ಸೆಟ್ ರವಾನಿಸಲಾಗಿದೆ.

ಇದೇ ಮೊದಲ ಬಾರಿಗೆ ಪ್ರಥಮ ಮತ್ತು ದ್ವಿತೀಯ ವರ್ಷದ ವಿಜ್ಞಾನ ವಿಭಾಗದ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನದ (ಪಿಸಿಎಂಬಿ) ಪುಸ್ತಕಗಳು ಕಾಲೇಜಿನ ಗ್ರಂಥಾಲಯ ಸೇರಲಿವೆ.

ಕನ್ನಡ ಮಾಧ್ಯಮದಲ್ಲಿ ಎಸ್ಸೆಸ್ಸೆಲ್ಸಿ ಅಭ್ಯಾಸ ಮಾಡಿ ವಿಜ್ಞಾನ ವಿಭಾಗ ಸೇರಿಕೊಂಡ ವಿದ್ಯಾರ್ಥಿಗಳಿಗೆ ಪಿಸಿಎಂಬಿ ವಿಷಯಗಳನ್ನು ಇಂಗ್ಲಿಷ್‌ನಲ್ಲಿ ಓದಲು ತೊಂದರೆ ಆಗುತ್ತಿತ್ತು. ಈ ಸಮಸ್ಯೆ ನಿವಾರಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಯು 2015 ರಿಂದ ಕನ್ನಡ ಮಾಧ್ಯಮಕ್ಕೆ ಪಠ್ಯಪುಸ್ತಕಗಳ ಅನುವಾದ ಕಾರ್ಯ ಕೈಗೊಂಡಿತ್ತು. ಭೌತ ವಿಜ್ಞಾನ, ರಸಾಯನವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ವಿಷಯಗಳಿಗೆ ತಜ್ಞರ ಸಮಿತಿ ರಚಿಸಿ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಪಠ್ಯವನ್ನು ಸಂಪೂರ್ಣವಾಗಿ ಕನ್ನಡಕ್ಕೆ ಭಾಷಾಂತರಿಸಿದೆ.

'ಅನುವಾದ ಕಾರ್ಯಕ್ಕೆ ನಾಲ್ಕು ವಿಷಯಗಳಿಗೆ ಆಸಕ್ತರು, ಭಾಷಾ ತಜ್ಞರನ್ನು ಒಳಗೊಂಡ ತಲಾ ಒಂದೊಂದು ಸಮಿತಿ ರಚಿಸಲಾಯಿತು. ದ್ವಿತೀಯ ವರ್ಷದ ಪುಸ್ತಕಗಳನ್ನು ಮುದ್ರಿಸಿ ಕಾಲೇಜಿಗೆ ಕಳುಹಿಸಿ, ಪ್ರಥಮ ವರ್ಷದ ಅನುವಾದ ಆರಂಭಿಸುವ ವೇಳೆಗೆ ಎನ್‌ಸಿಇಆರ್‌ಟಿ ಪಠ್ಯ ಬದಲಾವಣೆ ಮತ್ತು ಕೋವಿಡ್ ಕಾರಣದಿಂದ ಮುದ್ರಣಕ್ಕೆ ಹಿನ್ನಡೆಯಾಯಿತು' ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಪಠ್ಯಪುಸ್ತಕ ಸಂಯೋಜಕ ಅಧಿಕಾರಿ ವೆಂಕಟೇಶ ತಿಳಿಸಿದರು.

'ಉಪನ್ಯಾಸಕರ ಅವಲೋಕನಕ್ಕೆ ಪ್ರತಿ ಕಾಲೇಜಿಗೆ ತಲಾ ಒಂದೊಂದು ಸೆಟ್ ಪುಸ್ತಕಗಳನ್ನು ಕಳುಹಿಸಲಾಗಿದೆ. ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ಗ್ರಂಥಾಲಯಗಳಿಗೆ ಹಾಗೂ ಆಸಕ್ತರಿಗೆ ಸರ್ಕಾರಿ ಮುದ್ರಣಾಲಯದಲ್ಲಿ ಪುಸ್ತಕಗಳ ಖರೀದಿ ವ್ಯವಸ್ಥೆ ಮಾಡಲಾಗುವುದು' ಎಂದರು.

'ಹಲವು ಅಡೆತಡೆಗಳ ನಡುವೆ ಪ್ರಥಮ ಮತ್ತು ದ್ವಿತೀಯ ವರ್ಷದ ಪುಸ್ತಕಗಳು ಸರ್ಕಾರಿ ಪಿಯು ಕಾಲೇಜುಗಳಿಗೆ ತಲುಪಿವೆ. ಮುದ್ರಿತವಾದ ಒಟ್ಟು 1,500 ಪ್ರತಿಗಳ ಪೈಕಿ 650 ಪ್ರತಿಗಳನ್ನು ಸರ್ಕಾರಿ ಕಾಲೇಜುಗಳಿಗೆ ನೀಡಲಾಗಿದ್ದು, ಉಳಿದವುಗಳನ್ನು ಮಾರಾಟಕ್ಕೆ ಇರಿಸಲಾಗಿದೆ. ಪ್ರಥಮ ವರ್ಷದ ಒಂದು ಸೆಟ್ ದರ ₹1,370 ಹಾಗೂ ದ್ವಿತೀಯ ವರ್ಷದ ಸೆಟ್‌ಗೆ ₹1,690 ನಿಗದಿಪಡಿಸಲಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಮುದ್ರಣವಾದರೆ ಈಗಿನ ಬೆಲೆಯೂ ಇಳಿಕೆಯಾಗಲಿದೆ' ಎಂದು ವಿವರಿಸಿದರು.

'ಕನ್ನಡ ಮಾಧ್ಯಮದ ಪುಸ್ತಕಗಳನ್ನು ಖರೀದಿಸಲು ಇಚ್ಛಿಸುವವರು ತಮ್ಮ ವ್ಯಾಪ್ತಿಯ ಪಿಯು ವಿಭಾಗೀಯ ಕಚೇರಿ ಅಧಿಕಾರಿಯ ಗಮನಕ್ಕೆ ತರಬಹುದು. ನಮ್ಮ ಬಳಿಯಿರುವ 'ರೆಡಿ ಟು ಪ್ರಿಂಟ್' ಸಿಡಿ ಕಾಪಿಯ ಮೂಲಕ ಸರ್ಕಾರಿ ಮುದ್ರಣಾಲಯದಲ್ಲಿ ಪುಸ್ತಕಗಳನ್ನು ಮುದ್ರಿಸಿ ಅವರಿಗೆ ರವಾನಿಸುತ್ತೇವೆ' ಎಂದರು.

ಪಿಯು ವಿಜ್ಞಾನ ವಿಭಾಗದ ಪ್ರಥಮ ವರ್ಷದ ಕನ್ನಡ ಮಾಧ್ಯಮ ಪುಸ್ತಕಗಳು

ರಾಜ್ಯದ ಎಲ್ಲಾ ಸರ್ಕಾರಿ ಪಿಯು ವಿಜ್ಞಾನ ಕಾಲೇಜುಗಳಿಗೆ ಕನ್ನಡ ಮಾಧ್ಯಮದ ಪಿಸಿಎಂಬಿ ಪುಸ್ತಕಗಳನ್ನು ಕಳುಹಿಸಲಾಗಿದೆ. ಮುಂದಿನ ವರ್ಷ ಪಠ್ಯಪುಸ್ತಕ ಕಳುಹಿಸುವ ಬಗ್ಗೆ ಈಗಲೇ ಹೇಳಲು ಆಗುವುದಿಲ್ಲ
ರಾಮಚಂದ್ರನ್ ಆರ್, ನಿರ್ದೇಶಕ, ಪದವಿ ಪೂರ್ವಶಿಕ್ಷಣ ಇಲಾಖೆ

'ಪಶು ಆಹಾರ ದರ ಇಳಿಸಿ'

ರಾಜ್ಯ ರೈತಸಂಘ, ಹಸಿರುಸೇನೆ ಕಾರ್ಯಕರ್ತರ ಆಗ್ರಹ

ಪ್ರಜಾವಾಣಿ ವಾರ್ತೆ

ಯಲಹಂಕ: ಹಾಲಿನ ದರ ಏರಿಸಿ, ಪಶು ಆಹಾರ ದರ ಇಳಿಸಬೇಕೆಂದು ಒತ್ತಾಯಿಸಿ, ರಾಜ್ಯ ರೈತಸಂಘ ಹಾಗೂ ಹಸಿರುಸೇನೆಯ ಕಾರ್ಯಕರ್ತರು ಹಾಗೂ ರೈತರು, ರಾಜಾನುಕುಂಟೆಯ ಪಶು ಆಹಾರ ಉತ್ಪಾದನಾ ಘಟಕದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು.

ಬೆಂಗಳೂರು ನಗರ ಮತ್ತು ಗ್ರಾಮಾಂತರ, ಕೋಲಾರ ತುಮಕೂರು, ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡು, ಕೆಎಂಎಫ್ ಮತ್ತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ರಾಜ್ಯ ರೈತಸಂಘದ ರಾಜ್ಯಘಟಕದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಪಶು ಆಹಾರದ ದರವನ್ನು ಏಕಾಏಕಿ ಒಂದು ಟನ್‌ಗೆ ₹3500ಕ್ಕೆ ಏರಿಸಲಾಗಿದೆ. ಜತೆಗೆ, ಹಾಲಿನ ದರ ಏರಿಕೆ ಮಾಡದೆ ರೈತರನ್ನು ಶೋಷಣೆ ಮಾಡಲಾಗುತ್ತಿದೆ ಎಂದು ದೂರಿದರು.

ಹಾಲು ಒಕ್ಕೂಟವು ಆಡಳಿತ ನಿರ್ವಹಣೆಗಾಗಿಯೇ ಅನಗತ್ಯವಾಗಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಆದರೆ, ರೈತರಿಗೆ ಮಾತ್ರ ನ್ಯಾಯಯುತ ದರ ನೀಡದೆ, ಗ್ರಾಹಕರಿಂದಲೂ ದುಬಾರಿ ಹಣ ವಸೂಲಿ ಮಾಡುತ್ತಿದೆ. ಗೋ ಶಾಲೆಗಳನ್ನು ಆರಂಭಿಸಿದರೆ ಸರ್ಕಾರ ಸಬ್ಸಿಡಿ ನೀಡುತ್ತಿದೆ. ಆದರೆ ರೈತರು ಸರ್ಕಾರದಿಂದ ಯಾವುದೇ ಸಬ್ಸಿಡಿ ಪಡೆಯದೆ ಹೈನುಗಾರಿಕೆ ಮಾಡಿದರೂ ಹಾಲಿಗೆ ವೈಜ್ಞಾನಿಕ ಬೆಲೆ ನೀಡುತ್ತಿಲ್ಲ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಪ್ರಸನ್ನ ಮಾತನಾಡಿ, 'ಕಚ್ಚಾ ವಸ್ತುಗಳ ಬೆಲೆ ಹೆಚ್ಚಾದರೆ ಉತ್ಪಾದನಾ ವಸ್ತುಗಳ ಬೆಲೆಯೂ ಹೆಚ್ಚಾಗುತ್ತದೆ. ಅದರಂತೆ ಹಾಲಿನ ಬೆಲೆಯೂ ಹೆಚ್ಚಾಗಬೇಕು. ಪಶು ಆಹಾರದ ಮಾರುಕಟ್ಟೆಗಳ ಮೇಲೆ ಸರ್ಕಾರದ ನಿಯಂತ್ರಣವಿರಬೇಕು' ಎಂದು ಒತ್ತಾಯಿಸಿದರು.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಪ್ರತಿಕ್ರಿಯಿಸಿ, 'ಕಚ್ಚಾ ವಸ್ತುಗಳ ಬೆಲೆ ಶೇ 20ರಿಂದ 25ರಷ್ಟು ಹೆಚ್ಚಾಗಿರುವುದರಿಂದ ಪಶು ಆಹಾರದ ಬೆಲೆಯನ್ನು ಅನಿವಾರ್ಯವಾಗಿ ಏರಿಸಲಾಗಿದೆ. ಗ್ರಾಹಕರ ಹಾಲಿನ ದರ ಹೆಚ್ಚಿಸುವುದರ ಜೊತೆಗೆ ಪಶು ಆಹಾರದ ದರವನ್ನು ಇಳಿಸುವ ಬಗ್ಗೆ ನವೆಂಬರ್ 15ರೊಳಗಾಗಿ ಅಧ್ಯಕ್ಷರು ಹಾಗೂ ಸರ್ಕಾರದ ಕಾರ್ಯದರ್ಶಿಗಳ ಮೂಲಕ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿದರು

ಮೋದಿ ಭೇಟಿ: ರಸ್ತೆಗಳಿಗೆ ತರಾತುರಿ ಕಾಯಕಲ್ಪ!

ಗಣ್ಯರು ಸಾಗುವ ರಸ್ತೆ ದುರಸ್ತಿ: ಭರದಿಂದ ಸಾಗಿದ ಗುಂಡಿಗಳ ಮುಚ್ಚುವ ಕಾರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಕ್ಕೆ ನ.11ರಂದು ಪ್ರಧಾನಿ ನರೇಂದ್ರ ಮೋದಿ ಅವರು ಆಗಮಿಸುತ್ತಿರುವುದರಿಂದ ಬಿಬಿಎಂಪಿ ತ್ವರಿತಗತಿಯಲ್ಲಿ ರಸ್ತೆಗಳಿಗೆ ಕಾಯಕಲ್ಪ ನೀಡುವ ಕಾರ್ಯದಲ್ಲಿ ತೊಡಗಿದೆ.

ಪ್ರಧಾನಿ ಸಾಗುವ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು ಪಾಲಿಕೆ ಆದ್ಯತೆ ನೀಡಿದ್ದು, ಸಮರೋಪಾದಿಯಲ್ಲಿ ಈ ಕಾರ್ಯ ನಡೆದಿದೆ. ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ, ಗುಬ್ಬಿ ತೋಟದಪ್ಪ ರಸ್ತೆ, ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆ ಮತ್ತು ಓಕಳೀಪುರಂ ರಸ್ತೆ ಸೇರಿ ನಗರದ ವಿವಿಧ ರಸ್ತೆಗಳಿಗೆ ಡಾಂಬರೀಕರಣ ಮತ್ತು ಸ್ವಚ್ಛತಾ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

'ಗುಂಡಿಗಳನ್ನು ಮುಚ್ಚುವ ಕಾರ್ಯ ನಿಯಮಿತವಾಗಿ ನಡೆಯುತ್ತಿದೆ. ಅತಿ ಗಣ್ಯರು ಸಂಚರಿಸುವ ಮಾರ್ಗಗಳಲ್ಲಿ ರಸ್ತೆ ದುರಸ್ತಿ ಕಾರ್ಯವನ್ನು ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದೆ. ಪ್ರಧಾನಿ ಅವರು ಸಂಚರಿಸುವ ಎಚ್‌ಎಎಲ್, ಶಾಸಕರ ಭವನಕ್ಕೆ ತೆರಳುವ ಮಾರ್ಗಗಳು ಮತ್ತು ಕೆಎಸ್‌ಆರ್ ರೈಲ್ವೆ ನಿಲ್ದಾಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ನಿಲ್ದಾಣದವರೆಗೆ ಮಾರ್ಗಗಳು ಬಹುತೇಕ ಉತ್ತಮ ಸ್ಥಿತಿಯಲ್ಲಿವೆ. ಆದರೂ, ಗುಂಡಿಗಳಿದ್ದರೆ ತಕ್ಷಣವೇ ದುರಸ್ತಿ ಕಾರ್ಯ ಕೈಗೊಳ್ಳಲಾಗುತ್ತಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಗೊಳ್ಳಿ ರಾಯಣ್ಣ ವೃತ್ತದಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಹಿಂದಿನ ಗೇಟ್‌ಗೆ ತೆರಳಲು ರಸ್ತೆ ನಿರ್ಮಿಸುವ ಕಾರ್ಯವೂ ಭರದಿಂದ ಸಾಗಿದೆ. ಎರಡನೇ ಗೇಟ್‌ಗೆ ತೆರಳುವ ಮಾರ್ಗವನ್ನು ನಿರ್ಮಿಸುವ ಕಾರ್ಯ ಸಹ ನಡೆಯುತ್ತಿದೆ. ಸದ್ಯ, ವಾಹನ ಸವಾರರು ಒಕಳಿಪುರಂ ಜಂಕ್ಷನ್‌ನ ಕೆಳಸೇತುವೆ ಮೂಲಕ ಸಾಗಿ ಎಡಕ್ಕೆ ತಿರುಗಬೇಕಾಗಿದೆ.

ಪ್ರಧಾನಿ ಅವರು ಕೆಎಸ್‌ಆರ್ ರೈಲ್ವೆ ನಿಲ್ದಾಣದಿಂದ ವಂದೇ ಭಾರತ್ ಎಕ್ಸ್‌ಪ್ರೆಸ್ ಮತ್ತು ಭಾರತ್ ಗೌರವ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ.

ಜೂನ್ ತಿಂಗಳಲ್ಲಿ ಪ್ರಧಾನಿ ಅವರು ನಗರಕ್ಕೆ ಭೇಟಿ ನೀಡಿದ್ದಾಗ ಬಿಬಿಎಂಪಿ 14 ಕಿ.ಮೀ. ರಸ್ತೆ ದುರಸ್ತಿಗೆ ₹23 ಕೋಟಿಯಷ್ಟು ವೆಚ್ಚ ಮಾಡಿತ್ತು. ಎಲ್ಲ ವಲಯಗಳ ಮುಖ್ಯ ಎಂಜಿನಿಯರ್‌ಗಳ ಸಭೆ ನಡೆಸಿರುವ ಮುಖ್ಯ ಆಯುಕ್ತರು, ನ.15ರ ಒಳಗೆ ನಗರದಲ್ಲಿನ ಎಲ್ಲ ಗುಂಡಿ ಮುಚ್ಚಲು ಗಡುವು ನೀಡಿದ್ದಾರೆ.

'ನಗರದ ಎಲ್ಲ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳಲಾಗಿದೆ. ನರೇಂದ್ರ ಮೋದಿ ಅವರು ನಗರದಲ್ಲಿ ಸಾಗುವ ಮಾರ್ಗಗಳಲ್ಲಿ ಬ್ಯಾರಿಕೇಡ್ ಸೇರಿ ಸುರಕ್ಷತಾ ಕ್ರಮ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

ನಗರದ ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ರಸ್ತೆಯಲ್ಲಿನ ಗುಂಡಿಗಳನ್ನು ಕಾರ್ಮಿಕರು ಮಂಗಳವಾರ ಮುಚ್ಚಿದರು – ಪ್ರಜಾವಾಣಿ ಚಿತ್ರ

ಶೇ 92ರಷ್ಟು ಗುಂಡಿಗಳನ್ನು ಮುಚ್ಚಲಾಗಿದೆ: ಬಿಬಿಎಂಪಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ವರಿತವಾಗಿ ರಸ್ತೆಗುಂಡಿಗಳನ್ನು ಮುಚ್ಚಲಾಗುತ್ತಿದೆ. ಈಗಾಗಲೇ ಶೇ 92ರಷ್ಟು ಗುಂಡಿ ಮುಚ್ಚಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ವಿವಿಧ ವಲಯಗಳಿಗೆ ಭೇಟಿ ನೀಡಿ ನಿರಂತರವಾಗಿ ರಸ್ತೆಗುಂಡಿಗಳನ್ನು ಮುಚ್ಚುತ್ತಿರುವ ಕಾರ್ಯ ಹಾಗೂ ಪಾದಚಾರಿ ಒತ್ತುವರಿ ತೆರವು ತಪಾಸಣೆಯನ್ನು ನಡೆಸುತ್ತಿದ್ದಾರೆ. ಅಲ್ಲದೆ ಆಯಾ ವಲಯ ವ್ಯಾಪ್ತಿಯಲ್ಲಿ ವಲಯ ಆಯುಕ್ತರು, ಜಂಟಿ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ಹಾಗೂ ಇತರ ಸಂಬಂಧಪಟ್ಟ ಅಧಿಕಾರಿಗಳು ಪ್ರತಿನಿತ್ಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡಲಾಗುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಲಯ	ಗುರುತಿಸಿರುವ ಗುಂಡಿಗಳು	ಮುಚ್ಚಿರುವುದು	ಶೇಕಡವಾರು
ಬೊಮ್ಮನಹಳ್ಳಿ	2120	1857	87.59
ದಾಸರಹಳ್ಳಿ	1918	873	45.52
ಪೂರ್ವ	6376	6284	98.56
ಮಹದೇವಪುರ	2198	2075	94.40
ಆರ್‌ಆರ್‌ನಗರ	3196	2993	93.65
ದಕ್ಷಿಣ	1915	1848	96.50
ಪಶ್ಚಿಮ	6558	6226	95.55
ಯಲಹಂಕ	1118	1076	96.24
ಪ್ರಮುಖ ರಸ್ತೆಗಳು	6612	6245	94.45
ಒಟ್ಟು	32011	29517	92.21

ಪ್ರಗತಿ ಪ್ರತಿಮೆ ಅನಾವರಣಕ್ಕೆ ಭರದ ಸಿದ್ಧತೆ

ದೇವನಹಳ್ಳಿ: ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಣ್ಮನ ಸೆಳೆಯುವ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಬೃಹತ್ ಪ್ರತಿಮೆ ಅನಾವರಣಕ್ಕೆ ಸಿದ್ಧವಾಗಿದೆ. ₹ 84 ಕೋಟಿ ವೆಚ್ಚದಲ್ಲಿ ಇದನ್ನು ನಿರ್ಮಾಣ ಮಾಡಲಾಗಿದೆ.

ನ.11ರಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಮೆ ಅನಾವರಣಗೊಳಿಸಲಿದ್ದು ಕಾರ್ಯಕ್ರಮದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ಸಾಧ್ಯತೆಯಿದೆ. ಇದಕ್ಕಾಗಿ ವಿಮಾನ ನಿಲ್ದಾಣ ಪಕ್ಕದ ಭುವನಹಳ್ಳಿ ರಾಷ್ಟ್ರೀಯ ಹೆದ್ದಾರಿ ಸಮೀಪ ಸುಮಾರು 50 ಎಕರೆ ಜಾಗದಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ.

ದೂರದ ಊರುಗಳಿಂದ ಬರುವ ಜನರ ವಾಹನಗಳು, ಬಸ್, ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ. ಭದ್ರತೆ ದೃಷ್ಟಿಯಿಂದ ಈಗಾಗಲೇ ರಾಷ್ಟ್ರೀಯ ಭದ್ರತಾ ದಳದ ಅಧಿಕಾರಿಗಳು ದೇವನಹಳ್ಳಿ ಸುತ್ತಮುತ್ತ ಗಸ್ತಿನಲ್ಲಿದ್ದಾರೆ. ಕಾರ್ಯಕ್ರಮದ ದಿನ 1,500 ಸಂಚಾರ ಪೊಲೀಸರು ಹಾಗೂ 2,500 ಸಿವಿಲ್ ಪೊಲೀಸರನ್ನು ನಿಯೋಜಿಸಲಾಗಿದೆ.

ಬೆಂಗಳೂರು ಟೌನ್‌ಹಾಲ್ ಬಳಿ ಮಂಗಳವಾರ ಮೂಢನಂಬಿಕೆ ವಿರೋಧಿ ಒಕ್ಕೂಟದ ಸದಸ್ಯರು ಆಹಾರ ಸೇವಿಸುವ ಮೂಲಕ ಚಂದ್ರಗ್ರಹಣ ಕುರಿತು ಜನಜಾಗೃತಿ ಮೂಡಿಸಿದರು ಪ್ರಜಾವಾಣಿ ಚಿತ್ರ

ಚಂದ್ರಗ್ರಹಣ: ಆಹಾರ ಸೇವಿಸಿ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ್ಣು, ಸಿಹಿ, ಒಬ್ಬಟ್ಟು, ಸಮೋಸ, ಮೊಟ್ಟೆ, ಬಿರಿಯಾನಿ ಸೇವಿಸುವ ಮೂಲಕ ಮೂಢನಂಬಿಕೆ ವಿರೋಧಿ ಒಕ್ಕೂಟ, ಪ್ರಗತಿಪರ ಸಂಘಟನೆಗಳ ಸದಸ್ಯರು ಮಂಗಳವಾರ ಟೌನ್‌ಹಾಲ್ ಮುಂಭಾಗ ಚಂದ್ರಗ್ರಹಣ ವೀಕ್ಷಿಸಿದರು.

ಸೂರ್ಯಗ್ರಹಣ, ಚಂದ್ರಗ್ರಹಣಗಳೆಲ್ಲ ಆಕಾಶಕಾಯಗಳ ಸಹಜ, ನೈಸರ್ಗಿಕ ಪ್ರಕ್ರಿಯೆಗಳು. ಇಂತಹ ವೈಜ್ಞಾನಿಕ ಸನ್ನಿವೇಶಗಳನ್ನು ಮೂಢನಂಬಿಕೆಗಳ ಜತೆ ಬೆಸೆದು ಜನರನ್ನು ಹಾದಿ ತಪ್ಪಿಸಲಾಗುತ್ತಿದೆ. ಸಂಪ್ರದಾಯದ ಹೆಸರಿನಲ್ಲಿ ಮೌಢ್ಯ ಬಿತ್ತಲಾಗುತ್ತಿದೆ ಎಂದು ಒಕ್ಕೂಟದ ಮುಖಂಡರಾದ ಟಿ.ನರಸಿಂಹಮೂರ್ತಿ, ಗೋಪಾಲ್, ಆರ್.ಎಂ.ಎನ್. ರಮೇಶ್, ಬಿ.ಟಿ. ಲಲಿತಾ ನಾಯಕ್, ಮಲ್ಲು ಕುಂಬಾರ, ನಾಗೇಶ್, ವೆಂಕಟೇಶ್ ದೂರಿದರು.

ಜನರಿಗೂ ಆಹಾರ ಪದಾರ್ಥ, ತಂಪುಪಾನೀಯ, ಕಾಫಿ ಹಂಚುವ ಮೂಲಕ ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವಂತೆ ಜನಜಾಗೃತಿ ಮೂಡಿಸಿದರು.

ಸುಲಿಗೆ: ಇಬ್ಬರ ಬಂಧನ

ಬೆಂಗಳೂರು: ರಸ್ತೆಯಲ್ಲಿ ಒಂಟಿಯಾಗಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕೆಂಪೇಗೌಡನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಾಗಡಿ ರಸ್ತೆಯ ಅಗ್ರಹಾರ ದಾಸರಹಳ್ಳಿಯ ಸಾದಿಕ್ ಪಾಷಾ ಅಲಿಯಾಸ್ ಕಟ್ಟಪ್ಪ (26) ಹಾಗೂ ಪಾದರಾಯನಪುರದ ವಾಹಿದ್‌ಖಾನ್ ಅಲಿಯಾಸ್ ವಾಹಿದ್ (19) ಬಂಧಿತರು. ಇವರಿಂದ ₹ 5 ಲಕ್ಷ ಮೌಲ್ಯದ 11 ಮೊಬೈಲ್, ಎರಡು ದ್ವಿಚಕ್ರ ವಾಹನ ಹಾಗೂ ಕೃತ್ಯಕ್ಕೆ ಬಳಸಿದ್ದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಚಾಮರಾಜಪೇಟೆಯ 5ನೇ ಮುಖ್ಯರಸ್ತೆಯಲ್ಲಿ ಸುಗನ್‌ಚಂದ್ ಎಂಬುವರನ್ನು ಬೆದರಿಸಿದ್ದ ಆರೋಪಿಗಳು, ₹ 45 ಸಾವಿರ ನಗದು ಸುಲಿಗೆ ಮಾಡಿದ್ದರು. ಕೆಂಪೇಗೌಡನಗರ ಮುಖ್ಯರಸ್ತೆಯಲ್ಲಿ ಸೆ. 21ರಂದು ಬೆಳಿಗ್ಗೆ ಹೊರಟಿದ್ದ ರೋಹನ್ ಎಂಬುವವರನ್ನು ಹಿಂಬಾಲಿಸಿ ಮೊಬೈಲ್ ಕಿತ್ತೊಯ್ದಿದ್ದರು. ಕೃತ್ಯಗಳ ಬಗ್ಗೆ ದಾಖಲಾದ ಪ್ರಕರಣಗಳ ತನಿಖೆ ಕೈಗೊಂಡು ಆರೋಪಿಗಳನ್ನು ಸೆರೆಹಿಡಿಯಲಾಗಿದೆ' ಎಂದು ತಿಳಿಸಿದರು.

'ಇನ್ನೊಬ್ಬ ಆರೋಪಿ ಕಿಶೋರ್ ಅಲಿಯಾಸ್ ಕರಿಯಾ ಎಂಬಾತನ ಜೊತೆ ಸೇರಿಕೊಂಡು ಸಾದಿಕ್ ಪಾಷಾ ಹಾಗೂ ವಾಹಿದ್ ಖಾನ್ ಕೃತ್ಯ ಎಸಗುತ್ತಿದ್ದರು. ಮೂವರು ಸೇರಿ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಸುಲಿಗೆ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

ಆಂಬುಲೆನ್ಸ್‌ಗಳಿಗೆ ಜಿಪಿಎಸ್: ಹೈಕೋರ್ಟ್

ಬೆಂಗಳೂರು: 'ರಾಜ್ಯದಲ್ಲಿನ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆಂಬುಲೆನ್ಸ್‌ಗಳಿಗೆ ಜಿಪಿಎಸ್ ವ್ಯವಸ್ಥೆ ಅಳವಡಿಸಬೇಕು' ಎಂದು ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ, 'ಭಾರತ್ ಪುನರುತ್ಥಾನ ಟ್ರಸ್ಟ್' ಸಲ್ಲಿಸಿದ್ದ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಸರ್ಕಾರಿ ವಕೀಲರು, 'ಜಿಪಿಎಸ್ ಅಳವಡಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ 2020ರ ಮಾರ್ಚ್ 4ರಂದು ಸಾರಿಗೆ ಮತ್ತು ಪ್ರಾದೇಶಿಕ ರಸ್ತೆ ಸುರಕ್ಷತಾ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಆಂಬುಲೆನ್ಸ್‌ಗಳ ತಡೆ ರಹಿತ ಸಂಚಾರಕ್ಕೆ ಅಗತ್ಯ ವ್ಯವಸ್ಥೆ ಒದಗಿಸುವ ನಿಟ್ಟಿನಲ್ಲಿ ಜಿಪಿಎಸ್ ಅಳವಡಿಸುವಂತೆ ರಾಜ್ಯದಲ್ಲಿನ ಆಂಬುಲೆನ್ಸ್ ತಯಾರಿಕರಿಗೆ ನಿರ್ದೇಶನ ನೀಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿ, 'ಸುತ್ತೋಲೆ ಅನುಸಾರ ಇದುವರೆಗೆ ಎಷ್ಟು ವರದಿಗಳನ್ನು ಸಲ್ಲಿಸಲಾಗಿದೆ ಎಂಬ ಮಾಹಿತಿಯನ್ನು ಒದಗಿಸಿ' ಎಂದು ನಿರ್ದೇಶಿಸಿ ವಿಚಾರಣೆಯನ್ನು ಡಿಸೆಂಬರ್ 2ಕ್ಕೆ ಮುಂದೂಡಿದೆ.

ರಾಜ್ಯಪಾಲರಿಗೆ ಕೇರಳ ಹೈಕೋರ್ಟ್ ಸೂಚನೆ

'ಕುಲಪತಿಗಳ ವಿರುದ್ಧ ಕ್ರಮ ಬೇಡ'

ಕೊಚ್ಚಿ (ಪಿಟಿಐ): ಕಾರಣ ಕೇಳಿ ನೋಟಿಸ್ ನೀಡಿ ರುವ ರಾಜ್ಯದ ವಿವಿಧ ವಿಶ್ವವಿದ್ಯಾಲಯ ಗಳ ಕುಲಪತಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಕೇರಳ ಹೈಕೋರ್ಟ್ ಮಂಗಳವಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರಿಗೆ ಸೂಚಿಸಿದೆ.

ಈ ಕುರಿತು ಪ್ರತಿಕ್ರಿಯೆ ನೀಡಲು ಮತ್ತೆ 3 ದಿನಗಳ ಕಾಲಾವಕಾಶವನ್ನು ಕುಲಾಧಿಪತಿಯೂ ಆಗಿರುವ ರಾಜ್ಯಪಾಲರಿಗೆ ನ್ಯಾಯಮೂರ್ತಿ ದೇವನ್ ರಾಮಚಂದ್ರನ್ ಅವರು ನೀಡಿದ್ದಾರೆ. ಪ್ರಕರಣದ ವಿಚಾರಣೆಯನ್ನು ನವೆಂಬರ್ 17ರಂದು ಕೈಗೆತ್ತಿಕೊಳ್ಳುವುದಾಗಿಯೂ ಹೇಳಿದ್ದಾರೆ.

ಆರಿಫ್ ಖಾನ್ ಅವರು ರಾಜ್ಯದ 11 ವಿ.ವಿ ಕುಲಪತಿಗಳಿಗೆ ನೋಟಿಸ್ ಜಾರಿ ಮಾಡಿದ್ದರು. ತಮಗೆ ಕಾನೂನುಬಾಹಿರವಾಗಿ ನೋಟಿಸ್ ನೀಡಲಾಗಿದೆ ಎಂದು ಆರೋಪಿಸಿ ಕುಲಪತಿಗಳು ನ್ಯಾಯಾಲಯದ ಮೊರೆ ಹೋಗಿದ್ದರು.

ಎಲ್ಲಾ ಕುಲಪತಿಗಳು ನೋಟಿಸ್‌ಗೆ ಉತ್ತರ ನೀಡಿದ್ದಾರೆ ಎಂದು ರಾಜ್ಯಪಾಲರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಈಚೆಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ ಕುಲಪತಿಗಳ ನೇಮಕಾತಿ ಕಾನೂನುಬಾಹಿರವಾಗಿದ್ದು, ಈ ಹುದ್ದೆಗಳಲ್ಲಿ ಮುಂದುವರಿಯಲು ಅವರಿಗೆ ಯಾಕೆ ಅವಕಾಶ ನೀಡಬೇಕು ಎಂದು ರಾಜ್ಯಪಾಲರು ನೋಟಿಸ್‌ನಲ್ಲಿ ಕೇಳಿದ್ದರು.

ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮ ಪಾಲಿಸದೆ ನೇಮಕ ಮಾಡಿರುವ ಕಾರಣ ತಿರುವನಂತಪುರದ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಯ ನೇಮಕಾತಿಯನ್ನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಈಚೆಗೆ ಆದೇಶ ನೀಡಿತ್ತು.

ನೇಮಕಾತಿಗೆ ತಡೆಯಾಜ್ಞೆ ನೀಡಲು ನಿರಾಕರಣೆ: ತಿರುವನಂತಪುರದ ಅಬ್ದುಲ್ ಕಲಾಂ ತಾಂತ್ರಿಕ ವಿ.ವಿ ಪ್ರಭಾರ ಕುಲಪತಿಯ ನೇಮಕಾತಿಗೆ ತಡೆಯಾಜ್ಞೆ ನೀಡಲು ಕೇರಳ ಹೈಕೋರ್ಟ್ ನಿರಾಕರಿಸಿದೆ.

ಯುಜಿಸಿ ನಿಯಮಗಳಿಗೆ ಅನುಸಾರವಾಗಿಯೇ ತಾತ್ಕಾಲಿಕ ನೇಮಕಾತಿಗಳನ್ನು ಮಾಡಬೇಕು ಎಂದು ರಾಜ್ಯಪಾಲರ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಚಿತ್ರಾವಳಿ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಣ ವಿಭಾಗದ ಹಿರಿಯ ಪ್ರಾಧ್ಯಾಪಕಿ ಪ್ರೊ. ಹಸೀನ್ ತಾಜ್ ಅವರನ್ನು ಅಭಿನಂದಿಸಲಾಯಿತು. ಕುಲಪತಿ ಪ್ರೊ.ಡಾ. ಎಸ್.ಎಂ. ಜಯಕರ, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಕುಲಸಚಿವ ಮಹೇಶ್ ಬಾಬು, ಶಿಕ್ಷಣ ನಿಖಾಯದ ಅಧ್ಯಕ್ಷ ಪ್ರೊ. ಎಂ.ನಾರಾಯಣಸ್ವಾಮಿ ಇದ್ದರು.

ನಗರದಲ್ಲಿ ಮಂಗಳವಾರ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕನ್ನಡ ಕ್ರಿಯಾ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ ನಾಡು ನುಡಿಗೆ ದುಡಿದ ಸಾರಿಗೆ ಸಂಸ್ಥೆ ಕಾರ್ಮಿಕರಿಗೆ 'ಸಾರಿಗೆ ಕನ್ನಡ ರತ್ನ ಪ್ರಶಸ್ತಿ'ಯನ್ನು ಕನ್ನಡ ಸಾಹಿತ್ ಪರಿಷತ್ ಮಾಜಿ ಅಧ್ಯಕ್ಷ ಮನು ಬಳಿಗಾರ ಪ್ರದಾನ ಮಾಡಿದರು. ಪ್ರಾಧ್ಯಾಪಕಿ ವತ್ಸಲಾ ಮೋಹನ್, ಎಸ್.ಎಚ್. ಭುವನೇಶ್ವರ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ರಾಜ್ಯಾಧ್ಯಕ್ಷ ವ.ಚ.ಚನ್ನೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಎನ್. ಪ್ರಭುಸ್ವಾಮಿ, ಎಸ್. ಮೋಹನ್ ಕುಮಾರ್, ರಾಜ್ಯ ಖಜಾಂಚಿ ಹುಸೈನ್ ಕೆ.ಎಸ್. ಎಂ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಇದ್ದಾರೆ. —ಪ್ರಜಾವಾಣಿ ಚಿತ್ರ

ನಾಗಸಂದ್ರದ ವಿನಾಯಕ ನಗರ ಮತ್ತು ವಿಕಾಸನಗರದಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನಡೆದ ಹೊನಲು ಬೆಳಕಿನ ವಾಲಿಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ವಿಜಯ್ ವಾರಿಯರ್ಸ್ ತಂಡ. ಎಡದಿಂದ– ಕಿರಣ್, ಲಾಲು, ಸಂತೋಷ, ಧತ್ತಂಶ್ ವಿಜಯ್ (ನಾಯಕ), ಶ್ರೀನಿವಾಸ, ರಾಜಶೇಖರ (ಬಹುಮಾನ ಪ್ರಾಯೋಜಕ), ನಾರಾಯಣಸ್ವಾಮಿ, ಹರೀಶ, ವರುಣ್, ಜಗದೀಶ್, ರಘು. ಟೂರ್ನಿಯಲ್ಲಿ ಫೀನಿಕ್ಸ್ ಬ್ಲಾಸ್ಟರ್ ಎರಡು ಮತ್ತು ವಿನ್‌ಟೆಕ್ ಸ್ಮಾಷರ್ಸ್ ಮೂರನೇ ಸ್ಥಾನ ಗಳಿಸಿದವು.

ಪತ್ನಿ ಕೊಲೆ: ಪತಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚಿನ ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕೆ ಪತ್ನಿಯನ್ನು ಚಾಕುವಿನಿಂದ ಇರಿದು ಕೊಂದಿದ್ದ ಪತಿ ಪರಶುರಾಮ ದೇಸಾಯಿ ಎಂಬಾತನಿಗೆ ಜೀವಾವಧಿ ಶಿಕ್ಷೆ ವಿಧಿಸಿ ನಗರದ 72ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

2015ರ ಫೆ. 2ರಂದು ನಡೆದಿದ್ದ ಯಲ್ಲಮ್ಮ ಕೊಲೆ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಕೆ.ಎಸ್.ಜ್ಯೋತಿಶ್ರೀ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಎಚ್.ಆರ್. ಸತ್ಯವತಿ ವಾದಿಸಿದ್ದರು.

'ಯಾದಗಿರಿ ಜಿಲ್ಲೆಯ ಪರಶುರಾಮ ಹಾಗೂ ಯಲ್ಲಮ್ಮ ಕೆಲಸಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ಪೀಣ್ಯ ಠಾಣೆ ವ್ಯಾಪ್ತಿಯ ನೆಲಗೆದರನಹಳ್ಳಿಯಲ್ಲಿ ದಂಪತಿ ವಾಸವಿದ್ದರು. ಮದುವೆ ವೇಳೆ ವರದಕ್ಷಿಣೆ ಪಡೆದಿದ್ದ ಪರಶುರಾಮ, ಪುನಃ ₹ 3 ಲಕ್ಷ ನಗದು ಹಾಗೂ ಬೈಕ್ ವರದಕ್ಷಿಣೆ ತರುವಂತೆ ಪತ್ನಿಯನ್ನು ಪೀಡಿಸಲಾರಂಭಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವರದಕ್ಷಿಣೆ ತರಲು ಪತ್ನಿ ಯಲ್ಲಮ್ಮ ನಿರಾಕರಿಸಿದ್ದರು. ಇದರಿಂದ ಸಿಟ್ಟಾಗಿದ್ದ ಪರಶುರಾಮ, ಚಾಕುವಿನಿಂದ ಇರಿದು ಕೊಂದಿದ್ದ. ಪ್ರಕರಣ ಸಂಬಂಧ ಪೊಲೀಸರು, ಪರಶುರಾಮನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಕಾರು ಡಿಕ್ಕಿ: ವೃದ್ಧೆ ಸಾವು

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾರು ಗುದ್ದಿ ತೀವ್ರ ಗಾಯಗೊಂಡಿದ್ದ ವೃದ್ಧೆ ಮುನಿಯಮ್ಮ (75) ಅವರು ಸೋಮವಾರ ಮೃತಪಟ್ಟಿದ್ದಾರೆ.

'ನ. 6ರಂದು ನಡೆದಿದ್ದ ಅಪಘಾತದಲ್ಲಿ ಗಾಯಗೊಂಡಿದ್ದ ಮುನಿಯಮ್ಮ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅವರು ತೀರಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು. 'ಜಕ್ಕೂರು ಲೇಔಟ್ ನಿವಾಸಿ ಮುನಿಯಮ್ಮ, ಮೊಮ್ಮಗಳ ಜೊತೆಯಲ್ಲಿ ಶಿಡ್ಲಘಟ್ಟದಿಂದ ಬೆಂಗಳೂರಿಗೆ ಬಂದಿದ್ದರು. ಬಳ್ಳಾರಿ ರಸ್ತೆಯಲ್ಲಿ ಬಸ್‌ನಿಂದ ಇಳಿದು ಮನೆಯತ್ತ ನಡೆದುಕೊಂಡು ಹೊರಟಿದ್ದರು. ಅದೇ ಸಂದರ್ಭದಲ್ಲೇ ಕಾರೊಂದು ಮುನಿಯಮ್ಮ ಅವರಿಗೆ ಗುದ್ದಿತ್ತು. ಅದೃಷ್ಟವಶಾತ್ ಮೊಮ್ಮಗಳು ಅಪಾಯದಿಂದ ಪಾರಾಗಿದ್ದಾರೆ.'

'ಕಾರು ನಿಲ್ಲಿಸದೇ ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವ: ಮುಖ್ಯ ಅತಿಥಿಗಳು: ಡಿ.ಕೆ. ಸುರೇಶ್, ಎಂ. ಕೃಷ್ಣಪ್ಪ, ಮಂಜಮ್ಮ ಜೋಗತಿ, ಯೋಗಿ, ಅಮೋಘವರ್ಷ, ಸೂರಿ, ಆಯೋಜನೆ: ಶ್ರೀ ಅನ್ನಪೂರ್ಣೇಶ್ವರಿ ಕನ್ನಡ ಯುವಕರ ಸಂಘ, ಸ್ಥಳ: ಸೌಧಾಮಿನಿ ಕಲ್ಯಾಣ ಮಂಟಪ ಎದುರು, ಅಮೃತನಗರ ಮುಖ್ಯ ರಸ್ತೆ, ಬೆಳಿಗ್ಗೆ 10

7ನೇ ಘಟಿಕೋತ್ಸವ: ಮುಖ್ಯ ಅತಿಥಿಗಳು: ಎಂ. ವೆಂಕಯ್ಯ ನಾಯ್ಡು, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ರೇವಾ ವಿಶ್ವವಿದ್ಯಾಲಯ, ಸ್ಥಳ: ರುಕ್ಮಿಣಿ ಜ್ಞಾನ ಉದ್ಯಾನ, ಯಲಹಂಕ, ಬೆಳಿಗ್ಗೆ 10.30

ಸ್ಟಾರ್ ಸ್ಟಾರ್ಟಪ್ ಅವಾರ್ಡ್ಸ್: ಮುಖ್ಯ ಅತಿಥಿಗಳು: ಬಿ.ವಿ. ನಾಯ್ಡು, ಎಂ.ಆರ್. ಜಯರಾಮ್, ಎಂ.ಆರ್. ಸೀತಾರಾಮ್, ಎಂ.ಆರ್. ರಾಮಯ್ಯ, ಆಯೋಜನೆ: ರಾಮಯ್ಯ ಎವೊಲ್ಯೂಟ್, ಸ್ಥಳ: ಇಎಸ್‌ಬಿ ಸೆಮಿನಾರ್ ಹಾಲ್, ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಮಧ್ಯಾಹ್ನ 12

ಮೆಟ್ರೊ ಪುಸ್ತಕದ ಅಂಗಡಿ ಉದ್ಘಾಟನೆ: ಚಂದ್ರಶೇಖರ ಕಂಬಾರ, ಆಯೋಜನೆ: ಕೇಂದ್ರ ಸಾಹಿತ್ಯ ಅಕಾಡೆಮಿ, ಸ್ಥಳ: ನಾಡಪ್ರಭು ಕೆಂಪೇಗೌಡ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 12.30

ಕನ್ನಡದ ಹಬ್ಬ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಆಯೋಜನೆ: ಅಪೋಲೊ ಹಾಸ್ಪಿಟಲ್ಸ್ ಕನ್ಸಲ್ಟೆಂಟ್ಸ್ ಫೋರಮ್, ಸ್ಥಳ: ಡಿವಿಜಿ ವೇದಿಕೆ, ಕಲ್ಯಾಣಿ ಕಲಾ ಮಂದಿರ, ಬನ್ನೇರುಘಟ್ಟ ರಸ್ತೆ, ಸಂಜೆ 5

ಚಂದ್ರಶೇಖರ ಕಂಬಾರ

'ಕುಂಭಕರಣ' ನಾಟಕದ ದೃಶ್ಯ

'ಕುಂಭಕರಣ' ನಾಟಕ ಪ್ರದರ್ಶನ: ನಿರ್ದೇಶನ: ಯತೀಶ್ ಎನ್. ಕೊಳ್ಳೇಗಾಲ, ಸಂಗೀತ: ತಿಲಕ್ ಕುಮಾರ್, ಬೆಳಕಿನ ವಿನ್ಯಾಸ: ಮಧುಸೂದನ್ ವಿ.ಡಿ. ನೀನಾಸಂ, ವಸ್ತ್ರ ವಿನ್ಯಾಸ: ಕಾವ್ಯ, ಭ್ರಮರ ಕೆ. ಉಡುಪ, ರಂಗ ಸಜ್ಜಿಕೆ: ವಿನೋದ ಸಿ. ಮೈಸೂರು, ಅಮೋಘ ಸಣ್ಣಮನಿ, ಸ್ಥಳ: ರಂಗಶಂಕರ, ಸಂಜೆ 7.30

ಕಂದಾಯ ಸಚಿವ ಆರ್. ಅಶೋಕ್ ಹೇಳಿಕೆ

'ಫೆಬ್ರುವರಿ ಅಂತ್ಯದೊಳಗೆ ಕೆಂಪೇಗೌಡರ ಪ್ರತಿಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸೌಧದ ಮುಂಭಾಗದಲ್ಲಿ ಮುಂದಿನ ಫೆಬ್ರುವರಿ ತಿಂಗಳ ಒಳಗೆ ಕೆಂಪೇಗೌಡರ ಪ್ರತಿಮೆಯನ್ನು ಅನಾವರಣ ಮಾಡಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅನಾವರಣಗೊಳ್ಳುತ್ತಿರುವ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಕಂಚಿನ ಭವ್ಯ ಪ್ರತಿಮೆ ಹಾಗೂ ಕೆಂಪೇಗೌಡ ಥೀಮ್ ಪಾರ್ಕ್ ಉದ್ಘಾಟನೆ ಅಂಗವಾಗಿ ಸಂಗ್ರಹವಾದ ಮೃತ್ತಿಕೆ ಹಾಗೂ ಕೆಂಪೇಗೌಡ ರಥಗಳಿಗೆ ಚಾಲನೆ ನೀಡಿ ಮಾತನಾಡಿದರು.

'ಇಡೀ ದೇಶಕ್ಕೆ ಮಾದರಿಯಾದ ವಿಧಾನಸೌಧದಲ್ಲಿ ಕೆಂಪೇಗೌಡರ ಪ್ರತಿಮೆ ಇಲ್ಲದಿರುವುದು ಬೆಂಗಳೂರಿಗೆ ಅರ್ಥ ಇಲ್ಲ. ವಿಧಾನಸೌಧ ನಿರ್ಮಾಣವಾಗಿ 75 ವರ್ಷಗಳು ಕಳೆದರೂ ವಿಧಾನಸೌಧದ ಮುಂದೆ ಕೆಂಪೇಗೌಡರ ಪ್ರತಿಮೆ ಸ್ಥಾಪನೆಯಾಗಿಲ್ಲ. ಹೀಗಾಗಿ, ವಿಧಾನಸೌಧದ ಮುಂದೆ ಕೆಂಪೇಗೌಡರ ಪುತ್ಥಳಿಯನ್ನು ಅನಾವರಣ ಮಾಡಲಾಗುವುದು' ಎಂದರು.

'ಇದೇ 11ರಂದು ನಡೆಯಲಿರುವ ಕೆಂಪೇಗೌಡ ಪ್ರತಿಮೆಯ ಅನಾವರಣ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರನ್ನು ಕಟ್ಟಿದಂತಹ ಮಹಾಪುರುಷನನ್ನು ನೆನಪು ಮಾಡುವಂತಹ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಕೆಂಪೇಗೌಡರು ಕಟ್ಟಿರುವ ಬೆಂಗಳೂರು ದಿನೇ ದಿನೇ ಬೆಳೆಯುತ್ತಿದ್ದು, ಪ್ರಪಂಚದಲ್ಲೇ 25ನೇ ಸ್ಥಾನದಲ್ಲಿರುವುದು ಹೆಮ್ಮೆಯ ವಿಷಯ' ಎಂದು ಹೇಳಿದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, 'ರಾಜ್ಯದ ಎಲ್ಲ ಜಿಲ್ಲೆಗಳಿಂದ ಮೃತ್ತಿಕೆಯನ್ನು ಸಂಗ್ರಹಿಸಿ ಸಕಲ ಗೌರವಗಳೊಂದಿಗೆ ಬೆಂಗಳೂರಿಗೆ ಕಳುಹಿಸಲಾಗಿದೆ. ಬೆಂಗಳೂರಿನ ಒಟ್ಟು 28 ವಿಧಾನಸಭಾ ಕ್ಷೇತ್ರಗಳಿಂದ ಸಹ ಮೃತ್ತಿಕೆಯನ್ನು ಗೌರವಗಳೊಂದಿಗೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಳುಹಿಸುವ ಅಪರೂಪದ ಕಾರ್ಯಕ್ರಮ ಇದಾಗಿದೆ' ಎಂದರು.

ಚಿಕ್ಕಬಳ್ಳಾಪುರ ಕ್ಷೇತ್ರದ ಸಂಸದ ಬಿ.ಎನ್. ಬಚ್ಚೇಗೌಡ, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಕೆ. ಶ್ರೀನಿವಾಸ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸಂಗಪ್ಪ ಇದ್ದರು.

ಕಾರ್ಯಕ್ರಮದಲ್ಲಿ ಸಚಿವರಾದ ಎಸ್.ಟಿ. ಸೋಮಶೇಖರ್, ಆರ್. ಅಶೋಕ್ ಅವರು ಕೆಂಪೇಗೌಡರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು

ಜನ ಸಂಕಲ್ಪ ಯಾತ್ರೆಯಲ್ಲಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಮುಖ್ಯಮಂತ್ರಿ

‘ಅಲ್ಪಸಂಖ್ಯಾತರ ಏಳಿಗೆಗೆ ಕಾಂಗ್ರೆಸ್ ಮಾರಕ’

ಪ್ರಜಾವಾಣಿ ವಾರ್ತೆ

ಶಿರಹಟ್ಟಿ (ಗದಗ)/ಬ್ಯಾಡಗಿ (ಹಾವೇರಿ): ‘ಕಾಂಗ್ರೆಸ್ ಅಲ್ಪಸಂಖ್ಯಾತರಿಗೂ ಅನ್ಯಾಯ ಮಾಡಿದೆ. ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಏಳಿಗೆಗೆ ಮಾರಕವಾಗಿರುವುದೇ ಕಾಂಗ್ರೆಸ್ ಪಕ್ಷ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪ ಮಾಡಿದರು.

ಶಿರಹಟ್ಟಿ ಪಟ್ಟಣದಲ್ಲಿ ಮಂಗಳವಾರ ನಡೆದ ‘ಜನ-ಸಂಕಲ್ಪ’ ಯಾತ್ರೆಯಲ್ಲಿ ಅವರು ಮಾತನಾಡಿ, ವಕ್ಫ್ ಆಸ್ತಿಯನ್ನು ಕಾಂಗ್ರೆಸ್ ನಾಯಕರು ಲಪಟಾಯಿಸಿದ್ದು, ಸ್ವಂತಕ್ಕೆ ಬಳಸಿಕೊಂಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಬರುವ ದಿನಗಳಲ್ಲಿ ಪೂರಕ ತನಿಖೆ ನಡೆಸಲಾಗುವುದು. ಯಾರ‍್ಯಾರು ಮುಸಲ್ಮಾನರ ಆಸ್ತಿಯನ್ನು ಲಪಟಾಯಿಸಿದ್ದಾರೋ ಅವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಸಿದರು.

‘ರಾಹುಲ್ ಗಾಂಧಿ ಒಬ್ಬ ವಿಫಲ ನಾಯಕ’: ಬಳಿಕ ಬ್ಯಾಡಗಿಯಲ್ಲಿ ನಡೆದ ‘ಜನಸಂಕಲ್ಪ ಯಾತ್ರೆ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೊಮ್ಮಾಯಿ, ‘ರಾಹುಲ್ ಗಾಂಧಿ ಒಬ್ಬ ವಿಫಲ ನಾಯಕ. ಅವರು ಯಾವ ರಾಜ್ಯಕ್ಕೆ ಹೋಗುತ್ತಾರೋ, ಅಲ್ಲಿ ಕಾಂಗ್ರೆಸ್ ನೆಲಕಚ್ಚುತ್ತದೆ. ಕರ್ನಾಟಕದಲ್ಲಿ ಪಾದಯಾತ್ರೆ ಮಾಡಿ ಹೋಗಿದ್ದಾರೆ. ಹೀಗಾಗಿ ಇಲ್ಲಿ ಕಾಂಗ್ರೆಸ್ ಹುಲ್ಲು ಹುಟ್ಟುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ’ ಎಂದು ವ್ಯಂಗ್ಯವಾಡಿದರು.

ಗದಗ ಜಿಲ್ಲೆ ಶಿರಹಟ್ಟಿ ಪಟ್ಟಣದಲ್ಲಿ ಮಂಗಳವಾರ ನಡೆದ ಜನ ಸಂಕಲ್ಪ ಯಾತ್ರೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಸಚಿವರಾದ ಗೋವಿಂದ ಕಾರಜೋಳ, ಸಿ.ಸಿ.ಪಾಟೀಲ, ಶಾಸಕ ಬಿ.ಎಸ್‌.ಯಡಿಯೂರಪ್ಪ ಹಾಗೂ ಸಚಿವ ಬಿ.ಸಿ. ಪಾಟೀಲ ಇದ್ದಾರೆ

ಕುರಿಗಾಹಿಗಳಿಗೆ ಸಿಹಿಸುದ್ದಿ

‘ರಾಜ್ಯದ ಪ್ರತಿ ಕುರಿಗಾಹಿಗೆ 20 ಕುರಿಗಳು ಮತ್ತು ಒಂದು ಮೇಕೆ ನೀಡಲು ನಮ್ಮ ಸರ್ಕಾರ ತೀರ್ಮಾನಿಸಿದೆ. ಇದಕ್ಕಾಗಿ ₹354 ಕೋಟಿ ಮೀಸಲಿಟ್ಟಿದ್ದೇವೆ. ಆದರೆ ಸಿದ್ದರಾಮಯ್ಯ ಈ ಯೋಜನೆ ಜಾರಿಗೊಳಿಸುವುದು ಅಸಾಧ್ಯ ಎನ್ನುತ್ತಿದ್ದಾರೆ. ಸಿದ್ದರಾಮಯ್ಯನವರೇ ನಿಮ್ಮ ಆಡಳಿತ ಅವಧಿಯಲ್ಲಿ ಈ ಯೋಜನೆ ಜಾರಿಗೊಳಿಸಲು ಏಕೆ ಸಾಧ್ಯವಾಗಲಿಲ್ಲ?’ ಎಂದು ಬೊಮ್ಮಾಯಿ ಜರಿದರು.

224 ಕ್ಷೇತ್ರಗಳಲ್ಲೂ ರಥಯಾತ್ರೆ: ಸಿಎಂ

‘ಜನಸಂಕಲ್ಪ ಯಾತ್ರೆಯನ್ನು ನವೆಂಬರ್‌ನಲ್ಲಿ ಪೂರ್ಣಗೊಳಿಸಿ, ಡಿಸೆಂಬರ್‌ನಲ್ಲಿ ದಕ್ಷಿಣದಿಂದ ಬಿ.ಎಸ್.ಯಡಿಯೂರಪ್ಪ ಹಾಗೂ ಉತ್ತರದಿಂದ ನನ್ನ ನೇತೃತ್ವದಲ್ಲಿ ರಾಜ್ಯದ 224 ಕ್ಷೇತ್ರಗಳನ್ನೂ ರಥಯಾತ್ರೆ ಮೂಲಕ ತಲುಪಲಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಭಿವೃದ್ಧಿ ಯೋಜನೆಗಳನ್ನು ಜನರಿಗೆ ತಿಳಿಸಿ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವುದು ಯಾತ್ರೆಯ ಉದ್ದೇಶವಾಗಿದೆ’ ಎಂದರು.

ಕಾಂಗ್ರೆಸ್ ಜಂಘಾಬಲ ಉಡುಗಿದೆ: ಯಡಿಯೂರಪ್ಪ

‘ಬಿಜೆಪಿಯ ಜನಸಂಕಲ್ಪ ಯಾತ್ರೆಗೆ ಸೇರುವ ಜನಸ್ತೋಮವನ್ನು ನೋಡಿ ಕಾಂಗ್ರೆಸ್‌ನ ಜಂಘಾಬಲ ಉಡುಗಿ ಹೋಗಿದೆ. ಹಣ, ಹೆಂಡ, ತೋಳ್ಬಲ ಪ್ರದರ್ಶಿಸಿದ ಮತ್ತು ಜಾತಿಯ ವಿಷಬೀಜ ಬಿತ್ತಿದ ಕಾಂಗ್ರೆಸ್ ಅನ್ನು ಜನರು ಸಂಪೂರ್ಣ ತಿರಸ್ಕರಿಸಿದ್ದಾರೆ. ಮತ್ತೆ ಸಿಎಂ ಆಗುತ್ತೇನೆ ಎಂಬ ಭ್ರಮೆಯಲ್ಲಿರುವ ಸಿದ್ದರಾಮಯ್ಯನವರ ಕನಸು ಎಂದಿಗೂ ನನಸಾಗುವುದಿಲ್ಲ’ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಟೀಕಿಸಿದರು.

‘ಲಂಬಾಣಿ ತಾಂಡಾಗಳ ಪ್ರತಿ ಮನೆಗೂ ಹಕ್ಕುಪತ್ರ ವಿತರಣೆ’

‘ಲಂಬಾಣಿ ಸಮುದಾಯದವರ ಹಲವು ವರ್ಷಗಳ ಬೇಡಿಕೆ ಈಡೇರಿಸಲು ಸರ್ಕಾರ ಬದ್ಧವಾಗಿದೆ. ತಾಂಡಾಗಳನ್ನು ಕಂದಾಯ ಗ್ರಾಮಗಳಾಗಿ ಒಂದು ತಿಂಗಳಲ್ಲಿ ಮಾಡಲಾಗುವುದು. ತಾಂಡಾದ ಪ್ರತಿಯೊಂದು ಮನೆಗೂ ಹಕ್ಕುಪತ್ರಗಳನ್ನು ವಿತರಿಸಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ರೈತರಿಗಾಗಿ ಯಶಸ್ವಿನಿ ಯೋಜನೆ ಪ್ರಾರಂಭಿಸಲಾಗಿದ್ದು, ಇದಕ್ಕಾಗಿ ₹500 ಕೋಟಿ ಮೀಸಲಿಡಲಾಗಿದೆ. ನ.14ರಿಂದ ಈ ಯೋಜನೆಯ ಲಾಭ ಸಿಗಲಿದೆ’ ಎಂದರು.

ಬಿಜೆಪಿ ಕಿತ್ತೊಗೆಯಲು ಜನರ ಸಂಕಲ್ಪ: ಸಿದ್ದರಾಮಯ್ಯ

ಹುಬ್ಬಳ್ಳಿ: ‘ರಾಜ್ಯದಲ್ಲಿ ಬಿಜೆಪಿಯನ್ನು ಕಿತ್ತೊಗೆಯಲು ಜನರು ಸಂಕಲ್ಪ ಮಾಡಿದ್ದಾರೆ. ಹಾಗಾಗಿಯೇ, ಅವರು ನಡೆಸುತ್ತಿರುವ ಜನ ಸಂಕಲ್ಪ ಯಾತ್ರೆಗೆ ಜನರೇ ಬರುತ್ತಿಲ್ಲ. ಬಂದ ಅಲ್ಪಸ್ವಲ್ಪ ಜನರು ಹೊರಗೆ ಹೋಗದಂತೆ ಗೇಟ್‌ಗೆ ಬೀಗ ಹಾಕುತ್ತಿದ್ದಾರೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದರು.

ನಗರದಲ್ಲಿ ಮಂಗಳವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಕೈಗೊಂಡಿರುವ ಭಾರತ್ ಜೋಡೊ ಯಾತ್ರೆ ಬಿಜೆಪಿಯಲ್ಲಿ ತಳಮಳ ಹುಟ್ಟಿಸಿದೆ. ಅದಕ್ಕೆ ಪ್ರತಿಯಾಗಿ ಮಾಡುತ್ತಿರುವ ಜನ ಸಂಕಲ್ಪ ಯಾತ್ರೆ ವಿಫಲವಾಗಿದೆ. ಅವರು ಏನೇ ಮಾಡಿದರೂ, ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ’ ಎಂದರು.

‘ಆರ್ಥಿಕವಾಗಿ ಹಿಂದುಳಿದವರಿಗೆ (ಇಡಬ್ಲ್ಯುಎಸ್) ಮೀಸಲಾತಿ ಕುರಿತ ಸುಪ್ರೀಂ ಕೋರ್ಟ್ ತೀರ್ಪು ಗಮನಿಸಿಲ್ಲ. ಆದರೆ, ಮೀಸಲಾತಿ ನೀಡಲು ಅದರದ್ದೇ ಆದ ಮಾನದಂಡಗಳಿವೆ. ಅನುಚ್ಛೇದ 15 ಮತ್ತು 16ರ ಪ್ರಕಾರ, ಶೋಷಿತರಿಗೆ ಹಾಗೂ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮಾತ್ರ ಮೀಸಲಾತಿ ನೀಡಬಹುದಾಗಿದೆ’ ಎಂದು ಹೇಳಿದರು.

‘ರಾಜ್ಯ ಸರ್ಕಾರ ಟಿಪ್ಪು ಜಯಂತಿ ನಿಷೇಧಿಸಿರಬಹುದು. ಆದರೆ, ಜಯಂತಿ ಆಚರಣೆ ತಪ್ಪಲ್ಲ. ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಆಚರಣೆಗೆ ಅವಕಾಶ ನೀಡುವುದರ ಕುರಿತು, ಮಹಾನಗರ ಪಾಲಿಕೆ ತೀರ್ಮಾನ ಕೈಗೊಳ್ಳಲಿದೆ’ ಎಂದು ಪ್ರತಿಕ್ರಿಯಿಸಿದರು.

ಕೆಂಪು ಚಂದ್ರ ದರ್ಶನ

ಧಾರವಾಡದ ಹಳಿಯಾಳ ರಸ್ತೆಯ ಹದ್ದಿನಗುಡ್ಡದಲ್ಲಿ ಮಂಗಳವಾರ ಸಂಜೆ ಚಂದ್ರಗ್ರಹಣದ ಸಂದರ್ಭದಲ್ಲಿ ಕೆಂಪು ಚಂದ್ರ ಕಾಣಿಸಿಕೊಂಡಿದ್ದು ಹೀಗೆ

ದೇವಸ್ಥಾನ ಪ್ರವೇಶ ನಿರಾಕರಿಸಿ ಜಾತಿ ನಿಂದನೆ

8 ಮಂದಿ ವಿರುದ್ಧ ಪ್ರಕರಣ

ಬೆಟ್ಟದಪುರ (ಮೈಸೂರು ಜಿಲ್ಲೆ): ಪಿರಿಯಾಪಟ್ಟಣ ತಾಲ್ಲೂಕಿನ ಬೆಕ್ಕರೆ ಗ್ರಾಮದಲ್ಲಿ ಬಾಲಚಂದ್ರ ಬಸವೇಶ್ವರ ದೇವಾಲಯಕ್ಕೆ ಪೂಜೆ ಮಾಡಲು ತೆರಳಿದ್ದ ಪರಿಶಿಷ್ಟ ಸಮುದಾಯದ ವ್ಯಕ್ತಿಗೆ ಜಾತಿ ನಿಂದನೆ ಮಾಡಿ, ಜೀವ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿ, 8 ಮಂದಿ ವಿರುದ್ಧ ಎಸ್‌ಸಿ, ಎಸ್‌ಟಿಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

‘ಅ. 25ರಂದು ದೇವಸ್ಥಾನಕ್ಕೆ ತೆರಳಿದ್ದಾಗ ನಿವೃತ್ತ ಶಿಕ್ಷಕ ಬಸವೇಗೌಡ ಪ್ರವೇಶ ನಿರಾಕರಿಸಿದ್ದರು. ಅದನ್ನು ಪ್ರಶ್ನಿಸಿದಾಗ ಸ್ಥಳದಲ್ಲಿದ್ದ ಮುರಳೀಧರ, ಪ್ರಸನ್ನ, ಬಿ.ಆರ್. ರವಿಕುಮಾರ್, ಚಂದ್ರಶೇಖರ್, ಬಸವರಾಜು, ಬಿ.ಎಸ್. ಮಹದೇವ್, ನವೀನ್ ಅವರು ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಒಡ್ಡಿದ್ದಾರೆ’ ಎಂದು ಬಿ.ಎಸ್.ಮಹದೇವ ಅವರು ನ.4 ರಂದು ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

‘ಆರೋಪಿ ಬಸವೇಗೌಡ ಅವರು ನಾಮಧಾರಿಗೌಡ ಸಂಘವನ್ನು ಸ್ಥಾಪಿಸಿ, ಬಸವೇಶ್ವರ ದೇವರ ಹಬ್ಬ, ಜಾತ್ರೆ, ಕಾರ್ತಿಕ ಪೂಜೆ ಸಮಯದಲ್ಲಿ ಪರಿಶಿಷ್ಟರಿಗೆ ಅವಕಾಶ ಕೊಡದೇ, ಅಡ್ಡಿಪಡಿಸುತ್ತಿದ್ದರು. ಒಂದು ವರ್ಷದಿಂದ ಸಣ್ಣಪುಟ್ಟ ಜಗಳ ನಡೆದು ಠಾಣೆಯಲ್ಲಿ ತೀರ್ಮಾನವಾಗಿತ್ತು. ಅ.25 ರಂದು ಜಾತಿ ನಿಂದನೆ ಮಾಡಿ, ಪ್ರಾಣ ಬೆದರಿಕೆ ಹಾಕಿದ್ದಾರೆ’ ಎಂದು ದೂರಿದ್ದಾರೆ.

ಗ್ರಾಮದಲ್ಲಿ ಸಶಸ್ತ್ರ ಪೊಲೀಸ್ ತುಕಡಿ ನಿಯೋಜಿಸಲಾಗಿದೆ.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಸಮುದಾಯದ ದನಿ

‘ಅಮೃತ ಮಹೋತ್ಸವ’ದ ಪ್ರತಿಯೊಂದು ಅಕ್ಷರಗಳಿಗೂ ಪ್ರಜಾವಾಣಿ ಅರ್ಹತೆಯನ್ನು ಪಡೆದಿದೆ. ‘ಉತ್ + ಸವ’ ಎನ್ನುವ ಪದಕ್ಕೆ ‘ಕೊಳೆ’ಯನ್ನು ವಿಸರ್ಜಿಸುವುದು ಎನ್ನುವ ಅರ್ಥವೂ ಇದೆ. ಅಂದರೆ, ‘ಸಾಮಾಜಿಕರು’ ಮಾಡುವ ಸಾಮಾಜಿಕ ಕೊಳೆಗಳನ್ನು ಬಿಚ್ಚಿಡುವಲ್ಲಿ ಪ್ರಜಾವಾಣಿ ಎಂದೂ ಹಿಂದೆ ಬಿದ್ದಿಲ್ಲ.

ಸಾಹಿತ್ಯ ಲೋಕಕ್ಕೆ ಪ್ರಜಾವಾಣಿಯ ಕೊಡುಗೆ ಮಹತ್ತರ. ನವೋದಯ, ನವ್ಯ, ಬಂಡಾಯ ಸಾಹಿತ್ಯಗಳನ್ನು ರೂಪಿಸಿದ ಕೀರ್ತಿ ಪ್ರಜಾವಾಣಿಗೆ ಮಾತ್ರವೇ ಸಲ್ಲಬೇಕು. ಈ ಪತ್ರಿಕೆಯ ಸಂಪಾದಕೀಯ ಪುಟ ಸಂಗ್ರಹಯೋಗ್ಯ. ಚಿತ್ರಕಲೆ, ನಾಟಕಗಳೂ ಕರ್ನಾಟಕದಲ್ಲಿ ಬೆಳಗಿದ್ದು ಈ ಪತ್ರಿಕೆಯ ಮೂಲಕ. ಎಡ-ಬಲಗಳ ಕಾದಾಟಗಳಿಲ್ಲದ ವಸ್ತುನಿಷ್ಠ - ಪತ್ರಿಕೆ.

ನನ್ನ ದಿನ ಆರಂಭವಾದಾಗ, ಒಂದು ನಿಮಿಷ ಕೈಗೆ ಸಿಗುವುದು ತಡವಾದರೂ ನನಗೆ ವಿಪರೀತ ಟೆನ್ಶನ್ ಕೊಡುವ, ‘ಪ್ರಜಾವಾಣಿ’, ಪ್ರಜೆ ಎನ್ನುವ ಸಮುದಾಯದ ದನಿ!

ಪ್ರೊ.ಕೆ.ಈ.ರಾಧಾಕೃಷ್ಣ, ಬೆಂಗಳೂರು

ಪತ್ರಿಕೋದ್ಯಮದ ಮೊದಲ ಗುರು

ಬಾಲ್ಯದಿಂದಲೂ ನಾನು ಪ್ರಜಾವಾಣಿ ಓದುಗ. ಈ ಪತ್ರಿಕೆ ನನ್ನ ಜೀವನ ಸಂಗಾತಿ. ವಸ್ತುನಿಷ್ಠ ವರದಿಗಾರಿಕೆ, ನಿಷ್ಪಕ್ಷಪಾತ ಧೋರಣೆ, ವೈಭವೀಕರಣವಿಲ್ಲದ ಸಮತೋಲಿತ ವರದಿಗಾರಿಕೆ ಇದರ ಹೆಗ್ಗಳಿಕೆ. ಪ್ರಚೋದನಾತ್ಮಕ ಶೀರ್ಷಿಕೆಗಳಾಗಲಿ, ಸುದ್ದಿಗಳಾಗಲಿ ಕಂಡುಬರದೇ, ಜನಮನ್ನಣೆ ಗಳಿಸಿದ ಪ್ರಜಾವಾಣಿ ನನ್ನಲ್ಲಿ ಬರವಣಿಗೆಯ ಕಿಚ್ಚುಹೊತ್ತಿಸುವಲ್ಲಿ ಯಶಸ್ವಿಯಾಯಿತು.

ಪದವಿಪೂರ್ವ ಶಿಕ್ಷಣ ಪಡೆಯುತ್ತಿದ್ದಾಗ ಸ್ಥಳೀಯ ಪತ್ರಿಕೆಗಳಲ್ಲಿ ನನ್ನ ಲೇಖನಗಳು ಪ್ರಕಟಗೊಂಡಾಗ ಸಂತಸಪಟ್ಟಿದ್ದೆ. ಪತ್ರಕರ್ತನಾಗಬೇಕೆಂಬ ಆಸೆ ಹೊಂದಿದ್ದೆ. 1986ರಲ್ಲಿ ವಾಚಕರವಾಣಿಯಲ್ಲಿ ‘ಏಡ್ಸ್ ಸೊಳ್ಳೆಗಳಿಂದ ಹರಡುವುದೇ’ ಎಂಬ ನನ್ನ ಮೊದಲ ಪತ್ರ ಬಾಕ್ಸ್ ಆಗಿ ಪ್ರಕಟವಾದಾಗ ಸಂತಸಪಟ್ಟಿದ್ದೆ. ನಂತರ ವಿವಿಧ ಪುರವಣಿಗಳಲ್ಲೂ ನನ್ನ ಲೇಖನಗಳು ಪ್ರಕಟಗೊಂಡವು. ಹೀಗಾಗಿ ‘ಪ್ರಜಾವಾಣಿ’ಯೇ ‘ಪತ್ರಿಕೋದ್ಯಮದ ನನ್ನ ಮೊದಲು ಗುರು’ ಎಂದು ನಿಸ್ಸಂದೇಹವಾಗಿ ಹೇಳಬಲ್ಲೆ.

ಬಾಲ್ಯದ ನನ್ನ ಉತ್ಸಾಹಕ್ಕೆ ನೀರೆರೆದು ಪೋಷಿಸಿದ ‘ಪ್ರಜಾವಾಣಿ’ಗೆ ಮನೆಯ ಮೇಜಿನಲ್ಲಿ ಮೊದಲ ಪ್ರಾಶಸ್ತ್ಯ ಸಲ್ಲುತ್ತದೆ.

ದಿನೇಶ್ ಕೆ.ಕಾರ್ಯಪ್ಪ, ಮಡಿಕೇರಿ.

ಬಿಡಿಸಲಾಗದ ನಂಟು...

ನನ್ನ ಹಾಗೂ ಪ್ರಜಾವಾಣಿ ಸಂಬಂಧ 1966ರಿಂದ ಶುರುವಾಯಿತು. ಕಾಲೇಜು ಗ್ರಂಥಾಲಯದಲ್ಲಿ ಮೊದಲು ಕಂಡದ್ದು. ಅಲ್ಲಿಂದ ಇಲ್ಲಿಯವರೆಗೂ ಸಂಬಂಧ ಮುಂದುವರೆದಿದೆ. ಅಂದಿನಿಂದ ಪ್ರಜಾವಾಣಿ ನನ್ನ ಜೀವನದ ಒಂದು ಭಾಗವೇ ಆಗಿದೆ. ಬೇರೆ ಪತ್ರಿಕೆಗಳನ್ನು ಎಷ್ಟೇ ಓದಿದರೂ ಪ್ರಜಾವಾಣಿ ಇಲ್ಲದಿರೆ, ಪುಷ್ಕಳ ಊಟ ಮಾಡಿದರೂ ತುದಿಯಲ್ಲಿ ಮಜ್ಜಿಗೆ ಅನ್ನ ಉಣ್ಣದಿದ್ದರೆ ಹೇಗನಿಸುತ್ತದೆಯೊ ಹಾಗೆ. ಛೂ ಬಾಣ ಅಂಕಣ ನನಗೆ ಅಚ್ಚುಮೆಚ್ಚಿನದಾಗಿತ್ತು.

ನಾನು ಉತ್ತರ ಕರ್ನಾಟಕದ ವಿವಿಧ ಗ್ರಾಮದಲ್ಲಿ, ಪಟ್ಟಣದಿಂದ ದೂರವಾಗಿದ್ದರೂ ಪ್ರಜಾವಾಣಿ ಓದನ್ನು ಬಿಟ್ಟಿರಲಿಲ್ಲ. ದಿನವೂ ಪತ್ರಿಕೆ ಸಿಗುತ್ತಿರಲಿಲ್ಲ. ವಾರ- ಹದಿನೈದು ದಿನಗಳ ನಂತರವಾದರೂ ಪತ್ರಿಕೆಯನ್ನು ನನ್ನದಾಗಿಸಿಕಂಡು ಅಷ್ಟನ್ನೂ ಒಂದರ ನಂತರ ಒಂದರಂತೆ ಓದುತ್ತಿದ್ದೆ. ಯಾವುದಾದರೂ ಹೊಸ ವಿದ್ಯಮಾನಗಳನ್ನು ಬೇರೆ ಪತ್ರಿಕೆಗಳಲ್ಲಿ ಓದಿದಾಗ ಭರವಸೆ, ಅದರ ಬಗೆಗೆ ನಂಬಿಕೆ ಮೂಡುವುದಿಲ್ಲ. ಪ್ರಜಾವಾಣಿಯೊಂದೇ ಸತ್ಯ ಹೇಳುತ್ತದೆ ಎಂದು ನಂಬಿದ್ದೇನೆ.

ಡಾ.ಈಶ್ವರಶಾಸ್ತ್ರಿ ಮೋಟಿನಸರ, ವಿಶ್ರಾಂತ ಉಪನಿರ್ದೇಶಕ ‘ಆಯುಷ್’ ಇಲಾಖೆ, ಶಿರಸಿ

ಕನ್ನಡದ ವಿವೇಕ

1964, ನನ್ನ 15ನೇ ವಯಸ್ಸಿನಿಂದ ಪ್ರಜಾವಾಣಿ ತಪ್ಪದೇ ಓದುತ್ತಿರುವೆ. ನಿದ್ರಾಹಾರಗಳಂತೆ ಪ್ರಜಾವಾಣಿಯು ದೈನಂದಿನ ನನ್ನ ಅಗತ್ಯತೆಗಳಲ್ಲೊಂದಾಗಿದೆ. 1966ರಲ್ಲಿ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ನಾನು ಓದುತ್ತಿದ್ದ ಕಾಲೇಜು ನನ್ನ ವಾಸಸ್ಥಳದಿಂದ 6 ಕಿ.ಮೀ ದೂರವಿತ್ತು. ಸಿಟಿ ನಿಲ್ದಾಣದಿಂದ ಕಾಲೇಜು ಸಮೀಪದ ಕಂಟೋನ್ಮೆಂಟ್ ಸ್ಟೇಷನ್‌ಗೆ ಹೋಗಲು ಟಿಕೆಟ್ ದರ 10 ಪೈಸೆ. ಆಗ ಪ್ರಜಾವಾಣಿ ಪತ್ರಿಕೆ ದರ 9 ಪೈಸೆ. ಪತ್ರಿಕೆ ಅಥವಾ ರೈಲು ಎರಡರಲ್ಲಿ ಒಂದನ್ನು ನಾನು ಆಯ್ಕೆಮಾಡಿಕೊಳ್ಳಬೇಕಾಗಿತ್ತು. ಮನಸ್ಸಿನ ಆಣತಿಯಂತೆ ಪ್ರಜಾವಾಣಿ ಆಯ್ಕೆ ಮಾಡಿಕೊಂಡೆ.

ಅಂದಿನಿಂದ ಇಂದಿನವರೆಗೆ ಪ್ರಜಾವಾಣಿಯೊಂದಿಗೆ ಬೆಳೆದೆ, ಬೆಳೆಯುತ್ತಿರುವೆ. ನಂತರ ಸುಧಾ, ಮಯೂರ ಸೇರಿಕೊಂಡವು. ಟಿಎಸ್ಸಾರ್ ಅವರ ಛೂಬಾಣ ಅಂಕಣ ಅಚ್ಚುಮೆಚ್ಚು. ಸಮಾಜ ಇನ್ನೂ ಸೂಕ್ಷ್ಮತೆ ಕಳೆದುಕೊಂಡಿದ್ದಿಲ್ಲವಾದ್ದರಿಂದ ಛೂಬಾಣ ಬರಹಗಳು ತನಿಖಾ ಆಯೋಗದ ವರದಿಗಳಿಗಿಂತ ಹೆಚ್ಚಿನ ಪರಿಣಾಮ ಬೀರುತ್ತಿದ್ದವು. ಪತ್ರಿಕೆಯ ವರದಿಗಳು ಸತ್ಯಕ್ಕೆ, ನಂಬಿಕೆಗೆ ಚ್ಯುತಿ ಬರದಂತೆ ಪ್ರಕಟವಾಗುತ್ತಿದ್ದವು. ಈಗಲೂ ಅದೇ ವಿಶ್ವಾಸ ಉಳಿಸಿಕೊಂಡಿದೆ.

ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪ್ರಜಾವಾಣಿಯ ಕೊಡುಗೆ ಅಪಾರ. ವೈಯಕ್ತಿಕವಾಗಿ ನನಗೆ ಅತ್ಯಂತ ಅಭಿಮಾನದ ಸಂಗತಿ ಎಂದರೆ ಪತ್ರಿಕೆಯ ಸಂಸ್ಥಾಪಕ ಕೆ.ಎನ್. ಗುರುಸ್ವಾಮಿ ಯವರು ಅವಿಭಾಜ್ಯ ಬಳ್ಳಾರಿ ಜಿಲ್ಲೆಯ ಕಣೇಕಲ್ (ಪ್ರಸ್ತುತ ಆಂಧ್ರಪ್ರದೇಶದಲ್ಲಿದೆ) ನವರೆಂಬುದು. ಒಟ್ಟಿನಲ್ಲಿ ಕರ್ನಾಟಕದ ಸಾಕ್ಷೀ ಪ್ರಜ್ಞೆ ಪ್ರಜಾವಾಣಿ.

ಸಿ. ಚನ್ನಬಸವಣ್ಣ, ಲೋಹಿಯಾ ಪ್ರಕಾಶನ, ಬಳ್ಳಾರಿ

ಗುರುನಾನಕ್‌ರ 553ನೇ ಜಯಂತಿ ಪ್ರಯುಕ್ತ ಸಿಖ್ ಸಮುದಾಯದವರು ಬೀದರ್‌ನಲ್ಲಿ ಮಂಗಳವಾರ ಧಾರ್ಮಿಕ ಧ್ವಜ ಹಾಗೂ ಶಸ್ತ್ರಗಳೊಂದಿಗೆ ಮೆರವಣಿಗೆ ನಡೆಸಿದರು —ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ರಾಕೆಟ್ ಎಂಜಿನ್ ಪರೀಕ್ಷೆ

ಬೆಂಗಳೂರು: ಅಗ್ನಿಕುಲ್ ಕಾಸ್ಮೋಸ್ ನವೋದ್ಯಮ ಅಭಿವೃದ್ಧಿಪಡಿಸಿರುವ ರಾಕೆಟ್ ಎಂಜಿನ್ ಅನ್ನು ಕೇರಳದ ತಿರುವನಂತಪುರದಲ್ಲಿರುವ ವಿಕ್ರಂ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದಲ್ಲಿ ಪರೀಕ್ಷೆಗೆ ಒಳಪಡಿಸಲಾಯಿತು.

ವಿಎಸ್‌ಎಸ್‌ಸಿಯ ಥುಂಬಾ ರಾಕೆಟ್ ಉಡ್ಡಯನ ಕೇಂದ್ರದಲ್ಲಿರುವ ಪರೀಕ್ಷಾ ಕೇಂದ್ರದಲ್ಲಿ ಅಗ್ನಿಲಿಟ್ ಎಂಜಿನ್ ಅನ್ನು 15 ಸೆಕೆಂಡ್‌ಗಳ ಕಾಲ ಪರೀಕ್ಷೆಗೆ ಒಳಪಡಿಸಲಾಯಿತು. ಪರೀಕ್ಷೆ ಯಶಸ್ವಿಯಾಯಿತು. ಇಸ್ರೊ ಮತ್ತು ಅಗ್ನಿಕುಲ್ ಒಪ್ಪಂದದ ಭಾಗವಾಗಿ ಪರೀಕ್ಷೆ ನಡೆಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಉದ್ಯೋಗ ವಾಣಿ

HIRING FOR UAE
BIKE RIDERS FOR DELIVERY
• Employment Visa • AED 7.5 per Delivery + Bonus • Age limit - 22 to 45
• INR 85K to 1.3L per month • Can earn upto 4000-6000 AED/Month
• Online Interview • Joining date 20th Dec 2022 • 10 hrs+ OT + insurance + Medical provided by company • Indian Two Wheeler License Holder can apply
» AC Technicians (02 nos) » Electrician 03 nos » Plumber (02 nos) » Mason (02 nos) » Steel Fixer (01 no) » Helper (02 nos)
Interview 12th, 13th, 14th Nov. @ Bangalore office
Interested candidate may send their resume to delboy062@gmail.com Ph: 9025656715, 7353300095
Career Zone, 1st Floor, Hosur Main Road, Madiwala, Bangalore 560068
LIC. No. B-1102/KAR/PER/100/5/9797/2021

Jajee Foundations' (R)
Gurukul Independent PU College
New Jajee Block, Station Road, Kalaburagi.
APPOINTMENT NOTIFICATION
A Candidate who can handle Theory & NEET Classes may apply for the following posts

Sl No.	Subject	No of Posts	Experience
1	Chemistry	2	5 Years & Above
2	Economics	1	5 Years & Above

Experience & Pay Scale : As per the norms of PU Board, Salary is negotiable in case of Competent candidates.
Interview & Demo Details
Mode of Selection: • Share the CV through Whatsapp Cell 9036123111 on or before 15.11.2022 • Online Demo through ZOOM App. • If shortlisted in the online demo, then demo at the campus will be arranged.
Sd/- Principal Harish S Deshpande

www.esafbank.com
ESAF SMALL FINANCE BANK Joy of Banking
WE'RE HIRING
■ Branch Heads ■ Tellers
■ Branch Operations Managers
■ Sales Officers
Only candidates who have completed their graduation may apply.
Openings across: Karnataka
Walk-in Interview:
ESAF Regional Office, No. 137, Prakash Square,
Old Madras Road, Near Ulsoor Metro Station, Bengaluru
Date & Time: 10th to 12th Nov. 2022, 10 a.m. to 5 p.m.
Interested candidates can register via the link or scan the QR code.
www.esafbank.com/career/latestjobs
Regd. & Corp. Office: ESAF Small Finance Bank, ESAF Bhavan, Mannuthy P.O., Thrissur, Kerala 680651 81380 43332
ESFBG_1367_03_11_22

ಆಡಿಯೊ ಅಂಶ ಸತ್ಯಕ್ಕೆ ದೂರ: ಪಾಲಿಕೆ ಆಯುಕ್ತರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಜಿಲ್ಲಾ ಉಸ್ತುವಾರಿ ಸಚಿವರಿಗೆ ಆಯುಕ್ತರು ₹ 15 ಲಕ್ಷ ನೀಡಿದ್ದಾರೆ’ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಹೇಳಿದ್ದಾರೆ.

‘ಗುತ್ತಿಗೆದಾರ ಕೃಷ್ಣ ಅವರು ಬಹಿರಂಗಗೊಳಿಸಿರುವ ಆಡಿಯೊದಲ್ಲಿನ ಧ್ವನಿ ಪಾಲಿಕೆಯ ವ್ಯವಸ್ಥಾಪಕ ವೆಂಕಟೇಶ್ ಅವರದ್ದೇ ಎಂದು ಹೇಗೆ ಹೇಳುವುದು, ಮಾತುಕತೆ ವೇಳೆ ಆ ಧ್ವನಿ ಕೂಡ ಸಚಿವರ ಹೆಸರು ಹೇಳಿಲ್ಲ. ಅವರೊಂದಿಗೆ ಮಾತನಾಡಿದ್ದಾರೆ ಎನ್ನಲಾದ ವ್ಯಕ್ತಿಯೇ ಸಚಿವರ ಹೆಸರನ್ನು ಹೇಳುತ್ತಾರೆ. ಈ ರೀತಿ ತೇಜೋವಧೆ ಮಾಡುವುದು ಸರಿಯಲ್ಲ’ ಎಂದು ಅವರು ಮಂಗಳವಾರ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ನಾಯಕರ ತುಳಿಯುವ ಯತ್ನ: ‘ಜಕಾತಿ ವಸೂಲಿ ಮಾಡುವ ಟೆಂಡರ್ ಪಡೆಯಲು ಪಾಲಿಕೆ ವ್ಯವಸ್ಥಾಪಕ ವೆಂಕಟೇಶ್ ಅವರಿಗೆ ಹಣದ ಆಮಿಷವೊಡ್ಡಿ ಖೆಡ್ಡಾಕ್ಕೆ ಕೆಡವಲಾಗಿದೆ. ಇದಕ್ಕೆ ಸಂಬಂಧವೇ ಇಲ್ಲದ ಸಚಿವ ಬೈರತಿ ಬಸವರಾಜ ಅವರ ಹೆಸರನ್ನು ಎಳೆದು ತರಲಾಗಿದೆ. ಇದು ಹಿಂದುಳಿದ ವರ್ಗಗಳ ನಾಯಕರನ್ನು ತುಳಿಯಲು ಕಾಂಗ್ರೆಸ್ ಮಾಡಿದ ಪಿತೂರಿ. ಹಿಂದೆ ಕೆ.ಎಸ್. ಈಶ್ವರಪ್ಪ ಸಚಿವ ಸ್ಥಾನ ಕಳೆದುಕೊಳ್ಳುವಂತೆ ಮಾಡಿದ ತಂತ್ರವನ್ನೇ ಇಲ್ಲಿ ಬಳಸಲಾಗಿದೆ’ ಎಂದು ಬಿಜೆಪಿ ರೈತ ಮೋರ್ಚಾದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ.ಎಂ. ಸತೀಶ್ ಕೊಳೇನಹಳ್ಳಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಲೈಂಗಿಕ ಕಿರುಕುಳದ ಆರೋಪದಲ್ಲಿ ಬಂಧಿತರಾಗಿರುವ ಶಿವಮೂರ್ತಿ ಶರಣರು

ಮುರುಘಾ ಶರಣರ ಬಂಧನ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ನ್ಯಾಯಾಂಗ ಬಂಧನದ ಅವಧಿಯನ್ನು ನ.14ರವರೆಗೆ ವಿಸ್ತರಿಸಿ ಜಿಲ್ಲಾ ನ್ಯಾಯಾಲಯ ಆದೇಶಿಸಿದೆ.

ನ್ಯಾಯಾಂಗ ಬಂಧನದ ಅವಧಿ ಮುಗಿದಿದ್ದರಿಂದ ಆರೋಪಿಗಳಾದ ಶಿವಮೂರ್ತಿ ಮುರುಘಾ ಶರಣರು, ಹಾಸ್ಟೆಲ್‌ನ ಮಹಿಳಾ ವಾರ್ಡನ್ ಹಾಗೂ ಪರಮಶಿವಯ್ಯ ಅವರನ್ನು ಎರಡನೇ ಜಿಲ್ಲಾ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಮಂಗಳವಾರ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶೆ ಬಿ.ಕೆ. ಕೋಮಲಾ, ಶಿವಮೂರ್ತಿ ಮುರುಘಾ ಶರಣರು ಹಾಗೂ ಪರಮಶಿವಯ್ಯ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಆರು ದಿನಗಳ ಕಾಲ ವಿಸ್ತರಿಸಿದರು.

ಎರಡನೇ ಪೋಕ್ಸೊ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ಆರೋಪಿಯಾದ ಹಾಸ್ಟೆಲ್‌ನ ಮಹಿಳಾ ವಾರ್ಡನ್ ಅವರನ್ನು ವಿಚಾರಣೆಗಾಗಿ ವಶಕ್ಕೆ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ, ನ.10ರ ಮಧ್ಯಾಹ್ನ 1 ಗಂಟೆಯವರೆಗೆ ಅವರನ್ನು ಪೊಲೀಸ್ ವಶಕ್ಕೆ ನೀಡಿ ನ್ಯಾಯಾಧೀಶರು ಆದೇಶಿಸಿದರು.

ತನಿಖಾಧಿಕಾರಿ ಬಾಲಚಂದ್ರ ನಾಯ್ಕ್ ನೇತೃತ್ವದ ಪೊಲೀಸರ ತಂಡ ಆರೋಪಿಯನ್ನು ಮಹಿಳಾ ಪೊಲೀಸ್ ಠಾಣೆಗೆ ಕರೆದೊಯ್ದು ವಿಚಾರಣೆಗೆ ಒಳಪಡಿಸಿತು.

ಮುರುಘಾ ಮಠಕ್ಕೆ ಆಡಳಿತಾಧಿಕಾರಿ: ವರದಿ ಆಧರಿಸಿ ತೀರ್ಮಾನ’

ಹೊಸದುರ್ಗ (ಚಿತ್ರದುರ್ಗ): ಮುರುಘಾ ಮಠದ ಆಡಳಿತ ವೈಖರಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯು ಚಿತ್ರದುರ್ಗದ ಜಿಲ್ಲಾಧಿಕಾರಿಯಿಂದ ವರದಿ ಕೇಳಿದೆ. ಸರ್ಕಾರ ವರದಿ ಆಧರಿಸಿ ಆಡಳಿತಾಧಿಕಾರಿ ನೇಮಕ ಕುರಿತು ಶೀಘ್ರ ತೀರ್ಮಾನ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಮುರುಘಾ ಮಠಕ್ಕೆ ಆಡಳಿತಾಧಿಕಾರಿ ನೇಮಿಸುವಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಕೆಯಾಗಿದೆ. ಮಠದ ವಿಚಾರಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಸಾಕಷ್ಟು ವರದಿಗಳು ಪ್ರಸಾರವಾಗುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಸರಿಯಾದ ನಿರ್ಧಾರ ಕೈಗೊಳ್ಳುವ ಅಗತ್ಯವಿದೆ. ವಸ್ತುನಿಷ್ಠ ವರದಿ ನೀಡುವಂತೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ’ ಎಂದು ಮಂಗಳವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಶರಣರದ್ದು ಅಕ್ಷಮ್ಯ ಅಪರಾಧ: ಯಡಿಯೂರಪ್ಪ

ಉಡುಪಿ: ‘ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಅಕ್ಷಮ್ಯ ಅಪರಾಧ ಮಾಡಿದ್ದಾರೆ’ ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಮಂಗಳವಾರ ಆದಿ ಉಡುಪಿ ಹೆಲಿಪ್ಯಾಡ್‌ನಲ್ಲಿ ಮಾತನಾಡಿದ ಅವರು, ‘ಮುರುಘಾ ಶರಣರು ಕೆಳಮಟ್ಟಕ್ಕೆ ಇಳಿಯುತ್ತಾರೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಕಾನೂನಿನ ಪ್ರಕಾರ ತಕ್ಕ ಶಿಕ್ಷೆಯಾಗಬೇಕು’ ಎಂದರು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
भारत इलेक्ट्रॉनिक्स BHARAT ELECTRONICS QUALITY. TECHNOLOGY. INNOVATION.
(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ರಕ್ಷಣಾ ಎಲೆಕ್ಟ್ರಾನಿಕ್ಸ್ ಕಂಪನಿಗೆ ಈ ಕೆಳಕಂಡ ಉತ್ಕೃಷ್ಟ ವೃತ್ತಿಪರ ಇಂಜಿನಿಯರ್‌ಗಳ ಆವಶ್ಯಕತೆ ಇದೆ.
ನೌಕಾ ವ್ಯವಸ್ಥೆಗಳು (ಎಸ್ ಮತ್ತು ಸಿ ಎಸ್) ಎಸ್.ಬಿ.ಯು. ಗೆ ತನ್ನ ಗ್ರಾಹಕ ಸ್ಥಳಗಳಾದ ಪೋರ್ಟ್ ಬ್ಲೇರ್, ಗುರಗಾಂವ್, ಕೊಚ್ಚಿ, ಗಾಂಧೀನಗರ್, ಕೋಲ್ಕತ್ತ, ವೈಜಾಗ್, ಚೆನ್ನೈ, ಮುಂಬಯಿ ಮತ್ತು ಬೆಂಗಳೂರಿನಲ್ಲಿ ನಿಯುಕ್ತಿಗೊಳಿಸುವ ಸಲುವಾಗಿ "ಯೋಜನಾ ಇಂಜಿನಿಯರ್ - ೧ ರ " ಹುದ್ದೆಗೆ ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ, ಮಾಹಿತಿ ವಿಜ್ಞಾನ, ಮಾಹಿತಿ ತಂತ್ರಜ್ಞಾನದ ವಿಷಯದಲ್ಲಿ ಅನುಭವಿ ಇಂಜಿನಿಯರ್‌ಗಳ ಆವಶ್ಯಕತೆ ಇದೆ.

ಕ್ರ. ಸಂ.	ಹುದ್ದೆ / ಶ್ರೇಣಿ	ಹುದ್ದೆಗಳ ಸಂಖ್ಯೆ	ದಿನಾಂಕ ೦೧.೧೧.೨೦೨೨ ರಂತೆ ಗರಿಷ್ಠ ವಯೋಮಿತಿ	ಮೀಸಲಾತಿ
೧.	ಯೋಜನಾ ಇಂಜಿನಿಯರ್ -೧ (ಎಸ್ ಎಸ್ ಐ)	೫	೩೨ ವರ್ಷಗಳು	ಸಾಮಾನ್ಯ-೩ ಇ.ಹಿ.ವ.-೨

ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್ ಸೈಟ್ www.bel-india.in ಅನ್ನು ವೀಕ್ಷಿಸಲು ಕೋರಲಾಗಿದೆ.
Sd/- Sr. DGM (HR/NS)
Date: 09.11.2022
‘हर एक काम देश के नाम’

ಶ್ರೀ ಫಲಾಹಾರ ಶಿವಯೋಗೀಶ್ವರ ಶಿಕ್ಷಣ ಸಮಿತಿ ಮ-ಸುರೇಬಾನ
ತಾ॥ ರಾಮದುರ್ಗ ಜಿ॥ ಬೆಳಗಾವಿ
ಪ್ರಕಟಣೆ

ಅ. ನಂ.	ಹುದ್ದೆಯ ವಿವರ	ಅನುಮತಿಸಿದ ವಿಷಯ	ವಿದ್ಯಾರ್ಹತೆ	ಮೀಸಲಾತಿ ಸೂಚ್ಯಾಂಕ	ಸಮತಳ ಮೀಸಲಾತಿ	ಮಾಧ್ಯಮ	ಹುದ್ದೆಗಳ ಸಂಖ್ಯೆ
1	ಸಹ ಶಿಕ್ಷಕ	ಇಂಗ್ಲೀಷ	ಬಿಎ. ಬಿಇಡಿ	14ನೇ ಸೂಚ್ಯಾಂಕ ಸಾಮಾನ್ಯ	4ನೇ ಸಾಮಾನ್ಯ ಅಂಗವಿಕಲ	ಕನ್ನಡ	1
2	ಸಹ ಶಿಕ್ಷಕ	ಇಂಗ್ಲೀಷ	ಬಿಎ. ಬಿಇಡಿ	15ನೇ ಸೂಚ್ಯಾಂಕ ಪರಿಶಿಷ್ಟ ಜಾತಿ	2ನೇ ಪರಿಶಿಷ್ಟ ಜಾತಿ ಮಹಿಳೆ	ಕನ್ನಡ	1

ನಮ್ಮ ಶಿಕ್ಷಣ ಸಮಿತಿಯಿಂದ ನಡೆಯುತ್ತಿರುವ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆ ತುಂಬಲು ಮೆ॥ ಆಯುಕ್ತರು ಸಾ. ಶಿ. ಇ. ಧಾರವಾಡ ಇವರ ಜ್ಞಾಪನ ಸಂಖ್ಯೆ: ಜಿ5/ಶಾ.ಶಿ.ಅ/ಹುತುಅ/ಫ.ಶಿ.ಶಿ.ಸ.ಸುರೇಬಾನ/44/2022-23/2410 ದಿನಾಂಕ: 04-11-2022 ರ ಅನ್ವಯ ಅರ್ಜಿ ಆಹ್ವಾನಿಸಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಸ್ವಂತ ಕೈಬರಹದ ಅರ್ಜಿಯೊಂದಿಗೆ ವಿದ್ಯಾರ್ಹತೆ, ಜನ್ಮದಿನಾಂಕ, ಜಾತಿ, ಹಾಗೂ ಇತರೆ ದೃಢೀಕೃತ ದಾಖಲೆಗಳೊಂದಿಗೆ ಪ್ರಕಟಣೆಯಾದ 21 ದಿನಗಳೊಳಗಾಗಿ ಅಧ್ಯಕ್ಷರು, ಶ್ರೀ. ಫ.ಶಿ. ಶಿಕ್ಷಣ ಸಮಿತಿ ಸುರೇಬಾನ ತಾ. ರಾಮದುರ್ಗ ಜಿ. ಬೆಳಗಾವಿ ವಿಳಾಸಕ್ಕೆ, ಸಾಮಾನ್ಯ ಅಭ್ಯರ್ಥಿ ರೂ. 1000=00, ಪರಿಶಿಷ್ಟ ಜಾತಿ (ಎಸ್.ಸಿ) ಅಭ್ಯರ್ಥಿ ರೂ. 800=00 ರಾಷ್ಟ್ರೀಕೃತ ಬ್ಯಾಂಕ್ ಡಿಡಿಯೊಂದಿಗೆ ಅರ್ಜಿ ಸಲ್ಲಿಸುವುದಾಗಬೇಕು. ಅರ್ಜಿಯ ಒಂದು ಪ್ರತಿಯನ್ನು ಮೆ॥ ಉಪನಿರ್ದೇಶಕರು ಸಾ. ಶಿ ಇಲಾಖೆ ಬೆಳಗಾವಿ (ದ) ಇವರಿಗೆ ಸಲ್ಲಿಸಬೇಕು. ಸಂದರ್ಶನದ ದಿನಾಂಕವನ್ನು ನಂತರ ತಿಳಿಸಲಾಗುವುದು. ಸಂಪರ್ಕಿಸುವ ಮೊ.ನಂ. **9481107414, 9663013146.**
ಸೂಚನೆ: 1) ವಿದ್ಯಾರ್ಹತೆ, ವಯೋಮಿತಿ ಹಾಗೂ ವೇತನ ಶ್ರೇಣಿ ಸರಕಾರದ ನಿಯಮಾನುಸಾರವಾಗಿರುತ್ತದೆ, 2) ಅಪೂರ್ಣ ಹಾಗೂ ನಿಗದಿತ ದಿನದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಸಹಿ/- ಅಧ್ಯಕ್ಷರು.
ದಿನಾಂಕ: 08-11-2022

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ (ನೋಂ)
ಬಸವನಗುಡಿ, ಬೆಂಗಳೂರು-560 004
ಬ್ಯಾಕ್‌ಲಾಗ್ ಹುದ್ದೆಗಳು
ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ (ನೋಂ), ನ್ಯಾಷನಲ್ ಹೈಸ್ಕೂಲ್ ಆವರಣ, ಬಸವನಗುಡಿ, ಬೆಂಗಳೂರು-560004 ಇಲ್ಲಿ ಬ್ಯಾಕ್‌ಲಾಗ್ ಬೋಧಕ/ ಬೋಧಕೇತರ ಹುದ್ದೆಗಳಿಗಾಗಿ ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆಯಲಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಹುದ್ದೆಯ ವಿವರ	ಖಾಲಿ ಇರುವ ಹುದ್ದೆಗಳ ಸಂಖ್ಯೆ	ಮೀಸಲು ವರ್ಗ	ಷರಾ
1	ಇಂಗ್ಲೀಷ್ ಸಹಾಯಕ ಪ್ರಾಧ್ಯಾಪಕರು	01	ಪರಿಶಿಷ್ಟ ಪಂಗಡ	
2	ಕ್ಲರ್ಕ್-ಕಂ-ಟೈಪಿಸ್ಟ್(Clerk-cum-Typist)	01	ಪರಿಶಿಷ್ಟ ಪಂಗಡ	

ವಿದ್ಯಾರ್ಹತೆ: ಇಂಗ್ಲೀಷ್ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ (ಎಂ.ಎ.) ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು. ಎನ್.ಇ.ಟಿ/ಎಸ್.ಎಲ್.ಇ.ಟಿ. (NET/SLET) ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಪಿ.ಹೆಚ್.ಡಿ. ಪದವಿ ಪಡೆದವರಿಗೆ NET/SLET ಪರೀಕ್ಷೆಯ ವಿನಾಯಿತಿ ಇರುತ್ತದೆ. ಎಂ.ಫಿಲ್ ವಿದ್ಯಾರ್ಹತೆ ಪರಿಗಣಿಸುವುದಿಲ್ಲ.
ವಯೋಮಿತಿ ಕನಿಷ್ಠ 18 ವರ್ಷಗಳು ಗರಿಷ್ಠ 45 ವರ್ಷಗಳು.
ಗುಮಾಸ್ತ-ಯಾ-ಬೆರಳಚ್ಚುಗಾರರು (Clerk-cum-Typist): ಗುಮಾಸ್ತ-ಯಾ-ಬೆರಳಚ್ಚುಗಾರರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿದ್ದು ಹೆಚ್ಚಿನ ಅಂಕಗಳನ್ನು ಪಡೆದಿದ್ದು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುವ ಜೂನಿಯರ್ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚಿನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು **(ಕನ್ನಡ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣತೆ ಹೊಂದಿರುವುದು ಕಡ್ಡಾಯವಾಗಿರುತ್ತದೆ).**
ವಯೋಮಿತಿ ಕನಿಷ್ಠ 18 ವರ್ಷಗಳು ಗರಿಷ್ಠ 40 ವರ್ಷಗಳು.
ಹುದ್ದೆಗಳು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಾಗಿರುವುದರಿಂದ ಇತರೆ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಅರ್ಜಿ ಹಾಕುವಂತಿಲ್ಲ.
ಅಭ್ಯರ್ಥಿಗಳನ್ನು ಶೈಕ್ಷಣಿಕ ಅರ್ಹತೆಯ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಲಾಗುವುದು. ಹಾಗೂ ಯಾವುದೇ ಸಂದರ್ಶನ ಇರುವುದಿಲ್ಲ. ಅಭ್ಯರ್ಥಿಗಳು **A4** ಅಳತೆಯ ಖಾಲಿ ಹಾಳೆಯಲ್ಲಿ ತಮ್ಮ ಹೆಸರು, ಹುಟ್ಟಿದ ದಿನಾಂಕ, ವಯಸ್ಸು, ಪ್ರವರ್ಗ, ವಿದ್ಯಾರ್ಹತೆ, ಅನುಭವ ಏನಾದರು ಇದ್ದಲ್ಲಿ ಸೂಕ್ತ ದೃಢೀಕೃತ ಪ್ರತಿಗಳೊಂದಿಗೆ ಮತ್ತು ವಿಳಾಸ, ದೂರವಾಣಿ ಸಂಖ್ಯೆ, ಇತರೆ ಸೂಕ್ತ ಮಾಹಿತಿಗಳೊಂದಿಗೆ **ಅರ್ಜಿಯನ್ನು ದ್ವಿಪ್ರತಿಯಲ್ಲಿ ಈ ಜಾಹಿರಾತು ಪ್ರಕಟಗೊಂಡ 10 ದಿವಸದೊಳಗೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ. ಹಾಗೆಯೇ ಒಂದು ಪ್ರತಿಯನ್ನು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು ಪ್ರಾದೇಶಿಕ ಕಚೇರಿ, ಕಾಳಿದಾಸ ರಸ್ತೆ, ಬೆಂಗಳೂರು-560 009** ಇವರಿಗೆ ಅಂಚೆ ಮುಖಾಂತರ ಮೇಲೆ ತಿಳಿಸಲಾದ ಅವಧಿಗೆ ಮುಂಚೆ ಕಳುಹಿಸಬೇಕು.
ಸಹಿ/-
ಕಾರ್ಯದರ್ಶಿಗಳು,
ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ (ನೋಂ),
ನ್ಯಾಷನಲ್ ಹೈಸ್ಕೂಲ್ ಆವರಣ, ಬಸವನಗುಡಿ, ಬೆಂಗಳೂರು-560 004

ಪ್ರಜಾವಾಣಿ
ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

ಬುಧವಾರ • ನವೆಂಬರ್ 9, 2022 ಪ್ರಜಾವಾಣಿ

ನಟ ಲೋಹಿತಾಶ್ವ ನಿಧನ

ಒಂದನೇ ಪುಟದಿಂದ

ಆದರೆ ದಿನ ಕಳೆದಂತೆ ಅಂಗಾಂಗಳ ವೈಫಲ್ಯದಿಂದ ಅವರ ಆರೋಗ್ಯ ಕ್ಷೀಣಿಸಿತ್ತು. 'ಕುಮಾರಸ್ವಾಮಿ ಬಡಾವಣೆಯಲ್ಲಿರುವ ಮನೆಯಲ್ಲಿ ಬುಧವಾರ ಬೆಳಗ್ಗೆ 11ರವರೆಗೆ ಪಾರ್ಥಿವ ಶರೀರದ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುವುದು. ನಂತರ ತಂದೆಯ ಹುಟ್ಟೂರು ತುಮಕೂರು ಸಮೀಪದ ತೊಂಡಗೆರೆಯಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಲಿದೆ' ಎಂದು ಅವರ ಪುತ್ರ, ನಟ ಶರತ್ ಲೋಹಿತಾಶ್ವ ತಿಳಿಸಿದ್ದಾರೆ.

ಲೋಹಿತಾಶ್ವ ಅವರು ರಂಗಭೂಮಿ ಮೂಲಕ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟವರು. ಮೊದಲು ಕಲಾತ್ಮಕ ಚಿತ್ರಗಳಲ್ಲಿ ಬಣ್ಣಹಚ್ಚುತ್ತಿದ್ದ ಅವರಿಗೆ ಕಮರ್ಷಿಯಲ್ ಬ್ರೇಕ್ ನೀಡಿದ್ದು ಶಂಕರ್‌ನಾಗ್ ಅವರ 'ಗೀತಾ' ಸಿನಿಮಾ.

ನಂತರ 'ಧರ್ಮ ದಾರಿ ತಪ್ಪಿತು', 'ಗಜೇಂದ್ರ', 'ಸಂಭವಾಮಿ ಯುಗೇಯುಗೇ', 'ಸಾಂಗ್ಲಿಯಾನ' ಹೀಗೆ 500ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದಾರೆ. ಹೆಚ್ಚಿನ ಸಿನಿಮಾದಲ್ಲಿ 'ಮುಖ್ಯಮಂತ್ರಿ' ಪಾತ್ರಕ್ಕೆ ಬಣ್ಣಹಚ್ಚಿದ ಖ್ಯಾತಿ ಲೋಹಿತಾಶ್ವ ಅವರದ್ದು. ಮೈಸೂರಿನ ಮಾನಸಗಂಗೋತ್ರಿಯಲ್ಲಿ ಎಂ.ಎ ಪದವಿ ಪಡೆದು, 33 ವರ್ಷ ಇಂಗ್ಲಿಷ್ ಪ್ರಾಧ್ಯಾಪಕರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

ಮೋದಿಯಿಂದ ವರ್ಚುವಲ್ ಉದ್ಘಾಟನೆ • 25 ರ ಸಂಭ್ರಮದಲ್ಲಿ ಶೃಂಗಸಭೆ

16 ರಿಂದ ಬೆಂಗಳೂರು ಟೆಕ್ ಸಮ್ಮಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು ಟೆಕ್ ಸಮ್ಮಿಟ್‌ನ ಮಾಹಿತಿಯನ್ನು ಒಳಗೊಂಡ ಕೈಪಿಡಿಯನ್ನು ಸಚಿವ ಡಾ.ಅಶ್ವತ್ಥನಾರಾಯಣ ಬಿಡುಗಡೆ ಮಾಡಿದರು. ಸಂಘಟಕ ಜಗದೀಶ್ ಪಾಟಣಕರ್, ಐಟಿ–ಬಿಟಿ ಇಲಾಖೆ ನಿರ್ದೇಶಕಿ ಮೀನಾ ನಾಗರಾಜ್, ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಮುಖ್ಯಸ್ಥ ಬಿ ವಿ ನಾಯ್ಡು, ಜೈವಿಕ ತಂತ್ರಜ್ಞಾನ ಕ್ಷೇತ್ರದ ಉಸ್ತುವಾರಿ ವಿಜಯ್ ಚಂದ್ರು ಇದ್ದರು.

ಬೆಂಗಳೂರು: ಬೆಂಗಳೂರು ತಂತ್ರಜ್ಞಾನ ಶೃಂಗಸಭೆ (ಬೆಂಗಳೂರು ಟೆಕ್ ಸಮ್ಮಿಟ್) ಇದೇ 16 ರಿಂದ 18 ರವರೆಗೆ ನಗರದ ಅರಮನೆ ಮೈದಾನದಲ್ಲಿ ನಡೆಯಲಿದ್ದು, ಈ ಶೃಂಗಸಭೆಗೆ 25 ವರ್ಷದ ಸಂಭ್ರಮವೂ ಆಗಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದ ಅವರು, ಕೋವಿಡ್ ನಂತರ ನಡೆಯುತ್ತಿರುವ ಪೂರ್ಣ ಪ್ರಮಾಣದ ಶೃಂಗಸಭೆ ಇದಾಗಿದ್ದು, ಪ್ರದರ್ಶನದಲ್ಲಿ 570ಕ್ಕೂ ಹೆಚ್ಚು ನವೋದ್ಯಮಗಳು, ಯೂನಿಕಾರ್ನ್‌ಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲಿವೆ. ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಆಗಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಈ ಬಾರಿಯ ಶೃಂಗಸಭೆಯ ಘೋಷ ವಾಕ್ಯ 'ಟೆಕ್ 4 ನೆಕ್ಸ್‌ಜೆನ್' ಆಗಿದ್ದು, ಎಲೆಕ್ಟ್ರಾನಿಕ್ಸ್, ಐಟಿ, ಡೀಪ್ ಟೆಕ್, ಕೃತಕ ಬುದ್ಧಿಮತ್ತೆ, ಹೈಬ್ರೀಡ್ ಕ್ಲೌಡ್, 5ಜಿ, ಎಡ್ಜ್ ಕಂಪ್ಯೂಟಿಂಗ್, ಫಿನ್‌ಟೆಕ್, ಬಾಹ್ಯಾಕಾಶ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ನವೋದ್ಯಮಗಳಿಗೆ ಆದ್ಯತೆ ನೀಡಲಾಗಿದೆ ಎಂದರು.

ಬೆಳ್ಳಿ ಹಬ್ಬದ ಅಂಗವಾಗಿ ಬೆಂಗಳೂರಿನಲ್ಲಿ 25ಕ್ಕಿಂತ ಹೆಚ್ಚು ವರ್ಷಗಳಿಂದ ಸಕ್ರಿಯವಾಗಿರುವ ಐಟಿ ವಲಯದ 35, ಎಸ್‌ಟಿಪಿಐ ವಲಯದ 10, ಬಿಟಿ ವಲಯದ 6 ಕಂಪನಿಗಳಿಗೆ ಮತ್ತು ಯೂನಿಕಾರ್ನ್ ದರ್ಜೆಯ 10 ನವೋದ್ಯಮಗಳಿಗೆ ಸನ್ಮಾನಿಸಲಾಗುವುದು. ಈ ಸಮಾವೇಶವು 300 ಶತಕೋಟಿ ಡಾಲರ್ ಮೌಲ್ಯದ ಡಿಜಿಟಲರ್ ಆರ್ಥಿಕತೆ ಸಾಧನೆಗೆ ಇಂಬು ನೀಡಲಿದೆ ಎಂದು ಅಶ್ವತ್ಥನಾರಾಯಣ ಅವರು ಹೇಳಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಅರಬ್ ಸಂಸ್ಥಾನದ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಖಾತೆಯ ಸಹಾಯಕ ಸಚಿವ ಒಮರ್ ಬಿನ್ ಸುಲ್ತಾನ್ ಅಲ್ ಒಲಾಮಾ, ಆಸ್ಟ್ರೇಲಿಯಾ ವಿದೇಶಾಂಗ ಖಾತೆಯ ಸಹಾಯಕ ಸಚಿವ ಟಿಮ್ ವ್ಯಾಟ್ಸ್, ಫಿನ್ಲೆಂಡಿನ ವಿಜ್ಞಾನ ಸಚಿವ ಪೆಟ್ರಿ ಹಾನ್ನೊನೆನ್, ಭಾರತದ ಪ್ರಥಮ ಯೂನಿಕಾರ್ನ್ ಕಂಪನಿ 'ಇನ್ಮೊಬಿ'ಯ ಸಂಸ್ಥಾಪಕ ನವೀನ್ ತೆವಾರಿ, ಅಮೆರಿಕದ ಕ್ವೆಂಡ್ರೆಲ್ ಕಂಪನಿಯ ಸಿಇಒ ಮಾರ್ಟಿನ್ ಶ್ರೋಟರ್ ಭಾಗವಹಿಸಲಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರೋನ್ ಅವರು ವರ್ಚುವಲ್ ಆಗಿ ಮಾತನಾಡಲಿದ್ದಾರೆ ಎಂದರು.

ಪ್ರಮುಖ ಅಂಶಗಳು

- 2,000 ನವೋದ್ಯಮಗಳು ಭಾಗವಹಿಸಲಿವೆ
- 300 ನವೋದ್ಯಮಗಳ ಉತ್ಪನ್ನಗಳ ಪ್ರದರ್ಶನ
- 570 ಪ್ರದರ್ಶಕರು ಭಾಗಿ
- ಐಟಿ 92, ಜೈವಿಕ ತಂತ್ರಜ್ಞಾನ 60, ಎಐ ಮತ್ತು ಎಂಎಲ್, ನವಯುಗದ ಆವಿಷ್ಕಾರಗಳ 15, ಎಜುಟೆಕ್ ಮತ್ತು ಫಿನ್‌ಟೆಕ್ 14, ಎಲೆಕ್ಟ್ರಾನಿಕ್ಸ್ ಮತ್ತು ಮೊಬಿಲಿಟಿ 10, ಸೈಬರ್ ಸೆಕ್ಯುರಿಟಿಯ 11 ನವೋದ್ಯಮಗಳಿಂದ ಪ್ರದರ್ಶನ

ಸುದ್ದಿ 2 ನಿಮಿಷ

ಶಾಲಾ ಕೊಠಡಿಗಳಿಗೆ 'ವಿವೇಕ' ಹೆಸರು

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ 8,100 ಹೊಸ ಕೊಠಡಿಗಳಿಗೆ 'ವಿವೇಕ' ಎಂಬ ಹೆಸರಿಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ.

ರಾಜ್ಯ ಸರ್ಕಾರ ₹ 992 ಕೋಟಿ ವೆಚ್ಚದಲ್ಲಿ 8,100 ಕೊಠಡಿಗಳನ್ನು ನಿರ್ಮಿಸುತ್ತಿದೆ. ಕಾಮಗಾರಿ ಪೂರ್ಣಗೊಂಡ ನಂತರ ಎಲ್ಲ ಕೊಠಡಿಗಳಿಗೂ ಸ್ವಾಮಿ ವಿವೇಕಾನಂದರ ಸ್ಮರಣಾರ್ಥ ವಿವೇಕ ಎಂದು ಹೆಸರಿಡಲು ಹಾಗೂ ವಿವೇಕಾನಂದರ ಪರಿಕಲ್ಪನೆಗೆ ಪೂರಕವಾದ ಏಕ ರೂಪದ ಬಣ್ಣ, ಅವರ ಭಾವಚಿತ್ರ, ತತ್ವ, ಸಂದೇಶಗಳನ್ನು ಬರೆಸಲು ಆಲೋಚನೆ ನಡೆದಿದೆ ಎಂದು ಶಿಕ್ಷಣ ಇಲಾಖೆ ಮೂಲಗಳು ತಿಳಿಸಿವೆ.



'ವಿವೇಕ ಎಂದರೆ ಜ್ಞಾನವೂ ಹೌದು, ಗೋಡೆಗಳಿಗೆ ಬಳಿಯುವ ಬಣ್ಣದ ಆಯ್ಕೆ ಕುರಿತು ಇನ್ನೂ ಚರ್ಚಿಸಿಲ್ಲ' ಎಂದು ಸಚಿವ ಬಿ.ಸಿ.ನಾಗೇಶ್ ಅವರು ಪ್ರತಿಕ್ರಿಯಿಸಿದರು.

ನಿವೃತ್ತ ಅಧಿಕಾರಿ ಹತ್ಯೆ: ಇಬ್ಬರ ಬಂಧನ

ಮೈಸೂರು: 'ಗುಪ್ತಚರ ಇಲಾಖೆಯ ನಿವೃತ್ತ ಅಧಿಕಾರಿ ಆರ್.ಎನ್. ಕುಲಕರ್ಣಿ (82) ತಮ್ಮ ನೆರೆಮನೆಯವರಿಂದಲೇ ಹತ್ಯೆಗೊಳಗಾಗಿದ್ದರು' ಎಂದು ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ತಿಳಿಸಿದರು.

'ನೆರೆಮನೆಯ ಮಾದಪ್ಪ ಎಂಬುವವರ ಕಿರಿಯ ಮಗ ಮನು (30) ಹಾಗೂ ಆತನ ಸ್ನೇಹಿತ ಕುವೆಂಪುನಗರದ ವರುಣ್ ಗೌಡ (30) ಹತ್ಯೆ ಮಾಡಿದ್ದಾಗಿ ಒಪ್ಪಿಕೊಂಡಿದ್ದು, ಇಬ್ಬರನ್ನೂ ಬಂಧಿಸಲಾಗಿದೆ' ಎಂದು ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕುಲಕರ್ಣಿ ಅವರ ಮನೆಯ ದಕ್ಷಿಣ ಭಾಗಕ್ಕೆ ಜಾಗ ಒತ್ತುವರಿ ಮಾಡಿ ಮಾದಪ್ಪ ಮನೆ ಕಟ್ಟಿದ್ದರು. ಆ ಬಗ್ಗೆ ಕುಲಕರ್ಣಿ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದ್ದರು. ಸಮಸ್ಯೆ ಇತ್ಯರ್ಥವಾಗದೇ ಹೈಕೋರ್ಟ್ ಮೆಟ್ಟಿಲೇರಿದ್ದರು. ಅದೇ ಕಾರಣಕ್ಕೆ, ತಂದೆಗೆ ವಿಷಯವನ್ನು ತಿಳಿಸದೇ ಮನು ತನ್ನ ಸ್ನೇಹಿತ ವರುಣ್ ಜೊತೆ ಸೇರಿ ಹತ್ಯೆಗೆ ಸಂಚು ರೂಪಿಸಿದ್ದ. ಕುಲಕರ್ಣಿ ಅವರು ಓಡಾಡುವ ಜಾಗದ ಮಾಹಿತಿಯನ್ನು ಇಬ್ಬರೂ ಕಲೆಹಾಕಿದ್ದರು. ಕೃತ್ಯ ನಡೆದ ಸ್ಥಳದ ಸಿಸಿಟಿವಿ ದೃಶ್ಯಾವಳಿಗಳನ್ನು ಕಲೆಹಾಕಿ ತೀವ್ರ ವಿಚಾರಣೆಗೆ ಒಳಪಡಿಸಿದಾಗ ತಪ್ಪೊಪ್ಪಿಕೊಂಡರು' ಎಂದರು. ನ.4ರಂದು ಮಾನಸ ಗಂಗೋತ್ರಿಯಲ್ಲಿ ಸಂಜೆ ವಾಕ್ ಮಾಡುತ್ತಿದ್ದಾಗ ಕುಲಕರ್ಣಿ ಅವರ ಮೇಲೆ ಕಾರು ಹರಿಸಿ ಹತ್ಯೆ ಮಾಡಲಾಗಿತ್ತು.



'ಎಸ್‌ಸಿ, ಎಸ್‌ಟಿ: ಕಾನೂನುಬದ್ಧ ಮುಂಬಡ್ತಿ'

ಬೆಂಗಳೂರು: 'ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ವರ್ಗದ (ಎಸ್‌ಟಿ) ನೌಕರರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವ ವೇಳೆ ಕಾಯ್ದೆ, ನಿಯಮಗಳನ್ನು ಪಾಲಿಸುವಂತೆ ಎಲ್ಲ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು' ಎಂದು ಎಸ್‌ಸಿ, ಎಸ್‌ಟಿ ಸರ್ಕಾರಿ ನೌಕರರ ಸಂಘದ ನಿಯೋಗಕ್ಕೆ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಭರವಸೆ ನೀಡಿದ್ದಾರೆ.

ಬಿ.ಕೆ. ಪವಿತ್ರ ತೀರ್ಪು 1 ಮತ್ತು 2 ಸಂಬಂಧ ಮೀಸಲಾತಿ ನಿಗದಿಪಡಿಸುವಂತೆ ಸಲ್ಲಿಸಿದ್ದ ಮನವಿಯ ಕುರಿತಂತೆ ಸಂಘದ ಪದಾಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಅವರು, 'ಕಾನೂನುಬದ್ಧವಾಗಿ ಮುಂಬಡ್ತಿ ನೀಡುವಂತೆ ಅಧಿಕಾರಿಗಳಿಗೆ ತಿಳಿಸಲಾಗುವುದು' ಎಂದಿದ್ದಾರೆ.

ವಿವಿಧ ಇಲಾಖೆಗಳಲ್ಲಿ ಮುಂಬಡ್ತಿಯಲ್ಲಿ ನೀಡುವ ವೇಳೆ ಎಸ್‌ಸಿ, ಎಸ್‌ಟಿ ನೌಕರರಿಗೆ ಅನ್ಯಾಯ ಎಸಗಲಾಗಿದೆ ಎಂಬ ಸಮಗ್ರ ವಿವರಗಳನ್ನು ಒಳಗೊಂಡ 58 ಪುಟಗಳ ಮನವಿಯನ್ನು ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ ಅವರು ಮುಖ್ಯಕಾರ್ಯದರ್ಶಿಗೆ ಸಲ್ಲಿಸಿದರು.

'ರಾಜ್ಯದಲ್ಲಿ ಜ್ಯೇಷ್ಠತೆ ಸಂರಕ್ಷಣಾ ಕಾಯ್ದೆ ಜಾರಿಯಲ್ಲಿದೆ. ಈ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಕೂಡಾ ಎತ್ತಿ ಹಿಡಿದಿದೆ. ಆದರೆ, ವಿವಿಧ ಇಲಾಖೆಗಳಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಜ್ಯೇಷ್ಠತೆ ನಿಗದಿಪಡಿಸುವಾಗ ತಪ್ಪು ಮಾಡಲಾಗಿದೆ. ಅಲ್ಲದೆ, ಬಡ್ತಿ ನೀಡುವಾಗ ಮೀಸಲಾತಿ ನಿಯಮವನ್ನು ಪಾಲಿಸದೆ ವಂಚಿಸಲಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಅವರು ಆಗ್ರಹಿಸಿದರು.

'ನೌಕರರ ಜ್ಯೇಷ್ಠತೆಯನ್ನು ನಿಗದಿಪಡಿಸುವ ಸಂದರ್ಭದಲ್ಲಿ ತಪ್ಪು ಆಗಿರುವ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ. ಕೆಲವು ಇಲಾಖೆಗಳಲ್ಲಿ ಬಡ್ತಿ ಪಡೆಯಲು ಅರ್ಹ ಎಸ್‌ಸಿ, ಎಸ್‌ಟಿ ನೌಕರರು ಇದ್ದರೂ ಮುಂಬಡ್ತಿ ನೀಡಲು ಕ್ರಮ ತೆಗೆದುಕೊಂಡಿಲ್ಲ. ಜ್ಯೇಷ್ಠತೆ, ಅರ್ಹತೆ ಇದ್ದರೂ ಪರಿಶಿಷ್ಟ ನೌಕರರನ್ನು ಹಲವು ಇಲಾಖೆಗಳಲ್ಲಿ ಬಡ್ತಿಯಿಂದ ಹೊರಗಿಡಲಾಗಿದೆ' ಎಂದು ಸಂಘದ ನಿಯೋಗ ಸಿಎಸ್ ಗಮನಕ್ಕೆ ತಂದಿದೆ.

ಖಾಸಗಿ ಜಮೀನಿನಲ್ಲಿರುವ ಜನವಸತಿಗಳೂ ಕಂದಾಯ ಗ್ರಾಮ

ಒಂದನೇ ಪುಟದಿಂದ

ನಿಗದಿತ ನಮೂನೆಯಲ್ಲಿ ಅರ್ಜಿ ಸ್ವೀಕರಿಸಿದ ಬಳಿಕ ಸಾರ್ವಜನಿಕ ವಿಚಾರಣೆ ನಡೆಸಿ ಅರ್ಜಿದಾರರಿಗೆ ಜಮೀನು ಮಂಜೂರು ಮಾಡಬೇಕು. ಪ್ರತಿ ಫಲಾನುಭವಿಗೆ 4,000 ಚದರ ಮೀಟರ್ ಮೀರದಂತೆ ಅಥವಾ ಅವರು ನೈಜವಾಗಿ ಸ್ವಾಧೀನದಲ್ಲಿರುವ ಜಮೀನನ್ನು ಮಂಜೂರು ಮಾಡಲು ಅವಕಾಶವಿದೆ. ಆ ಜಮೀನನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಂಡ ತಕ್ಷಣದಿಂದಲೇ ತಹಶೀಲ್ದಾರ್‌ಗಳು ಹಕ್ಕುಪತ್ರ ವಿತರಿಸಬಹುದು. ಕಂದಾಯ ಗ್ರಾಮ ಘೋಷಣೆಯವರೆಗೂ ಕಾಯುವ ಅಗತ್ಯವಿಲ್ಲ ಎಂದು ಕಂದಾಯ ಇಲಾಖೆ ತಿಳಿಸಿದೆ.

'ಇಡಬ್ಲ್ಯುಎಸ್ ಶೇ 10 ಮೀಸಲಾತಿ ಹಿಂಪಡೆಯಬೇಕು'

ಬೆಂಗಳೂರು: 'ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿಯನ್ನು ಎತ್ತಿಹಿಡಿದ ಸುಪ್ರೀಂ ಕೋರ್ಟ್ ತೀರ್ಪು, ದೇಶದಲ್ಲಿ ಅನುಸರಿಸುತ್ತಿರುವ ಸಾಮಾಜಿಕ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ. ಈ ಮೀಸಲಾತಿಯನ್ನು ಹಿಂಪಡೆಯಬೇಕು' ಎಂದು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

'ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಾನಮಾನದ ಆಧಾರದಲ್ಲಿ ಮೀಸಲಾತಿ ನೀಡಬೇಕು, ಆರ್ಥಿಕ ಸ್ಥಿತಿ ಮಾನದಂಡವಲ್ಲ. ಜನರ ಆರ್ಥಿಕ ಸ್ಥಿತಿಯು ಕಾಲಕಾಲಕ್ಕೆ ಬದಲಾಗುತ್ತದೆ. ಹೀಗಾಗಿ, ಈ ಮೀಸಲಾತಿ ಎಂದಿಗೂ ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವುದಿಲ್ಲ' ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

'ಈ ತೀರ್ಪಿಗೆ ನಮ್ಮ ಆಕ್ಷೇಪವಿದೆ. ಹೀಗಾಗಿ, ಕಾನೂನು ತಜ್ಞರ ಜೊತೆ ಸಮಾಲೋಚಿಸಿ ತೀರ್ಪಿನ ಕುರಿತು ವಿವರವಾದ ವಿಶ್ಲೇಷಣೆಯ ಬಳಿಕ ಮುಂದೆ ಕೈಗೊಳ್ಳಬೇಕಾದ ಕಾನೂನಾತ್ಮಕ ಕ್ರಮಗಳ ಬಗ್ಗೆ ನಿರ್ಧರಿಸುತ್ತೇವೆ. ಸಾಮಾಜಿಕ ನ್ಯಾಯವನ್ನು ಕಾಪಾಡಿ, ಆ ಧ್ವನಿಯನ್ನು ಪ್ರತಿಧ್ವನಿಸಲು ಸಮಾನ ಮನಸ್ಕ ಹೋರಾಟಗಾರರು ಒಂದಾಗುತ್ತೇವೆ' ಎಂದೂ ಹೇಳಿದ್ದಾರೆ.

'ಈ ತಿದ್ದುಪಡಿಯನ್ನು ಹಿಂದೆತೆಗೆದುಕೊಳ್ಳಬೇಕು ಮತ್ತು ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳನ್ನು ಹೊರತುಪಡಿಸಿ ಇಡಬ್ಲ್ಯುಎಸ್‌ಗೆ ಒದಗಿಸಿದ ಶೇ 10 ಮೀಸಲಾತಿಯನ್ನು ತಕ್ಷಣ ರದ್ದುಗೊಳಿಸಬೇಕು' ಎಂದೂ ಒಕ್ಕೂಟ ಒತ್ತಾಯಿಸಿದೆ.

ಹಿಂದೂ ವಿರೋಧಿ ಮಾನಸಿಕತೆ

'ಹಿಂದೂ' ಪದ ಕುರಿತ ಸತೀಶ ಜಾರಕಿಹೊಳಿ ಹೇಳಿಕೆಗೆ ನಳಿನ್ ಕಟೀಲ್ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರು 'ಹಿಂದೂ' ಪದದ ಕುರಿತು ನೀಡಿರುವ ಹೇಳಿಕೆ ಕಾಂಗ್ರೆಸ್ ಪಕ್ಷದ ಹಿಂದೂ ವಿರೋಧಿ ಧೋರಣೆಗೆ ಮತ್ತೊಂದು ನಿದರ್ಶನ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದ್ದಾರೆ.

'ಹಿಂದೂ ಧರ್ಮ ಮತ್ತು ಹಿಂದೂಗಳನ್ನು ಟೀಕಿಸುವ ಮಾನಸಿಕತೆಯನ್ನು ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಬೆಳೆಸಿಕೊಂಡು ಬಂದಿದೆ. ಹಿಂದೂಗಳನ್ನು ಅವಮಾನಿಸುವುದು, ಕಡೆಗಣಿಸುವುದನ್ನು ಆ ಪಕ್ಷವು ಸಾಮಾನ್ಯ ಕಾರ್ಯಸೂಚಿಯಾಗಿ ಪಾಲಿಸುತ್ತಲೇ ಬಂದಿದೆ' ಎಂದು ಆಕ್ಷೇಪಿಸಿದರು.

'ಹಿಂದೂ ಎಂಬುದು ಭಾರತೀಯ ಜೀವನ ಪದ್ಧತಿ ಎಂದು ಸುಪ್ರೀಂಕೋರ್ಟ್ ಹೇಳಿದೆ. ಸತೀಶ ಜಾರಕಿಹೊಳಿ ಮಾತನಾಡುವುದನ್ನು ನೋಡಿದರೆ ಸುಪ್ರೀಂಕೋರ್ಟ್‌ಗಿಂತಲೂ ಅವರು ದೊಡ್ಡವರಿರಬೇಕು. ಹಿಂದೂ ಭಾವನೆಗಳಿಗೆ ಧಕ್ಕೆ ತಂದಿರುವ ಅವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು' ಎಂದು ಆಗ್ರಹಿಸಿದರು.

ಆರಗ ಜ್ಞಾನೇಂದ್ರ ಖಂಡನೆ: 'ಹಿಂದೂ ಪದ ಎಂದರೆ ಕಾಂಗ್ರೆಸ್ ನಾಯಕರಿಗೆ ಅಶ್ಲೀಲ, ಅದೇ ರೀತಿಯಲ್ಲಿ ಕೇಸರಿ ಎಂದರೆ ಅವರಿಗೆ ಅಲರ್ಜಿ, ಈ ನಿಲುವು ಆ ಪಕ್ಷದ ಸಿದ್ಧಾಂತದ ಅವಿಭಾಜ್ಯ ಅಂಗವಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಕಿಡಿ ಕಾರಿದರು.

'ಕಾಂಗ್ರೆಸ್‌ನ ಹಿಂದೂ ವಿರೋಧಿ ನಡೆಯಿಂದಾಗಿ, ದೇಶದಲ್ಲಿ ಅಪ್ರಸ್ತುತವಾಗಿದೆ' ಎಂದು ಹೇಳಿದರು.

ರಾಜ್ಯದ ಜನತೆ ಕ್ಷಮಿಸುವುದಿಲ್ಲ: ಹಿಂದೂಗಳನ್ನು ನಿಂದಿಸಿದ ಕಾಂಗ್ರೆಸ್ ಅನ್ನು ರಾಜ್ಯದ ಜನತೆ ಕ್ಷಮಿಸುವುದಿಲ್ಲ. ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಹೇಳಿದರು.

ಕಾಂಗ್ರೆಸ್ ಪಕ್ಷವು ಯಾವತ್ತೂ ನಮ್ಮ ಪ್ರಾಚೀನ–ಶ್ರೇಷ್ಠ ಸಂಸ್ಕೃತಿ ಮತ್ತು ಧರ್ಮವನ್ನು ಹೀಯಾಳಿಸುವ ಕೆಲಸ ಮಾಡುತ್ತದೆ. ಸತೀಶ ಜಾರಕಿಹೊಳಿ ವಿರುದ್ಧ ಕಾಂಗ್ರೆಸ್ ಪಕ್ಷ ಕ್ರಮ ತೆಗೆದುಕೊಳ್ಳಬೇಕು. ಅವರಿಂದ ರಾಜೀನಾಮೆ ಪಡೆಯಬೇಕು. ಇಲ್ಲವಾದರೆ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರು ಹಿಂದೂಗಳ ಅವಹೇಳನ ಸಮರ್ಥಿಸಿದಂತೆ ಆಗುತ್ತದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

'ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ'

ಒಂದನೇ ಪುಟದಿಂದ

'ನಾನೇನು ಈ ಪದದ ಅರ್ಥ ಕಂಡುಹಿಡಿದಿಲ್ಲ. ಹಿಂದೆ ಹಲವರು ಬರೆದಿದ್ದನ್ನೇ ಉಚ್ಚರಿಸಿದ್ದೇನೆ' ಎಂದು ಹೇಳಿದರು.

'ಶಬ್ದಕೋಶ ಯಾವುದು, ಯಾರು ಬರೆದಿದ್ದು?' ಎಂಬ ಪ್ರಶ್ನೆಗೆ 'ನೀವೇ ಹುಡುಕಿ ನೋಡಿ, ಸಿಗುತ್ತದೆ' ಎಂದರು. 'ಹಿಂದೂ ಪದದ ಬಗ್ಗೆ ಸಾಕಷ್ಟು ವರ್ಷಗಳಿಂದ ಚರ್ಚೆ ಇದೆ. ಅದನ್ನು ಸಂಬಂಧಿಸಿದವರೇ ಮುಂದೆ ಬಂದು ಸರಿ–ತಪ್ಪನ್ನು ಹೇಳಬೇಕಿತ್ತು. ಅವರಿಗೆ ಸಂಬಂಧಿಸಿದ್ದನ್ನು ನಾನು ಹೇಳಿದ್ದೇನೆ. ಇದಕ್ಕೆ ಅವರು ಕೃತಜ್ಞತೆ ಸಲ್ಲಿಸಬೇಕಿತ್ತು. ಆದರೆ, ಅನಗತ್ಯ ವಿವಾದ ಮಾಡುತ್ತಿದ್ದಾರೆ' ಎಂದೂ ಹೇಳಿದರು.

'ಅರ್ಧಂಬರ್ಧ ಓದಿಕೊಂಡು ಮಾತಾಡಿದ್ದೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಯಡಿಯೂರಪ್ಪ ಹೇಳಿದ್ದಾರಂತೆ. ನನ್ನ ಬಳಿ ಪೂರ್ಣ ದಾಖಲೆಗಳಿವೆ, ಪೂರ್ಣ ಓದಿಕೊಂಡೇ ಮಾತನಾಡಿದ್ದೇನೆ' ಎಂದರು.

'ನಡೆದ ಸಂಗತಿಯ ಬಗ್ಗೆ ಪಕ್ಷದ ಮುಖಂಡರು ವಿಚಾರಿಸಿದ್ದಾರೆ. ಪಕ್ಷದ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರೂ ಕೇಳಿದರು. ನನ್ನ ನಿಲುವನ್ನು ಅವರಿಗೂ ಸ್ಪಷ್ಟಪಡಿಸಿದ್ದೇನೆ. ಇದು ನನ್ನ ವೈಯಕ್ತಿಕ ಕಾರ್ಯಕ್ರಮದಲ್ಲಿ ನಡೆದ ಚರ್ಚೆ, ಪಕ್ಷದ ವೇದಿಕೆಯಲ್ಲಿ ಮಾತನಾಡಿಲ್ಲ. ಹಾಗಾಗಿ, ಪಕ್ಷಕ್ಕೆ–ಚುನಾವಣೆಗೆ ಇದು ಸಂಬಂಧವಿಲ್ಲ' ಎಂದರು. 'ನೀವು ಯಾವ ಧರ್ಮದವರು?' ಎಂಬ ಪ್ರಶ್ನೆಗೆ, 'ನಾನು ಭಾರತೀಯ' ಎಂದರು.

'ಅಸ್ಮಿತೆಗೆ ಧಕ್ಕೆಯಾದರೆ ಸಿಡಿದೇಳುತ್ತಾರೆ'

ಒಂದನೇ ಪುಟದಿಂದ

'ಸ್ವಾಭಿಮಾನ ಹಾಗೂ ಅಸ್ಮಿತೆಗೆ ಧಕ್ಕೆ ಬಂದರೆ ಹಿಂದೂಗಳು ಸಿಡಿದೇಳು ತ್ತಾರೆ. ಸತೀಶ ಜಾರಕಿಹೊಳಿ ಹೇಳಿಕೆಯನ್ನು ಖಂಡಿಸುವುದಷ್ಟೇ ಅಲ್ಲ; ಇದಕ್ಕೆ ಕೊನೆ ಹಾಡುವಂತಹ ಕಾರ್ಯಕ್ರಮವನ್ನು ಬಿಜೆಪಿ ಹಮ್ಮಿಕೊಳ್ಳಲಿದೆ' ಎಂದು ಹೇಳಿದರು.

ಬ್ಯಾಡಗಿಯಲ್ಲಿ ಮಾತನಾಡಿದ ಅವರು, 'ಜಾರಕಿಹೊಳಿ ಅವರೇ ನಿಮ್ಮ ಜಾತಿ ಪ್ರಮಾಣಪತ್ರದಲ್ಲಿ ಹಿಂದೂ ಎಂಬ ಶಬ್ದವಿಲ್ಲವೇ? ಹಿಂದೂ ಆಗಿ ಹುಟ್ಟಿ, ವಿದ್ಯೆ ಕಲಿತು, ಶಾಸಕರಾಗಿ, ಸಚಿವರಾಗಿರುವ ನೀವು ಕೇವಲ ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ಮತ್ತು ಮತ ಗಳಿಕೆಗಾಗಿ ಇಂಥ ಹೇಳಿಕೆ ನೀಡಿ ಕ್ಷುಲ್ಲಕ ರಾಜಕಾರಣ ಮಾಡುತ್ತಿದ್ದೀರಿ' ಎಂದು ತಿರುಗೇಟು ನೀಡಿದರು.

ಸಂಜೆ ಹೊಸದುರ್ಗದಲ್ಲಿ ಮಾತನಾಡಿದ ಸಿಎಂ ಬೊಮ್ಮಾಯಿ, 'ಸತೀಶ ಜಾರಕಿಹೊಳಿ ಅವರ ಹೇಳಿಕೆ ಬಗ್ಗೆ ಚರ್ಚೆ, ಕ್ಷಮೆ ಬೇಕಾಗಿಲ್ಲ. ಜನರು ತೀರ್ಮಾನ ಮಾಡಲಿದ್ದಾರೆ' ಎಂದರು.

ಇಂದು ಬಿಜೆಪಿ ಪ್ರತಿಭಟನೆ

ಬೆಂಗಳೂರು: ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ವಿರುದ್ಧ ಬಿಜೆಪಿ ಬುಧವಾರ ಬೆಳಿಗ್ಗೆ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಯನ್ನು ಆಯೋಜಿಸಿದೆ.

ಎಲ್ಲ ಜಿಲ್ಲೆಗಳ ಪ್ರಮುಖ ಕೇಂದ್ರಗಳಲ್ಲಿ ಪ್ರತಿಭಟನೆ ಆಯೋಜಿಸಬೇಕು. ಇದರಲ್ಲಿ ಪಕ್ಷದ ಕಾರ್ಯಕರ್ತರು, ಶಾಸಕರು, ಸಂಸದರು ಮತ್ತು ಸಚಿವರು ಭಾಗವಹಿಸಬೇಕು. ಭಾಷಣದ ಬಳಿಕ ಜಿಲ್ಲಾ ಪೊಲೀಸ್ ವರಿಷ್ಠರ ಕಚೇರಿಯಲ್ಲಿ ಸತೀಶ ವಿರುದ್ಧ ಕ್ರಿಮಿನಲ್ ದೂರು ದಾಖಲಿಸಬೇಕು ಎಂದು ಪಕ್ಷದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ ಸೂಚಿಸಿದ್ದಾರೆ.

ಸುಧಾ, ಮಯೂರ ಓದಿರಿ

ಟಿಇಟಿ ಪ್ರಶ್ನೆ ಪತ್ರಿಕೆ– ಅವಹೇಳನಕಾರಿ ಪದ ಬಳಕೆ: ಕಠಿಣ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಂಡಗೋಡ: 'ಕ್ಷೌರಿಕ ಸಮಾಜಕ್ಕೆ ಅವಮಾನ ಆಗುವಂತಹ ಪದವನ್ನು ಟಿಇಟಿ ಪ್ರಶ್ನೆ ಪತ್ರಿಕೆಯಲ್ಲಿ ಬಳಸಲಾಗಿದೆ. ಇದು ಖಂಡನೀಯ. ರಾಜ್ಯ ಸರ್ಕಾರ ಕೂಡಲೇ ಈ ಬಗ್ಗೆ ಕ್ಷಮೆ ಕೇಳಬೇಕು ಮತ್ತು ತಪ್ಪೆಸಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳ ಬೇಕು' ಎಂದು ಅಖಿಲ ಕರ್ನಾಟಕ ಹಡಪದ ಅಪ್ಪಣ್ಣ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಸಿದ್ಧಪ್ಪ ಹಡಪದ ಒತ್ತಾಯಿಸಿದರು.

ಇಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಟಿಇಟಿ ಪ್ರಶ್ನೆ ಪತ್ರಿಕೆಯ ಕನ್ನಡ ಭಾಷೆ-2ರ ಪ್ರಶ್ನೆ ಸಂಖ್ಯೆ 31ರಿಂದ 38ರ ಪ್ರಶ್ನೆಗಳಿಗೆ ಪೂರಕವಾಗಿ ನೀಡಿರುವ ಗದ್ಯ ಭಾಗದಲ್ಲಿ, 'ಇದು ಬಾಯಿ ತೆರೆದರೆ ಮೇಲೂ, ಕೆಳಗೂ ಎರಡೆರಡು ಸಾಲು ಹಲ್ಲುಗಳು ಹಜಾಮರ ಕ್ಷೌರದ ಕತ್ತಿಗಿಂತ ಹರಿತವಾಗಿರುತ್ತದೆ' ಎಂದು ಆಕ್ಷೇಪಾರ್ಹ ಪದ ಬಳಸಲಾಗಿದೆ ಎಂದು ದೂರಿದರು.

'2016ರಲ್ಲಿಯೇ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈ ಪದ ಬಳಕೆ ಮಾಡದಂತೆ ಆದೇಶಿಸಿದೆ. ಆದರೂ ಈ ಬಾರಿಯ ಟಿಇಟಿಯಲ್ಲಿ ಅದೇ ತಪ್ಪು ಮಾಡಲಾಗಿದೆ. ಸಮಾಜದ ವೃತ್ತಿಯನ್ನೇ ಅಣಕಿಸುವಂತೆ ಅವಹೇಳನಕಾರಿ ಪದ ಬಳಕೆ ಮಾಡುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಆಗದು. ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ, ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

ಅಭ್ಯರ್ಥಿ ಬದಲು ಸನ್ನಿ ಲಿಯೋನ್ ಚಿತ್ರ!

ಶಿವಮೊಗ್ಗ: ನಗರದಲ್ಲಿ ಭಾನುವಾರ ನಡೆದಿದ್ದ ಶಿಕ್ಷಕರ ಸಾಮಾನ್ಯ ಅರ್ಹತಾ ಪರೀಕ್ಷೆ (ಟಿಇಟಿ)ಗೆ ಹಾಜರಾಗಿದ್ದ ಮಹಿಳಾ ಅಭ್ಯರ್ಥಿಯ ಪ್ರವೇಶ ಪತ್ರದಲ್ಲಿ ಬಾಲಿವುಡ್ ನಟಿ ಸನ್ನಿ ಲಿಯೋನ್ ಚಿತ್ರ ಮುದ್ರಿತವಾಗಿರುವುದು ಗೊತ್ತಾಗಿದೆ.

ಚಿಕ್ಕಮಗಳೂರು ಜಿಲ್ಲೆ ಕೊಪ್ಪದ ಮಹಿಳಾ ಅಭ್ಯರ್ಥಿ ಇಲ್ಲಿನ ಎಚ್.ಎಸ್. ರುದ್ರಪ್ಪ, ನ್ಯಾಷನಲ್ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದರು. ಪರೀಕ್ಷಾ ಪ್ರಾಧಿಕಾರದ ಬಳಿ ಇದ್ದ ಅವರ ಪ್ರವೇಶ ಪತ್ರದಲ್ಲಿ ನಟಿ ಸನ್ನಿ ಲಿಯೋನ್ ಅವರ ಅರೆನಗ್ನ ಭಾವಚಿತ್ರ ಮುದ್ರಣಗೊಂಡಿದ್ದು ಕಂಡುಬಂದಿತ್ತು.

'ಸೈಬರ್ ಸೆಂಟರ್‌ನಲ್ಲಿ ಅಭ್ಯರ್ಥಿಯೇ ಭಾವಚಿತ್ರವನ್ನು ಪ್ರವೇಶ ಪತ್ರದೊಂದಿಗೆ ಅಡಕಗೊಳಿಸುವಾಗ ಈ ಪ್ರಮಾದ ಆಗಿರಬಹುದು. ಅಭ್ಯರ್ಥಿ ಡೌನ್‌ಲೋಡ್ ಮಾಡಿಕೊಂಡ ಪ್ರವೇಶ ಪತ್ರದಲ್ಲೂ ಸನ್ನಿ ಲಿಯೋನ್ ಅವರ ಚಿತ್ರ ಇದ್ದು, ಗಮನಿಸಿದ ಅದನ್ನು ಅವರು ಡೌನ್‌ಲೋಡ್ ಮಾಡಿಕೊಳ್ಳುವಾಗ ಸರಿಪಡಿಸಿಕೊಂಡಿದ್ದರು. ಆದರೆ, ಶಿಕ್ಷಣ ಇಲಾಖೆಯ ದಾಖಲೆಯಲ್ಲಿದ್ದ ಪ್ರವೇಶ ಪತ್ರದ ಪ್ರತಿಯಲ್ಲಿ ಸನ್ನಿ ಲಿಯೋನ್ ಫೋಟೊ ಇತ್ತು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರಮಾದ ಗಮನಕ್ಕೆ ಬಂದ ನಂತರ ಅಭ್ಯರ್ಥಿಯ ಗುರುತಿನ ಪತ್ರ ಪರಿಶೀಲಿಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡಲಾಗಿದೆ.

ಎಫ್‌ಐಆರ್ ದಾಖಲು: 'ಪ್ರಕರಣಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರದ ಮುಖ್ಯಸ್ಥ ಚನ್ನಪ್ಪ ಅವರು ಬುಧವಾರ ದೂರು ನೀಡಿದ್ದಾರೆ. ಸಿಇಎನ್ ಠಾಣೆಯಲ್ಲಿ ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ತನಿಖೆ ಕೈಗೊಳ್ಳಲಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಇಲಾಖೆಯ ಸ್ಪಷ್ಟನೆ: 'ಅಭ್ಯರ್ಥಿ ಭಾವಚಿತ್ರ ಬದಲಾವಣೆ ಪ್ರಮಾದ ಇಲಾಖೆಯಿಂದ ಆದ ಲೋಪವಲ್ಲ. ಪರೀಕ್ಷೆ ತೆಗೆದುಕೊಂಡ ಪ್ರತಿ ಅಭ್ಯರ್ಥಿಯೂ ಸ್ವತಃ ಯೂಸರ್ ಐಡಿ, ಪಾಸ್‌ವರ್ಡ್ ಬಳಸಿ ನೋಂದಣಿ ಮಾಡಿಕೊಳ್ಳುತ್ತಾರೆ. ಎಲ್ಲ ಮಾಹಿತಿ, ಫೋಟೊ ಅವರೇ ಅಪ್‌ಲೋಡ್ ಮಾಡುತ್ತಾರೆ. ಎಲ್ಲ ಮಾಹಿತಿ ಸರಿ ಇದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಅವಕಾಶವಿರುತ್ತದೆ. ನಂತರವೇ ನಿಗದಿತ ಅರ್ಜಿ ಶುಲ್ಕ ಪಾವತಿಸಬಹುದು. ಅರ್ಜಿಯ ಮುದ್ರಿತ ಪ್ರತಿ ಪಡೆಯಬಹುದು. ಇಲಾಖೆಯ ತಂತ್ರಾಂಶ ಸಂಪೂರ್ಣ ಸುರಕ್ಷತೆ ಹೊಂದಿದೆ. ಹಾಗಾಗಿ, ಯಾವುದೇ ಲೋಪವಾಗಿಲ್ಲ' ಎಂದು ಆಯುಕ್ತರ ಕಚೇರಿ ಸ್ಪಷ್ಟನೆ ನೀಡಿದೆ

ಮೋದಿ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು: 24 ಗಂಟೆಯೊಳಗೆ ಸುತ್ತೋಲೆ ವಾಪಸ್

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ ಪ್ರಗತಿ ಪ್ರತಿಮೆಯನ್ನು ಇದೇ 11 ರಂದು ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆಗೆ ಮಾಡುವ ಕಾರ್ಯಕ್ರಮಕ್ಕೆ ಜಿಲ್ಲೆಯ ಪದವಿಪೂರ್ವ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಕರೆತರುವಂತೆ ಹೊರಡಿಸಿದ್ದ ಸುತ್ತೋಲೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು 24 ಗಂಟೆ ಒಳಗಾಗಿ ವಾಪಸ್ ಪಡೆದಿದ್ದಾರೆ.

ಮಂಗಳವಾರ ಬೆಳಿಗ್ಗೆ ಹೊರಡಿಸಿದ ಸುತ್ತೋಲೆ ಮಾಧ್ಯಮಗಳಿಗೆ ಸೋರಿಕೆಯಾಗಿರುವ ವಿಷಯ ಗೊತ್ತಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಜಿಲ್ಲಾಧಿಕಾರಿ ಆರ್. ಲತಾ, ಸುತ್ತೋಲೆ ವಾಪಸು ಪಡೆಯುವಂತೆ ಸೂಚಿಸಿದ್ದರು.

ಅದರ ಬೆನ್ನಲೇ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ರಾತ್ರಿ ಮತ್ತೊಂದು ಸುತ್ತೋಲೆ ಹೊರಡಿಸಿ, 'ಈ ಮೊದಲಿನ ಸುತ್ತೋಲೆ ವಾಪಸ್ ಪಡೆದಿರುವುದಾಗಿ' ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, 'ಅಂಥ ಯಾವುದೇ ಸೂಚನೆ ಅಥವಾ ಚರ್ಚೆ ನಮ್ಮ ಕಡೆಯಿಂದ ಆಗಿಲ್ಲ. ನಾನು ಯಾವುದೇ ಕಾಲೇಜಿನ ಉಪನ್ಯಾಸಕರು ಮತ್ತು ಪ್ರಾಂಶುಪಾಲರನ್ನು ಭೇಟಿ ಮಾಡಿಲ್ಲ. ಈ ಬಗ್ಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೊತೆ ಚರ್ಚಿಸುತ್ತೇನೆ' ಎಂದಿದ್ದಾರೆ.

ಸುತ್ತೋಲೆಯಲ್ಲಿ ಏನಿತ್ತು?: 'ಪ್ರಧಾನಿ ಬರುತ್ತಿರುವ ಪ್ರಯುಕ್ತ, ನ. 2ರಂದು ನಡೆದ ಪ್ರಾಂಶುಪಾಲರ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಿದಂತೆ, ಎಲ್ಲ ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ನಿಗದಿಪಡಿಸಿದಷ್ಟು ವಿದ್ಯಾರ್ಥಿಗಳನ್ನು ನೋಡಲ್ ಅಧಿಕಾರಿಗಳ ಮೂಲಕ ಕಾಲೇಜಿನಿಂದ ಹೊರಡುವ ಬಸ್ಸಿನಲ್ಲಿ ಕರೆದುಕೊಂಡು ಬರಬೇಕು. ತಪ್ಪಿದರೆ ಮುಂದಿನ ಆಗು ಹೋಗುಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರೇ ಜವಾಬ್ದಾರರಾಗಿರುತ್ತಾರೆ' ಎಂದು ಎಚ್ಚರಿಕೆ ನೀಡಲಾಗಿತ್ತು.

ಕೆಂಪೇಗೌಡ ಪ್ರತಿಮೆ ಅನಾವರಣಕ್ಕೆ 3,430 ಕೆಎಸ್‌ಆರ್‌ಟಿಸಿ ಬಸ್

ರಾಮನಗರ: ಬೆಂಗಳೂರಿನ ವಿಮಾನ ನಿಲ್ದಾಣದಲ್ಲಿ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ 'ಪ್ರಗತಿ ಪ್ರತಿಮೆ'ಯನ್ನು ಪ್ರಧಾನಿ ನರೇಂದ್ರ ಮೋದಿ ಇದೇ 11ರಂದು ಉದ್ಘಾಟಿಸಲಿದ್ದು, ಕಾರ್ಯಕ್ರಮಕ್ಕೆ ಬರುವವರಿಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್‌ಆರ್‌ಟಿಸಿ) 3,420 ಬಸ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಕುರಿತು ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರವು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದಿದ್ದು, ಈ ಕಾರ್ಯಕ್ರಮಕ್ಕೆ ಅಗತ್ಯ ಪ್ರಮಾಣದಲ್ಲಿ ಬಸ್ ಸೇವೆ ಒದಗಿಸುವಂತೆ ಮನವಿ ಮಾಡಿದೆ. ಇದರಿಂದಾಗಿ ಇದೇ 10 ಹಾಗೂ 11ರಂದು ರಾಜ್ಯದಾದ್ಯಂತ ಕೆಎಸ್‌ಆರ್‌ಟಿಸಿ ಬಸ್‌ಗಳ ಸೇವೆಯಲ್ಲಿ ವ್ಯತ್ಯಯ ಆಗುವ ಸಾಧ್ಯತೆ ಇದೆ.

ಎಲ್ಲಿ ಎಷ್ಟೆಷ್ಟು ಬಸ್: ಬೆಂಗಳೂರು ನಗರ ವ್ಯಾಪ್ತಿಯಲ್ಲಿ 1,200 ಬಸ್, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗಳಿಂದ ತಲಾ 400 ಕೆಎಸ್‌ಆರ್‌ಟಿಸಿ ಬಸ್ ಸಂಚರಿಸಲಿವೆ. ಅಂತೆಯೇ ಮಂಡ್ಯದಿಂದ 200, ತುಮಕೂರಿನಿಂದ 160, ಮೈಸೂರು ಹಾಗೂ ಹಾಸನದಿಂದ ತಲಾ 100 ಬಸ್ ಸೇವೆ ಇರಲಿದೆ.

ಉಳಿದಂತೆ ಶಿವಮೊಗ್ಗದಿಂದ 20 ಹಾಗೂ ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಾಮರಾಜನಗರದಿಂದ ತಲಾ 10 ಬಸ್ ಮೀಸಲಿಡಲಾಗಿದೆ.

ಲಿಪಿ ವಿನ್ಯಾಸವು ಇದೇ 13ರಂದು ಬಳಕೆಗೆ ಲಭ್ಯ

ಕನ್ನಡದ 'ಕಿಟೆಲ್' ಲಿಪಿ: ಡಿಜಿಟಲ್ ಮರುಸೃಷ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಬಳಸಿದ್ದ ಹಳೆಯ ಕನ್ನಡ ಲಿಪಿಯನ್ನು ಡಿಜಿಟಲ್ ರೂಪದಲ್ಲಿ ಪ್ರಶಾಂತ್ ಪಂಡಿತ್ ಮರುಸೃಷ್ಟಿಸಿದ್ದು, ಆ ಲಿಪಿ ವಿನ್ಯಾಸವು ಇದೇ 13ರಂದು ಬಳಕೆಗೆ ಲಭ್ಯವಾಗಲಿದೆ.

1860ರಿಂದ ಮುದ್ರಣ ಯಂತ್ರ ಬಳಸಿ ವಿವಿಧ ಕೃತಿಗಳಲ್ಲಿ ಕಿಟೆಲ್ ಬಳಸಿದ್ದ ಕನ್ನಡದ ಹಳೆಯ ಲಿಪಿ ಪ್ರಶಾಂತ್ ಅವರಿಗೆ ಆಕರ್ಷಕವಾಗಿ ಕಂಡಿತು. ಅದನ್ನು ಹೊಸಕಾಲದಲ್ಲಿಯೂ ಮುಕ್ತ ಬಳಕೆಗೆ ಒದಗಿಸಬೇಕೆಂಬ ಉಮೇದಿನಿಂದ ಎರಡು ವರ್ಷಗಳ ಸುದೀರ್ಘಾವಧಿ ಪ್ರಯತ್ನದಿಂದ ಲಿಪಿ ವಿನ್ಯಾಸ ಮಾಡಿದ್ದಾರೆ. ಒಬ್ಬರು ಎಂಜಿನಿಯರ್ ಹಾಗೂ ಮತ್ತೊಬ್ಬರು ಲಿಪಿ ವಿನ್ಯಾಸಕಾರರು ಈ ಕೆಲಸಕ್ಕೆ ನೆರವಾಗಿದ್ದಾರೆ. ಈ ಲಿಪಿ ವಿನ್ಯಾಸಕ್ಕೆ 'ಕಿಟೆಲ್' ಎಂದೇ ಹೆಸರಿಟ್ಟಿದ್ದಾರೆ.

'ನೀಲಿ ಹಕ್ಕಿ' ಎಂಬ ಚಲನಚಿತ್ರಕ್ಕೆ ಸಂಕಲನ ಮಾಡಿದ ಮೇಲೆ ಕಿಟೆಲ್ ಅವರನ್ನು ಕುರಿತು ಒಂದು ಸಾಕ್ಷ್ಯಚಿತ್ರ ತಯಾರಿಸಲು ಪ್ರಶಾಂತ್ ನಿರ್ಧರಿಸಿದರು. ಅದಕ್ಕೆ ಹಣಕಾಸಿನ ನೆರವನ್ನು ನಗರದಲ್ಲಿ ಇರುವ ಜರ್ಮನ್ ಕಾನ್ಸುಲೇಟ್ ಒದಗಿಸಬಹುದೇನೊ ಎಂದು ಅಲ್ಲಿಗೆ ಎಡತಾಕಿದರು. ಆದರೆ, ಅಲ್ಲಿ ಸಾಕ್ಷ್ಯಚಿತ್ರ ಅಥವಾ ಕಿರುಚಿತ್ರಕ್ಕೆ ಅಗತ್ಯವಿದ್ದ ಬಜೆಟ್ ದೊರೆಯಲಿಲ್ಲ. ಬದಲಿಗೆ, ಕಿಟೆಲ್ ಲಿಪಿ ವಿನ್ಯಾಸವನ್ನು ಡಿಜಿಟಲ್ ರೂಪದಲ್ಲಿ ದಕ್ಕಿಸಿಕೊಡುವ ಯೋಜನೆಗೆ ಬೆಂಬಲ ದೊರೆಯಿತು.

ಪ್ರಶಾಂತ್ ಪಂಡಿತ್

ಕೋವಿಡ್ ವ್ಯಾಪಕವಾಗಿದ್ದ ಕಾಲಘಟ್ಟದಲ್ಲಿನ ಸಮಯವನ್ನೇ ಬಳಸಿಕೊಂಡು, ಮಂಗಳೂರಿನ ಬಲ್ಮಠ ಇನ್‌ಸ್ಟಿಟ್ಯೂಟ್ ಆಫ್ ಪ್ರಿಂಟಿಂಗ್ ಟೆಕ್ನಾಲಜಿಯಲ್ಲಿ ಇದ್ದ ಹಳೆಯ ಕಾಲದ ಅಕ್ಷರ ವಿನ್ಯಾಸದ ಮೊಳೆಗಳನ್ನೆಲ್ಲ ಪ್ರಶಾಂತ್ ಗಮನಿಸಿದರು. ಅಲ್ಲಿದ್ದ ಕಿಟೆಲ್ ಅವರ ಹಳೆಯ ಕೃತಿಗಳನ್ನು ಪರಾಮರ್ಶಿಸಿ, ಒಂದೊಂದೇ ಲಿಪಿ ವಿನ್ಯಾಸವನ್ನು ದಾಖಲಿಸಿಕೊಂಡರು. ಅದನ್ನು ಡಿಜಿಟಲೀಕರಿಸಿ ಮರುಸೃಷ್ಟಿಸಿದ್ದಾರೆ.



1ನೇ ವಿಧದ ಉದಾಹರಣೆಗಳು—ಅವನಿಗೆ, ತಿಳಿಯುವ, ಗಲಿಬಿಲಿ ಇತ್ಯಾದಿ.—2ನೇ ವಿಧದ ಉದಾಹರಣೆಗಳು—ನರನೇ, ತರದಿಂ, ಅವನಂ ಇತ್ಯಾದಿ.—3ನೇ ವಿಧದ ಉದಾಹರಣೆಗಳು—ಆಗಲಿ, ಕೇಳಲೆ, ಭೋಜನ ಇತ್ಯಾದಿ.—4ನೇ ವಿಧದ ಉದಾಹರಣೆಗಳು—ಇಟ್ಟಾ, ಕೇಳೋ, ಪುಣ್ಯಂ ಇತ್ಯಾದಿ.

ಉದಾಹರಣೆಗಳು—5ನೇ ಶ್ಲೋಕದಲ್ಲಿ ಸರ್ವ ಗ್ರಹಂಗಳೊಳ್ಗೆ ಎಂಬದು; 222ನೇದರಲ್ಲಿ ಚಂದನ ದ್ರುಮಂಗಳಂ ಎಂಬದು; 227ನೇದರಲ್ಲಿ ನಡೆದುದು ಗ್ರೀಷ್ಮ ಎಂಬದು; 242ನೇದರಲ್ಲಿ ಅಲರಲರ್ಗಳಾ ಎಂಬದು; 28ನೇದರಲ್ಲಿ ಮುಕ್ತಿಗೆ ಜ್ಞಾನ ಎಂಬದು. ಈ ಉದಾಹರಣೆಗಳನ್ನು ತಿಳುಕೊಳ್ಳುವದಕ್ಕಾಗಿ ಅಲ್ಲಲ್ಲಿಯ ಗಣಗಳನ್ನು ಶೋಧಿಸ ಬೇಕು.

ಉದಾಹರಣೆಗಳು—ಎಲೋ, ಇಗೋ, ಕಡೇ, ಅನೀತಿ, ವಿರೋಧ, ಸಹಾಯ ಇತ್ಯಾದಿ ಪ್ರಕಾರವಾಗಿ ಒಂದು ಗಣವು ಆರಂಭಿಸಲೂ ಇರಲೂ ಬಾರದು; ಆದರೆ ಎಲೊ, ಇಗೊ, ಕಡೆಯ, ಧರೆಯು, ನೀತಿ, ಬುದ್ಧಿ, ವಾಕ್ಯ, ದೇವ, ನೋಡು ಎಂಬ ಪ್ರಕಾರವು ಒಂದು ಗಣದ ಆರಂ

1865ರಲ್ಲಿ ಕಿಟೆಲ್ ಬರೆದು ಪ್ರಕಟಿಸಿದ್ದ 'ಸಣ್ಣ ಕರ್ನಾಟಕ ಕಾವ್ಯಮಾಲೆ' ಕೃತಿಯಲ್ಲಿ ಬಳಸಿರುವ ಲಿಪಿ ವಿನ್ಯಾಸದ ಮಾದರಿ

'ಲಿಪಿ ವಿನ್ಯಾಸದ ಕುರಿತು ಯಾವುದೇ ದಾಖಲೆಗಳು ಇರಲಿಲ್ಲ. ನಮ್ಮ ಆಯ್ಕೆಯ ದಾರಿ ಸರಿಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಯುಕೆಯಲ್ಲಿ ಮುದ್ರಣ ಲಿಪಿಯ ಕುರಿತೇ ಪಿಎಚ್.ಡಿ ಮಾಡಿದ್ದ ಪ್ರಿಯಾ ಅವರ ನೆರವು ಸಿಕ್ಕಿತು. ಜರ್ಮನ್ ಕಾನ್ಸುಲೇಟ್‌ನವರ ಅನುಮತಿ ಪಡೆದ ನಂತರ ಇದನ್ನು ಮುಕ್ತ ಬಳಕೆಗೆ ಬಿಡುಗಡೆ ಮಾಡಲು ನಿರ್ಧರಿಸಿದೆವು' ಎಂದು ಪ್ರಶಾಂತ್ ಪ್ರತಿಕ್ರಿಯಿಸಿದರು.

ಇದೇ 13ರಂದು ಬನಶಂಕರಿಯ 'ಸುಚಿತ್ರ' ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಲಿಪಿ ಬಿಡುಗಡೆ ನಡೆಯಲಿದ್ದು, ಕಿಟೆಲ್ ವಂಶಸ್ಥರಾದ ಆಲ್ಮುತ್ ಮೇಯರ್ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಂಚಿ ಫೌಂಡೇಷನ್ ಈ ಕಾರ್ಯಕ್ರಮ ಆಯೋಜಿಸಿದೆ. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಫಾಂಟ್‌ಗಳನ್ನು ಬಿಡುಗಡೆ ಮಾಡಲಿದ್ದಾರೆ.

ಕಾವೇರಿ ದಕ್ಷಿಣ ವನ್ಯಜೀವಿ ಅಭಯಾರಣ್ಯ ಘೋಷಣೆ

ಚೆನ್ನೈ(ಪಿಟಿಐ): 68,640 ಹೆಕ್ಟೇರ್ ಪ್ರದೇಶದ ಕಾವೇರಿ ದಕ್ಷಿಣ ವನ್ಯಜೀವಿ ಅಭಯಾರಣ್ಯವನ್ನು ತಮಿಳುನಾಡು ಸರ್ಕಾರವು 17ನೇ ವನ್ಯಜೀವಿ ಅಭಯಾರಣ್ಯವಾಗಿ ಘೋಷಿಸಿ ಅಧಿಸೂಚನೆ ಹೊರಡಿಸಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮಂಗಳವಾರ ಹೇಳಿದ್ದಾರೆ.

ಟ್ವಿಟರ್ ಚಿತ್ರ

ಈ ಅಭಯಾರಣ್ಯವು ಕೃಷ್ಣಗಿರಿ ಮತ್ತು ಧರ್ಮಪುರಿ ಜಿಲ್ಲೆಗಳಲ್ಲಿನ ಮೀಸಲು ಅರಣ್ಯ ಪ್ರದೇಶಗಳನ್ನು ಒಳಗೊಂಡಿದೆ. ಈ ಅರಣ್ಯ ಪ್ರದೇಶವು 35 ಸಸ್ತನಿ ಹಾಗೂ 238 ಪಕ್ಷಿ ಪ್ರಭೇದಗಳ ಆವಾಸಸ್ಥಾನವಾಗಿದೆ. ನಾಲ್ಕು ಕೊಂಬಿನ ಹುಲ್ಲೆ, ಆಮೆ, ಜವುಗು ಮೊಸಳೆಗಳು ಕೂಡ ಈ ಕಾಡಿನಲ್ಲಿವೆ.

'ಈ ಪ್ರದೇಶವು ವಿಶಿಷ್ಟ ಪರಿಸರ, ಪ್ರಾಣಿ ಸಂಕುಲ ಹೊಂದಿದೆ ಮತ್ತು ದಕ್ಷಿಣ ಭಾರತದಲ್ಲೇ ಆನೆಗಳ ಪ್ರಮುಖ ಆವಾಸ ಸ್ಥಾನವಾಗಿದೆ' ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

'ಸರ್ಕಾರಿ ಸ್ವಾಮ್ಯದ ತಮಿಳುನಾಡು ಗ್ರೀನ್ ಕ್ಲೈಮೇಟ್ ಕಂಪನಿಯ ಜೊತೆ ಸೇರಿ ನಮ್ಮ ರಾಜ್ಯದ ಸಮೃದ್ಧ ಜೀವವೈವಿಧ್ಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯನ್ನಿರಿಸಿದ್ದೇವೆ' ಎಂದು ಸ್ಟಾಲಿನ್ ಟ್ವೀಟ್ ಮಾಡಿದ್ದಾರೆ.

ಜ್ಞಾನವಾಪಿ ಮಸೀದಿ: ನ.14ಕ್ಕೆ ತೀರ್ಪು

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ಪತ್ತೆಯಾಗಿದೆ ಎಂದು ಹೇಳಲಾದ ಶಿವಲಿಂಗದ ಪೂಜೆಗೆ ಅನುಮತಿ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪು ಪ್ರಕಟಿಸುವುದನ್ನು ವಾರಾಣಸಿಯ ತ್ವರಿತ ನ್ಯಾಯಾಲಯವು ಮಂಗಳವಾರ ಮುಂದೂಡಿದೆ.

ನ. 8ಕ್ಕೆ ತೀರ್ಪು ಪ್ರಕಟಿಸುವುದಾಗಿ ಕೋರ್ಟ್ ಈ ಮೊದಲು ಹೇಳಿತ್ತು. 'ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ಮಹೇಂದ್ರ ಪಾಂಡೆ ಅವರು ರಜೆಯಲ್ಲಿರುವ ಕಾರಣ, ತೀರ್ಪು ಪ್ರಕಟಿಸುವುದನ್ನು ನ. 14ಕ್ಕೆ ಕೋರ್ಟ್ ಮುಂದೂಡಿದೆ' ಎಂದು ಸಹಾಯಕ ಸರ್ಕಾರಿ ವಕೀಲ ಸುಲಭ್ ಪ್ರಕಾಶ್ ಹೇಳಿದ್ದಾರೆ.

ಅ.27ರಂದು ಅರ್ಜಿ ವಿಚಾರಣೆ ಪೂರ್ಣಗೊಳಿಸಿದ್ದ ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ಮಹೇಂದ್ರ ಪಾಂಡೆ ತೀರ್ಪು ಕಾಯ್ದಿರಿಸಿದ್ದರು.

ಜ್ಞಾನವಾಪಿ ಸಂಕೀರ್ಣಕ್ಕೆ ಮುಸ್ಲಿಮರ ಪ್ರವೇಶ ನಿಷೇಧಿಸಬೇಕು. ಸನಾತನ ಸಂಘಕ್ಕೆ ಸಂಕೀರ್ಣ ಹಸ್ತಾಂತರಿಸಬೇಕು. ಅಲ್ಲಿ ಪತ್ತೆಯಾಗಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂದು ಕೋರಿ ಮೇ 24 ರಂದು 'ವಿಶ್ವ ವೈದಿಕ ಸನಾತನ ಸಂಘದ' ಪ್ರಧಾನ ಕಾರ್ಯದರ್ಶಿ ಕಿರಣ್ ಸಿಂಗ್ ವಾರಾಣಸಿ ಜಿಲ್ಲಾ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಎ.ಕೆ. ವಿಶ್ವೇಶ್ ಮೇ 25 ರಂದು ಪ್ರಕರಣ ತ್ವರಿತ ನ್ಯಾಯಾಲಯಕ್ಕೆ ವರ್ಗಾಯಿಸಿದ್ದರು.

ವಿದ್ಯಾರ್ಥಿನಿ ವರಿಸಲು ಲಿಂಗ ಬದಲಿಸಿಕೊಂಡ ದೈಹಿಕ ಶಿಕ್ಷಣ ಶಿಕ್ಷಕಿ

ಜೈಪುರ (ಪಿಟಿಐ): ವಿದ್ಯಾರ್ಥಿನಿಯ ಪ್ರೇಮಪಾಶಕ್ಕೆ ಸಿಲುಕಿದ ಶಿಕ್ಷಕಿಯೊಬ್ಬರು ಆಕೆಯನ್ನು ವಿವಾಹವಾಗುವುದಕ್ಕಾಗಿ ತಮ್ಮ ಲಿಂಗ ಬದಲಾಯಿಸಿಕೊಂಡಿರುವ ಘಟನೆ ರಾಜಸ್ಥಾನದ ಭರತ್‌ಪುರದಲ್ಲಿ ನಡೆದಿದೆ.

ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕಿ 29 ವರ್ಷದ ಮೀರಾ, ವಿದ್ಯಾರ್ಥಿನಿ ಕಲ್ಪನಾಳನ್ನು ವಿವಾಹವಾಗಲು ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ಕಳೆದ 5 ವರ್ಷದಿಂದ ಪರಸ್ಪರ ಪ್ರೀತಿಸುತ್ತಿದ್ದ ಮೀರಾ ಹಾಗೂ ಕಲ್ಪನಾ ಭಾನುವಾರ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದು, ಇವರ ವಿವಾಹಕ್ಕೆ ಎರಡೂ ಕುಟುಂಬದ ಸಮ್ಮತಿ ದೊರಕಿದೆ.

ಕಲ್ಪನಾ ಕಬಡ್ಡಿ ಕ್ರೀಡಾಪಟು. ಕ್ರೀಡಾ ಜೀವನದಲ್ಲಿ ಆಕೆಯನ್ನು ಸಾಕಷ್ಟು ಪ್ರೋತ್ಸಾಹಿಸಿ ಮುನ್ನೆಲೆಗೆ ತಂದ ಮೀರಾ ಈಗ ತಮ್ಮ ಹೆಸರನ್ನು ಆರವ್ ಕುಂತಾಲ್ ಎಂದು ಬದಲಿಸಿಕೊಂಡಿದ್ದಾರೆ.

'ಕಲ್ಪನಾಳನ್ನು ನೋಡಿದ ಮೇಲೆ ತಾನು ಗಂಡಾಗಿ ಜನಿಸಬೇಕಿತ್ತು ಎಂದು ಸಾಕಷ್ಟು ಬಾರಿ ಅಂದುಕೊಂಡಿದ್ದೆ. ನನ್ನ ಮನದ ಇಂಗಿತವನ್ನು ಕಲ್ಪನಾ ಜತೆ ಹಂಚಿಕೊಂಡೆ. ಕಲ್ಪನಾ ಕೂಡ ನನ್ನ ಮನದಾಸೆಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದರಿಂದ ಲಿಂಗ ಪರಿವರ್ತನೆ ಮಾಡಿಕೊಳ್ಳಲು ಸಿದ್ಧಳಾದೆ' ಎನ್ನುತ್ತಾರೆ ಮೀರಾ.

ಇಡಬ್ಲ್ಯುಎಸ್ ಕೋಟಾ ಶೀಘ್ರ ಅರ್ಜಿ: ಸ್ಟಾಲಿನ್

ಚೆನ್ನೈ (ಪಿಟಿಐ): ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಶೇ 10ರಷ್ಟು ಮೀಸಲಾತಿ ನೀಡುವ ಸಂವಿಧಾನ ತಿದ್ದುಪಡಿಯನ್ನು ಎತ್ತಿಹಿಡಿದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ವಿರುದ್ಧ ಪರಿಶೀಲನಾ ಅರ್ಜಿ ಸಲ್ಲಿಸುವುದಾಗಿ ತಮಿಳುನಾಡು ಡಿಎಂಕೆ ಮಂಗಳವಾರ ಹೇಳಿದೆ.



ಎಂ.ಕೆ. ಸ್ಟಾಲಿನ್

ಈ ಸಂಬಂಧ ಸರ್ಕಾರವು ಇದೇ 12ರಂದು ಸರ್ವಪಕ್ಷಗಳ ಸಭೆ ಕರೆದಿದೆ.

'ಇಡಬ್ಲ್ಯುಎಸ್ ಮೀಸಲಾತಿಯು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ವಿರೋಧಿಯಾಗಿದೆ' ಎಂದು ಸರ್ಕಾರ ವಾದಿಸಿದೆ. ತಮಿಳುನಾಡು ಸರ್ಕಾರವು ಶೇ 10ರಷ್ಟು ಇಡಬ್ಲ್ಯುಎಸ್ ಮೀಸಲಾತಿಯನ್ನು ಜಾರಿಗೊಳಿಸಿಲ್ಲ.

ಇಡಬ್ಲ್ಯುಎಸ್ ಮೀಸಲಾತಿಯಿಂದ ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ಸುದೀರ್ಘ ಹೋರಾಟಕ್ಕೆ ಹಿನ್ನಡೆಯಾಗುತ್ತದೆ ಎಂದು ಸ್ಟಾಲಿನ್ ಹೇಳಿದ್ದರು.

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFE ACT AT BENGALURU
Misc. No. 1068/2022

BETWEEN
The Competent Authority for M/s Injaz International and Associated Group of Entities 3rd Floor, Mini V.V. Tower, Podium Block, Dr. Ambedkar Veedhi, Bengaluru - 560 001.
Represented by its Competent Authority S.N. Subramanya, Assistant Commissioner, Aged about 57 years.
Petitioner

And:
M/s. Injaz International, A Partnership firm with registration represented by its Managing Director / Partner Suhail Ahmed Sharif, No. 6, Srivatsa Arcade, 12th Cross, Wilson Garden, Bengaluru - 560 027 and 3 others.

Notice to Respondents No. 1, 2 & 3

1. M/s. Injaz International A Partnership firm with registration represented by its Managing Director / Partner Suhail Ahmed Sharif, No. 6, Srivatsa Arcade, 12th Cross, Wilson Garden, Bengaluru - 560 027
2 Suhail Ahmed Shariff, S/o late Yakbal Pasha, Partner of Injaz International and Director of Injaz Builders and Developer Private Limited, R/o Sheriff Buildings, Rivera Apartments, Basappa Road, Near Double Road, Shanthinagar, Bengaluru- 560 027.
3. Misbauddin S. S/o Salahuddin K, partner of Injaz International and Director of Injaz Builders and Developer Private Limited, aged about 36 years, No. 25, Anwar Manzil, 1st Floor, Opp. Mecca Masjid, BHEL Layout, Jayanagar, Bengaluru - 560 041.

Wheareas the petitioner has filled the above petition under section 5(2) of the KPIDF Act 2004 against Respondents.
The Respondents No. 1, 2, and 3 are hereby issued show cause notice u/s 12(1) of KPIDFE Act 2004, to appear in the court of XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petition on 29th November 2022 at 11.00 O' Clock in the forenoon.
Take notice that in default to your appearance on the date above mentioned petition will be heard and determined in your absence.
Given under my hand and seal of the court on this day 5th November 2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Benglauru
DIPR/CP/JA/3002/2022-23

IN THE COURT OF THE XCI ADDI, CITY CIVIL, AND SESSIONS JUDGE AND SPECIAL JUDGE FOR KPIDFE ACT AT BENGALURU
Misc. No. 720/2022

BETWEEN
The Competent Authority for M/s INJAZ International and Associated Group of Entities, 3rd floor, Podium Block, V.V. Tower Bengaluru-560 001.
Podium Block, Dr. Ambedkar Veedhi, Bengaluru-560 001.
Represented by its Competent Authority S.N. Subramanya, Assistant Commissioner, Aged about 57 years.
Petitioner

And:
M/s. INJAZ International A Partnership firm with registration Represented by its Managing Director / Partner Suhail Ahmed Sharif, No.6, Srivatsa Arcade, 12th Cross, Wilson Garden, Bengaluru-560 027 and 26 others
Respondents

Notice to the Respondent No. 11(a), 11(b) and 11(c)

11(a). Mohamed Abdul Khan S/o Abid Khan, Aged about 53 years c/o H. Ahmed Khan, No. 3/C4, C.V. Road, A Layout, Bannimantapa, Mysore-570015.
11(b). Mohamed Zafrulla Khan S/o Abid Khan, Aged about 48 years, No. 212, 7th Cross, 4th Main Road, Subhash Nagar, Narashimha Raja Mohalla, Mysore-570007.
11(c). Firdos A.K. W/o Razak K.M. No. 301, Arvinds Kabini Apartment, Subramanyapura, Main Road, Near Kadirenahalli Petrol Bunk, Kadirenahalli, Banashankari 2nd Stage, Bidarahalli, Bengaluru South-560 070.

Whereas, the Petitioner has filed the above Petition under section 5(2) of the KPIDEE Act 2004 against Respondents.
The Respondent No.11(a), 11(b) and 11(c) are hereby issued show cause notice u/s 12(1) of the KPIDEE Act 2004, to appear in court of the XCI Addl City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petition on 30.11.2022 at 11:00 O' Clock in the forenoon
Take notice that in default of your appearance on the date above mentioned Petition will be heard and determined in your absence.
Given under my hand and seal of the court on this day of 05.11.2022.
Sri Venkatesh P. Dalwai
Special Public Prosecutor.
By Order of the Court
Sd/-
Assistant Registrar
City Civil Court Bengluru
DIPR/CP/JA/3003/2022-23

ಜಿ–20 ಅಧ್ಯಕ್ಷತೆ ಹೆಮ್ಮೆಯ ಸಂಗತಿ: ಮೋದಿ

ನವದೆಹಲಿ (ಪಿಟಿಐ): 'ಸ್ವಾತಂತ್ರ್ಯ ಅಮೃತ ಮಹೋತ್ಸವದ ವರ್ಷದಲ್ಲೇ ಭಾರತವು ಜಿ–20 ಅಧ್ಯಕ್ಷತೆ ವಹಿಸಿಕೊಳ್ಳುವುದು ಹೆಮ್ಮೆಯ ಸಂಗತಿ. ದೇಶದ ಪಾಲಿಗೆ ಇದು ಉತ್ತಮ ಅವಕಾಶ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಮಂಗಳವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾರತದ 'ಜಿ–20' ಅಧ್ಯಕ್ಷತೆ ಕುರಿತ ಲಾಂಛನ, ಧ್ಯೇಯವಾಕ್ಯ ಹಾಗೂ ವೆಬ್‌ಸೈಟ್ ಅನಾವರಣಗೊಳಿಸಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ನಂತರ ದೇಶವು ಅಭಿವೃದ್ಧಿಯ ಪಥದಲ್ಲಿ ಸಾಗಲು ಎಲ್ಲಾ ಸರ್ಕಾರಗಳು ಹಾಗೂ ಪ್ರತಿ ನಾಗರಿಕರೂ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ. ಪ್ರಜಾಪ್ರಭುತ್ವವು ಸಂಸ್ಕೃತಿಯಾದಾಗ ಸಂಘರ್ಷ ಕೊನೆಗೊಳ್ಳುತ್ತದೆ ಎಂಬುದನ್ನು ಭಾರತವು ಇಡೀ ಜಗತ್ತಿಗೆ ತೋರಿಸಿಕೊಡಲಿದೆ' ಎಂದು ಮೋದಿ ತಿಳಿಸಿದ್ದಾರೆ.

'ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡುವಾಗ ಅಭಿವೃದ್ಧಿ ಮತ್ತು ಪ್ರಕೃತಿ ಜೊತೆಯಾಗಿ ಸಾಗಬೇಕು' ಎಂದಿದ್ದಾರೆ.

ಭಾರತವು ಡಿಸೆಂಬರ್ 1ರಂದು ಜಿ–20 ಅಧ್ಯಕ್ಷತೆ ವಹಿಸಿಕೊಳ್ಳಲಿದೆ. ಸದ್ಯ ಇಂಡೊನೇಷ್ಯಾ ಈ ಗುಂಪಿನ ಅಧ್ಯಕ್ಷತೆ ಹೊಂದಿದೆ. ಈ ತಿಂಗಳ 15 ಮತ್ತು 16ರಂದು ಬಾಲಿಯಲ್ಲಿ ಜಿ–20 ಸಮ್ಮೇಳನ ನಡೆಯಲಿದ್ದು, ಇದರಲ್ಲಿ ಪ್ರಧಾನಿ ಮೋದಿ ಪಾಲ್ಗೊಳ್ಳುವ ಸಾಧ್ಯತೆ ಇದೆ.

ಕರ್ನಾಟಕ ಸರ್ಕಾರ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಶಹಾಬಾದ

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)

ಸಂಖ್ಯೆ:ಶಿಅಯೋಚಿ/ಮಮಅಇ/ಐಸಿಡಿಎಸ್/ಮೊಟ್ಟೆ/ಟೆಂಡರ್/2022–23 ದಿನಾಂಕ: 07–11–2022

ಶಹಾಬಾದ ತಾಲೂಕಿನ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಅಗತ್ಯವಿರುವ ಕೋಳಿ ಮೊಟ್ಟೆ ಸರಬರಾಜುಗಾಗಿ ಇ' – ಪ್ರೊಕ್ಯೂರ್‌ಮೆಂಟ್' ಮರು ಟೆಂಡರ್ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ : ಮಮಇ 169 ಐಸಿಡಿ 2021, ದಿನಾಂಕ : 22.03.2022 ರಂತೆ ಶಹಾಬಾದ ತಾಲೂಕಿನ 255 ಅಂಗನವಾಡಿ ಕೇಂದ್ರದ ಫಲಾನುಭವಿಗಳಾದ 06 ತಿಂಗಳಿಂದ 06 ವರ್ಷದೊಳಗಿನ ಮಕ್ಕಳಿಗೆ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ವಿತರಿಸಲು ಅಗತ್ಯವಿರುವ ಕೋಳಿ ಮೊಟ್ಟೆಗಳ ಸರಬರಾಜು ಮಾಡಲು ದ್ವಿ–ಲಕೋಟೆ ಪದ್ಧತಿ ಪ್ರಕಾರ ನಿಬಂಧನೆಗಳಿಗೆ ಒಳಪಟ್ಟು ಅನುಬಂಧ–2ರಲ್ಲಿ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಕರ್ನಾಟಕ ಸರ್ಕಾರದ e-Procurement Portal ಪದ್ಧತಿಯಂತೆ http//eproc.karnataka.gov.in Online ಮುಖಾಂತರ ಅನುಬಂಧ–1ರಲ್ಲಿ ತಿಳಿಸಿದಂತೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅನುಬಂಧ–1

1) ವಸ್ತುಗಳು / ಸರಕುಗಳು : ಮೊಟ್ಟೆಗಳು, ಸಾರಿಗೆ ಸಹಿತ, 2) ಪ್ರಮಾಣ : ಮಾಸಿಕ 2,24,475/– ವಾರ್ಷಿಕ 26,93,700/–, 3) ಘಟಕ : ಸಂಖ್ಯೆಗಳು, 4) ವರ್ಷಕ್ಕೆ ಅಂದಾಜು ವೆಚ್ಚ (ರೂ.) : 1,61,62,200/–, 5) EMD (ರೂ.) : 2,42,433/–, 6) ವಿತರಣಾ ವೇಳಾಪಟ್ಟಿ : 5ನೇ, 15ನೇ ಮತ್ತು 25ನೇ ದಿನ.

ಅನುಬಂಧ–2 (ಟೆಂಡರ್ ವೇಳಾಪಟ್ಟಿ)

1) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ: ಪ್ರಾರಂಭ ದಿನಾಂಕ: 07–11–2022, 2) ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಶಹಾಬಾದ ಕಲಬುರಗಿ ಜಿಲ್ಲೆ–585228 ಇಮೇಲ್: cdposhahabad3@gmail.com, 3) ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 21.11.2022 ಸಾಯಂಕಾಲ 05:30 PM ಒಳಗೆ, 3) ಇ–ಟೆಂಡರ್ ಅನ್ನು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 25.11.2022 ಸಾಯಂಕಾಲ 05:30 PM ಒಳಗೆ, 4) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: 28.11.2022, 11:00 AM, 5) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 30.11.2022 11:00 AM, 6) ಟೆಂಡರ್‌ಗಳನ್ನು ತೆರೆಯುವ ಸ್ಥಳ : ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್, 7) ಸಂವಹನಕ್ಕಾಗಿ ವಿಳಾಸ : ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಶಹಾಬಾದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಹಾಬಾದ ತಾಲ್ಲೂಕು, ಕಲಬುರಗಿ ಜಿಲ್ಲೆ–585228, ಇಮೇಲ್: cdposhahabad3@gmail.com Mobile No-9632465520

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಶಹಾಬಾದ ಜಿ : ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/808/ಎಂ.ಸಿ&ಎ/2022–23

ಬಮೂಲ್ **ನಂದಿನಿ**

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಡಾ:ಎಂಹೆಚ್. ಮರೀಗೌಡ ರಸ್ತೆ :: ಬೆಂಗಳೂರು–29

ಐ.ಎಫ್.ಟಿ ಸಂಖ್ಯೆ : ಬಮೂಲ್/ಮಾರುಕಟ್ಟೆ(ಸಾರಿಗೆ)/ಇ–ಟೆಂಡರ್/554/2022 ದಿನಾಂಕ: 09.11.2022

ಸಾರಿಗೆ ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ

ಬೆಂಗಳೂರು ಸಹಕಾರಿ ಹಾಲು ಒಕ್ಕೂಟ ನಿ., ಬೆಂಗಳೂರುರವರಿಂದ ಈ ಕೆಳಕಂಡ ಮಾರ್ಗಗಳಿಗೆ ವಾಹನ ಹೊಂದಿರುವ ಮಾಲೀಕರಿಂದ ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಹಾಗೂ ವಾಣಿಜ್ಯ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ.

1. ಮುಖ್ಯಡೇರಿ, ಹೊಸಕೋಟೆ ಡೇರಿ ಮತ್ತು ಬೆಂಗಳೂರು ನಗರ ಹಾಗೂ ವಿವಿಧ ಗ್ರಾಮಾಂತರ ಪ್ರದೇಶಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮಾಡಿ ವಿತರಿಸುವ ಸಲುವಾಗಿ 2011ನೇ ಇಸವಿಗಿಂತ ಹಾಗೂ ಮೇಲ್ಪಟ್ಟು ನೋಂದಾವಣಿಯಾಗಿರುವ (Manufactured Year) ಇನ್ಸುಲೇಟೆಡ್ ಕಂಟೈನರ್‌ವುಳ್ಳ 3.0 ಟನ್ ಮತ್ತು 6.0 ಟನ್ ಸಾಗಾಣಿಕಾ ವಾಹನಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
2. ಮಾರುಕಟ್ಟೆ ವಿಭಾಗದ ಕಚೇರಿ ಕೆಲಸಕಾರ್ಯಗಳಿಗಾಗಿ 03 ಕಾರುಗಳಿಗೆ 2016ನೇ ಮಾದರಿ ಮತ್ತು ಮೇಲ್ಪಟ್ಟ Swift Dzire/XCENT/ TOYOTA ETIOS/HONDA AMAZE ಹಳದಿ ಬೋರ್ಡ್‌ನ ಕಾರುಗಳನ್ನು ಹೊಂದಿರುವ ವಾಹನ ಮಾಲಿಕರುಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ:

1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 09.11.2022 ರಿಂದ 30.11.2022ರ ಸಂಜೆ 5–00 ಘಂಟೆಯವರೆಗೆ.
2	ಟೆಂಡರ್ ಬಗ್ಗೆ ಸ್ಪಷ್ಟನೆ ಪಡೆಯುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 28.11.2022 ರಂದು ಸಂಜೆ 5–00 ಘಂಟೆ
3	ಟೆಂಡರ್ ಸಲ್ಲಿಸುವ/ ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 30.11.2022 ರಂದು ಸಂಜೆ 5–00 ಘಂಟೆ
4	ತಾಂತ್ರಿಕ ಟೆಂಡರ್ ಭಾಗ–1 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 02.12.2022ರಂದು ಮದ್ಯಾಹ್ನ 2.30 ಘಂಟೆ
5	ವಾಣಿಜ್ಯ ಟೆಂಡರ್ ಭಾಗ–2 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 12.12.2022ರಂದು ಮದ್ಯಾಹ್ನ 2.30ಘಂಟೆ
6	ತಾಂತ್ರಿಕ / ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಬೆಂಗಳೂರು ಡೇರಿ

ವಿ.ಸೂ:–
- ಪ್ರತಿ ಮಾರ್ಗಕ್ಕೆ ವಾಹನ ದಾಖಲಾತಿಗಳನ್ನು ಹಾಗೂ ಆಧಾರ ಮೊತ್ತ (ಇ.ಎಂ.ಡಿ) ಪ್ರತ್ಯೇಕವಾಗಿ ಸಲ್ಲಿಸುವುದು.
- ಒಂದೇ ವಾಹನದ ದಾಖಲಾತಿಗಳನ್ನು ಒಂದಕ್ಕಿಂತ ಹೆಚ್ಚು ಮಾರ್ಗಗಳಿಗೆ ಸಲ್ಲಿಸಿದ್ದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.
- ಬೆಳಗ್ಗಿನ ಸರತಿಯ ಮಾರ್ಗಗಳಲ್ಲಿ ಭಾಗವಹಿಸುವ ವಾಹನಗಳು ಮಧ್ಯಾಹ್ನದ ಸರತಿಗೆ ಅದೇ ಸಾಮರ್ಥ್ಯದ ವಾಹನವಾಗಿದ್ದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
- ಎಲ್ಲಾ ವಾಹನಗಳು ಕಡ್ಡಾಯವಾಗಿ ಇನ್ಸುಲೇಟೆಡ್ ಕಂಟೈನರ್‌ವುಳ್ಳ ವಾಹನವಾಗಿರತಕ್ಕದ್ದು. ಟೆಂಡರ್‌ನಲ್ಲಿ ನಮೂದಿಸಿರುವಂತೆ ಇನ್ಸುಲೇಟೆಡ್ ವಿನ್ಯಾಸ/ಮಾದರಿ ಹೊಂದಿರಬೇಕು.
- ಟೆಂಡರ್‌ನಲ್ಲಿ ಸಂಬಂಧ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗತಕ್ಕದ್ದು.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ. ಮೊತ್ತ, ಭದ್ರತಾ ಠೇವಣಿ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ https://www.eproc.karnataka.gov.in ನಲ್ಲಿ ಲಭ್ಯವಿರುತ್ತದೆ. ಬಮೂಲ್ ಕಚೇರಿ ದೂರವಾಣಿ ಸಂಖ್ಯೆ: 080–26096273.

ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ ಪರವಾಗಿ
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಾಜರಾಜೇಶ್ವರಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ ಕಚೇರಿ, ಚೌಡೇಶ್ವರಿ ಬಸ್ ನಿಲ್ದಾಣದ ಹತ್ತಿರ, ಮತ್ತಿಕೆರೆ, ಬೆಂಗಳೂರು–560 054.

ಸಂಖ್ಯೆ: ರಾರಾನವಿ/ಕಾಪಾಅ/ಟೆಂಡರ್/10/2022–23 ದಿನಾಂಕ: 07.11.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನವಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ–ಕೆಡಬ್ಲ್ಯೂ–3 & 4)

ಕ್ರ. ಸಂ.	ಕಾಮಗಾರಿಗಳ ಹೆಸರು /ವರ್ಗೀಕರಣ	ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
1	ಛತ್ರಪತಿ ಶಿವಾಜಿ ವಾರ್ಡ್ ಸಂಖ್ಯೆ–36ರ ಜಿ.ಜಿ.ಪಾಳ್ಯ ಗ್ರಾಮ ಮತ್ತು ಸುತ್ತಮುತ್ತ ಸಿಸಿ ರಸ್ತೆ, ಚರಂಡಿಗಳು ಮತ್ತು ಪಾದಚಾರಿಮಾರ್ಗ ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ)	300.00	4.50
2	ವಾರ್ಡ್ ಸಂಖ್ಯೆ–38 ಜೆಪಿ ಪಾರ್ಕ್‌ನ ತನ್ನೀರಹಳ್ಳಿಯಲ್ಲಿ ರೈಲ್ವೆ ಎಂಬ್ಯಾಂಕ್‌ಮೆಂಟ್ ವರೆಗೆ ಪ್ರಧಾನ ಚರಂಡಿ ನಿರ್ಮಾಣ ಮಾಡುವುದು (ಸಾಮಾನ್ಯರಿಗೆ)	150.00	2.25
3	ವೀರ ಮದಕರಿ ವಾರ್ಡ್ ಸಂಖ್ಯೆ–40ರಲ್ಲಿ ಆಯ್ದ ರೀಚೆಸ್‌ಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆ ಮತ್ತು ನಿರ್ವಹಣೆ ಮಾಡುವುದು (ಸಾಮಾನ್ಯರಿಗೆ)	300.00	4.50
4	ವಾರ್ಡ್ ಸಂಖ್ಯೆ–41 ಪೀಣ್ಯದ ಮುದ್ದಣ್ಣ ಗಾರ್ಡನ್‌ನಲ್ಲಿ ಮತ್ತು ಸುತ್ತಮುತ್ತ ಸಿಸಿ ರಸ್ತೆ, ಚರಂಡಿಗಳು ಮತ್ತು ಪಾದಚಾರಿಮಾರ್ಗಗಳನ್ನು ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ)	150.00	2.25
5	ವಾರ್ಡ್ ಸಂಖ್ಯೆ–41 ಪೀಣ್ಯದ ಆಯ್ದ ರಸ್ತೆಗಳಲ್ಲಿ ಚರಂಡಿಗಳು ಮತ್ತು ಕಲ್ವರ್ಟ್‌ಗಳನ್ನು ಸುಧಾರಣೆ ಮತ್ತು ನಿರ್ವಹಣೆ ಮಾಡುವುದು. (ಸಾಮಾನ್ಯರಿಗೆ)	100.00	2.00
6	ವಾರ್ಡ್ ಸಂಖ್ಯೆ–42 ಲಕ್ಷ್ಮಿದೇವಿನಗರ ನಂದಿನಿ ಬಡಾವಣೆಯಲ್ಲಿ ಸಿಸಿರಸ್ತೆ, ಚರಂಡಿಗಳು ಮತ್ತು ಪಾದಚಾರಿಮಾರ್ಗ ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ)	120.00	1.80
7	ರಣಧೀರ ಕಂಠೀರವ ವಾರ್ಡ್ ಸಂಖ್ಯೆ–43ರಲ್ಲಿ ಸಣ್ಣ ಮತ್ತು ತಪ್ಪಿಹೋಗಿರುವ ರಸ್ತೆಗಳಲ್ಲಿ ಸಿಸಿ ಪೇವ್‌ಮೆಂಟ್ ಒದಗಿಸುವುದು. (ಸಾಮಾನ್ಯರಿಗೆ)	100.00	2.00
8	ರಣಧೀರ ಕಂಠೀರವ ವಾರ್ಡ್ ಸಂಖ್ಯೆ–43ರಲ್ಲಿ ಆಯ್ದ ರಸ್ತೆಗಳನ್ನು ನಿರ್ವಹಣೆ ಮತ್ತು ಸುಧಾರಣೆ ಮಾಡುವುದು (ಸಾಮಾನ್ಯರಿಗೆ)	100.00	2.00
9	ವೀರ ಸಿಂಧೂರ ಲಕ್ಷ್ಮಣ ವಾರ್ಡ್ ಸಂಖ್ಯೆ–44ರಲ್ಲಿ ಆಯ್ದ ಪ್ರದೇಶಗಳಲ್ಲಿ ಚರಂಡಿ ಮತ್ತು ಕಲ್ವರ್ಟ್‌ಗಳಿಗೆ ನಿರ್ವಹಣೆ ಮತ್ತು ಸುಧಾರಣೆಗಳನ್ನು ಮಾಡುವುದು (ಸಾಮಾನ್ಯರಿಗೆ)	100.00	2.00
10	ವೀರ ಸಿಂಧೂರ ಲಕ್ಷ್ಮಣ ವಾರ್ಡ್ ಸಂಖ್ಯೆ–44ರಲ್ಲಿ ಆಯ್ದ ಪ್ರದೇಶಗಳಲ್ಲಿ ರಸ್ತೆಗಳಿಗೆ ನಿರ್ವಹಣೆ ಮತ್ತು ಸುಧಾರಣೆಗಳನ್ನು ಮಾಡುವುದು (ಸಾಮಾನ್ಯರಿಗೆ)	150.00	2.25
11	ವಿಜಯನಗರ ಕೃಷ್ಣದೇವರಾಯ ವಾರ್ಡ್ ಸಂಖ್ಯೆ–45ರ ಮಾಳಗಾಳ ಮುಖ್ಯರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಪಾದಚಾರಿಮಾರ್ಗ, ರಸ್ತೆ, ಕಲ್ವರ್ಟ್ ಮತ್ತು ಚರಂಡಿಗಳಿಗೆ ನಿರ್ವಹಣೆ ಮತ್ತು ಸುಧಾರಣೆಗಳನ್ನು ಮಾಡುವುದು (ಸಾಮಾನ್ಯರಿಗೆ)	150.00	2.25
12	ಸರ್.ಎಂ ವಿಶ್ವೇಶ್ವರಯ್ಯ ವಾರ್ಡ್ ಸಂಖ್ಯೆ–46ರ ಗಂಗೋತ್ರಿ ಬಡಾವಣೆ, ಕಂದಾಯ ಬಡಾವಣೆ, ಕೆಬ್ಬೆಹಳ್ಳ ಸುತ್ತಮುತ್ತಲ ಪ್ರದೇಶದ ಆಯ್ದ ರಸ್ತೆಗಳಿಗೆ ನಿರ್ವಹಣೆ ಮತ್ತು ಸುಧಾರಣೆಗಳನ್ನು ಮಾಡುವುದು .(ಸಾಮಾನ್ಯರಿಗೆ)	100.00	2.00
13	ವಾರ್ಡ್ ಸಂಖ್ಯೆ–47ರ ನಾಲ್ವಡಿ ಕೃಷ್ಣರಾಜ ಒಡೆಯರ್ ಉದ್ಯಾನವನದಲ್ಲಿ 2022–23ನೇ ಸಾಲಿಗೆ ಆಯ್ದ ಡಾಂಬರು ರಸ್ತೆಗಳಿಗೆ ರೀಸರ್ಫೇಸಿಂಗ್ ಮಾಡುವುದು (ಸಾಮಾನ್ಯರಿಗೆ)	150.00	2.25
14	ವಾರ್ಡ್ ಸಂಖ್ಯೆ–48ರ ಜ್ಞಾನಭಾರತಿಯಲ್ಲಿ ಆಯ್ದ ಡಾಂಬರು ರಸ್ತೆಗಳಿಗೆ ನಿರ್ವಹಣೆ ಮತ್ತು ರೀಸರ್ಫೇಸಿಂಗ್ ಮಾಡುವುದು (ಸಾಮಾನ್ಯರಿಗೆ)	150.00	2.25
15	ವಾರ್ಡ್ ಸಂಖ್ಯೆ–49ರ ರಾಜರಾಜೇಶ್ವರಿನಗರದ ಆಯ್ದ ಪ್ರದೇಶಗಳಲ್ಲಿ ಸಣ್ಣ ರಸ್ತೆಗಳಿಗೆ ಸಿಸಿ ಪೇವ್‌ಮೆಂಟ್ ಒದಗಿಸುವುದು ಹಾಗೂ ಆಯ್ದ ಪ್ರದೇಶಗಳಲ್ಲಿ ಕಲ್ವರ್ಟ್‌ಗಳ ಡಿಸ್ಮ್ಯಾಂಟಲಿಂಗ್, ಮರು ನಿರ್ಮಾಣ ಮಾಡುವುದು (ಸಾಮಾನ್ಯರಿಗೆ)	200.00	3.00
16	ವಾರ್ಡ್ ಸಂಖ್ಯೆ–49ರ ರಾಜರಾಜೇಶ್ವರಿನಗರದಲ್ಲಿ 2022–23ನೇ ಸಾಲಿಗೆ ಆಯ್ದ ರಸ್ತೆಗಳನ್ನು ನಿರ್ವಹಣೆ ಮತ್ತು ಸುಧಾರಣೆ ಮಾಡುವುದು (ಸಾಮಾನ್ಯರಿಗೆ)	90.00	1.80

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 14.11.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 30.11.2022ರ ಸಂಜೆ 4:00 ಗಂಟೆಯೊಳಗಾಗಿ ಅಥವಾ ಮುಂಚಿತವಾಗಿ. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 21.11.2022ರ ಸಂಜೆ 4:00 ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ ರಾ.ರಾ.ನಗರ ವಲಯ ಇಲ್ಲಿ ದಿನಾಂಕ 25.11.2022ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (5) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 30.11.2022ರ ಸಂಜೆ 4:00 ಗಂಟೆಯವರೆಗೆ. (6) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 01.12.2022ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (7) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ರಾಜರಾಜೇಶ್ವರಿನಗರ ವಿಭಾಗ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ)

ನಂ.ಎಚ್‌ಡಿಎಂಸಿ/63/04/2022–23 ದಿ:08–11–2022
ಜಾಹಿರಾತು ನಂ:– ,ದಿನಾಂಕ:08–11–2022

ಅಲ್ಪಾವಧಿ ಇ–ಟೆಂಡರ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ನಿಯಮದನ್ವಯ PWD/ CPWD/ HDMC/ ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಸನ್ 2022–23ನೇ ಸಾಲಿನ ಪಾಲಿಕೆ ಅನುದಾನದಡಿಯಲ್ಲಿ 1)ಇಂಡೆಂಟ್ ನಂ.136581/19.73ಲಕ್ಷ/2ನೇಕರೆ/ಸಾಮಾನ್ಯ, 2)ಇಂಡೆಂಟ್ ನಂ.136541/42.20ಲಕ್ಷ/2ನೇಕರೆ/ಪ.ಜಾ(ಎಸ್.ಸಿ), 3)ಇಂಡೆಂಟ್‌ನಂ.141007/89.50ಲಕ್ಷ/ಸಾಮಾನ್ಯ, 4)ಇಂಡೆಂಟ್‌ನಂ.141448/65.50ಲಕ್ಷ/ಸಾಮಾನ್ಯ, ಕಾಮಗಾರಿಗಳಿಗೆ ಇ–ಪ್ರೋಕ್ಯೂರಮೆಂಟ್ ನಲ್ಲಿ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದ ಹೆಸರು ಇ.ಎಂ.ಡಿ, ಕಾಮಗಾರಿ ನಿರ್ವಹಣಾ ಅವಧಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು http:/www.eproc.karnataka.gov.in ರಲ್ಲಿ ಪಡೆಯಬಹುದು. ಸದರ ಟೆಂಡರ್ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿನಾಂಕ: 09–11–2022 ರಿಂದ ಪಡೆಯಬಹುದಾಗಿದೆ. ಒಂದು ವೇಳೆ ಸದರಿ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಕ್ರ..ಸಂ 1) ರಿಂದ 2) ರ ವರೆಗಿನ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17/11/2022 ಸಂಜೆ: 4.00 ಘಂಟೆ ವರೆಗೆ ಹಾಗೂ ಟೆಂಡರ್ ತೆರೆಯುವ ದಿನಾಂಕ: 18/11/2022 ಸಂಜೆ: 4.30 ಘಂಟೆ ನಂತರ
ಕ್ರ..ಸಂ 3) ರಿಂದ 4) ರ ವರೆಗಿನ ಕಾಮಗಾರಿಗಳಿಗೆ
1) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 17/11/2022 ಸಂಜೆ:4.30 ಘಂಟೆ ವರೆಗೆ
2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18/11/2022 ಸಂಜೆ:4.00 ಘಂಟೆ ನಂತರ
3) ಆರ್ಥಿಕ ಬಿಡ್ ತೆರೆಯುವ ದಿನಾಂಕ:19/11/2022 ಬೆಳಿಗ್ಗೆ:11.00 ಘಂಟೆ ನಂತರ

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು(ದಕ್ಷಿಣ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾ.ಸಾ.ಇ/ಧಾ/736/2022–23/ದೇಶಪಾಂಡೆಪಬ್ಲಿಸಿಟಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: 8050770005 ಇ–ಮೇಲ್ : bcwdhelpline@gmail.com

ಸಂಖ್ಯೆ: BCWD-17014/1/2022-BCWD_SCHLR-BCWD ದಿನಾಂಕ:08.11.2022

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

ವಿದ್ಯಾರ್ಥಿ ವೇತನ ಸೌಲಭ್ಯದ ವಿವರ

(A) ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿವೇತನ (ರೂ.ಗಳಲ್ಲಿ)

ತರಗತಿ	ಬಾಲಕ/ಬಾಲಕಿ (10 ತಿಂಗಳಿಗೆ)	ಒಟ್ಟು
ತರಗತಿ 1 ರಿಂದ 10	2000/–	2000/–

(B) ರಾಜ್ಯ ವಿದ್ಯಾರ್ಥಿ ವೇತನ ದರಗಳು (ರೂ.ಗಳಲ್ಲಿ)

ತರಗತಿ	ಬಾಲಕ/ಬಾಲಕಿ (10 ತಿಂಗಳಿಗೆ)	ಅಡ್‌ಹಾಕ್ ಗ್ರಾಂಟ್	ಒಟ್ಟು
ತರಗತಿ 1 ರಿಂದ 5	250/–	500/–	750/–
ತರಗತಿ 6 ರಿಂದ 8	400/–	500/–	900/–
ತರಗತಿ 9 ರಿಂದ 10	500/–	500/–	1000/–

ಅರ್ಜಿ ಸಲ್ಲಿಸಲು ಅಗತ್ಯವಿರುವ ಮಾಹಿತಿ/ದಾಖಲೆ

- ✓ ಶಾಲೆಯಲ್ಲಿ ಪ್ರವೇಶ ಪಡೆದಿರುವ ಬಗ್ಗೆ ಸ್ಯಾಟ್ಸ್–ಐಡಿ (SATS-ID) ಸ್ಯಾಟ್ಸ್–ಐಡಿ ತಿಳಿಯಲು ವೆಬ್ ವಿಳಾಸ: http://sts.karnataka.gov.in
- ✓ ವಿದ್ಯಾರ್ಥಿಯ ಆಧಾರ್ ಸಂಖ್ಯೆ
- ✓ ಪೋಷಕರ ಆಧಾರ್ ಸಂಖ್ಯೆ
- ✓ ಜಾತಿ ಪ್ರಮಾಣ ಪತ್ರದ ಆರ್.ಡಿ. ಸಂಖ್ಯೆ
- ✓ ಆದಾಯ ಪ್ರಮಾಣ ಪತ್ರದ ಆರ್.ಡಿ. ಸಂಖ್ಯೆ
- ✓ ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶ ಪಡೆದಿದ್ದಲ್ಲಿ, ವಿದ್ಯಾರ್ಥಿ ನಿಲಯ ಪ್ರವೇಶ ಸಂಖ್ಯೆ (ಸಂಬಂಧಿಸಿದ ಇಲಾಖೆಯಿಂದ ಪಡೆದಿದ್ದು)
- ✓ ಹಿಂದಿನ ಸಾಲಿನಲ್ಲಿ ವಿದ್ಯಾರ್ಥಿ ವೇತನ ಪಡೆದಿದ್ದಲ್ಲಿ ಹಿಂದಿನ ಸಾಲಿನ ಅರ್ಜಿ ಸಂಖ್ಯೆ (ಸಂಬಂಧಿಸಿದ ಇಲಾಖೆಯಿಂದ ಪಡೆದಿದ್ದು)
- ✓ ಆಧಾರ್ ಸಂಖ್ಯೆ ಇಲ್ಲದಿದ್ದಲ್ಲಿ, ಆಧಾರ್ ನೋಂದಣೆ ಮಾಡಿಸಿದ ಇ.ಐ.ಡಿ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಸಂಖ್ಯೆ, ಬ್ಯಾಂಕಿನ ವಿಳಾಸ
- ✓ ಪೋಷಕರ ಆಧಾರ್ ನಂಬರ್‌ಗೆ ಲಿಂಕ್ ಮಾಡಿರುವ ಮೊಬೈಲ್ ನಂ ಹಾಗೂ ಭೌತಿಕ ಅನುಮತಿ ಪತ್ರ

ಅರ್ಹತೆ:
ಒಂದನೇ ತರಗತಿಯಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹವಿರುತ್ತಾರೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್‌ವಿಳಾಸ:
https://ssp.karnataka.gov.in/

ಅರ್ಜಿ ಸಲ್ಲಿಸಲು ಬೇಕಾದ ಅರ್ಹತೆಗಳು

1. ಕುಟುಂಬದ ವಾರ್ಷಿಕ ಆದಾಯ ಮಿತಿ :
- ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿವೇತನ: ರೂ. 2.50 ಲಕ್ಷ /ವಾರ್ಷಿಕ.
- ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನ : ರೂ. 1.00 ಲಕ್ಷ / ವಾರ್ಷಿಕ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಮಾತ್ರ. ರೂ. 44,500/– ವಾರ್ಷಿಕ ಪ್ರವರ್ಗ–2ಎ, 3ಎ, 3ಬಿ, ಇತರೆ ಹಿಂದುಳಿದ ವರ್ಗಗಳಿಗೆ

2. ಫಲಾನುಭವಿಯ ಜಾತಿ :
- ರಾಜ್ಯ ಸರ್ಕಾರವು ಅಧಿಸೂಚಿಸಿರುವ ಪ್ರವರ್ಗ–1, 2ಎ, 3ಎ ಮತ್ತು 3ಬಿ ಹಾಗೂ ಕೇಂದ್ರ ಸರ್ಕಾರವು ಅಧಿಸೂಚಿಸಿರುವ ಇತರೆ ಹಿಂದುಳಿದ ವರ್ಗಗಳಡಿ ಬರುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ.

3. ಆದಾಯ ಮತ್ತು ಮೆರಿಟ್ ಆಧಾರದಲ್ಲಿ ಮಂಜೂರಾತಿ :
- ಪ್ರವರ್ಗ–1 ಮತ್ತು ಅಲೆಮಾರಿ/ಅರೆಅಲೆಮಾರಿ ಜನಾಂಗಗಳಿಗೆ ಸೇರಿದ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು.
- ತದ ನಂತರ ಇನ್ನುಳಿದ ವಿದ್ಯಾರ್ಥಿಗಳಿಗೆ ಆದಾಯ ಮತ್ತು ಮೆರಿಟ್ ಆಧಾರದ ಮೇಲೆ ರಾಜ್ಯ ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.12.2022

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಸಂಬಂಧಪಟ್ಟ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ /ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ/ https://bcwd.karnataka.gov.in/ ದೂರವಾಣಿ ಸಂಖ್ಯೆ: 8050770005

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/2979/2022–23

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಲಿ ಸಮುದಾಯದ ನಿರ್ಮಾಣದತ್ತ

ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ/ಲಾಟರಿ/2022–23 ದಿನಾಂಕ: 07–11–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ ದಿನಾಂಕ: 23–09–2022ರ ದಿನಪತ್ರಿಕೆಗಳಲ್ಲಿ ನೀಡಿರುವ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಲಾಟರಿ ಮಾಡುವ ಸ್ಥಳ:– ಮಂಡಳಿ ಸಭಾಂಗಣ, 4ನೇ ಮಹಡಿ, ಕಗೃಮಂ, ಕಾವೇರಿ ಭವನ, ಬೆಂಗಳೂರು

ಕ್ರ ಸಂ	ಬಡಾವಣೆ	ಅರ್ಹ & ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ & ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಲಾಟರಿ ದಿನಾಂಕ ಮತ್ತು ಸಮಯ
1.	ಬಳ್ಳಾರಿ ಜಿಲ್ಲೆ, ಎನ್.ಜಿ.ಓ. (ಮುಂಡ್ರಿಗಿ) & ಹಲಕುಂದಿ	15–11–2022	21–11–2022	24–11–2022	28–11–2022 ಬೆಳಿಗ್ಗೆ 11.00 ಗಂಟೆಗೆ
2.	ವಿಜಯಪುರ ಜಿಲ್ಲೆ, ಇಟ್ಟಂಗಿಹಾಳ 2ನೇ ಹಂತ	15–11–2022	21–11–2022	24–11–2022	28–11–2022 ಮಧ್ಯಾಹ್ನ 3.00 ಗಂಟೆಗೆ
3.	ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಪಂಜನಹಳ್ಳಿ 3ನೇ ಹಂತ	15–11–2022	21–11–2022	24–11–2022	29–11–2022 ಬೆಳಿಗ್ಗೆ 11.00 ಗಂಟೆಗೆ
4.	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	15–11–2022	21–11–2022	24–11–2022	29–11–2022 ಮಧ್ಯಾಹ್ನ 3.00 ಗಂಟೆಗೆ
5.	ಗದಗ ಜಿಲ್ಲೆ ಮುಂಡರಗಿ	15–11–2022	21–11–2022	24–11–2022	30–11–2022 ಬೆಳಿಗ್ಗೆ 11.00 ಗಂಟೆಗೆ
6.	ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅನಂತನಹಳ್ಳಿ, ಮೆಳ್ಳೆಕಟ್ಟೆ	15–11–2022	21–11–2022	24–11–2022	30–11–2022 ಮಧ್ಯಾಹ್ನ 3.00 ಗಂಟೆಗೆ
7.	ಮೈಸೂರು ಜಿಲ್ಲೆ, ಇಲವಾಲ	15–11–2022	21–11–2022	24–11–2022	01–12–2022 ಬೆಳಿಗ್ಗೆ 11.00 ಗಂಟೆಗೆ

ವಿಶೇಷ ಸೂಚನೆ:– ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಸೂಚನಾಫಲಕದಲ್ಲಿ ಹಾಗೂ ಆಯಾ ಜಿಲ್ಲಾ ಯೋಜನಾ ಕಛೇರಿಯಲ್ಲಿ ಮೇಲೆ ತಿಳಿಸಿರುವ ಆಯಾ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ ಬೆಂಗಳೂರು ಇಲ್ಲಿ ಸಲ್ಲಿಸಲು ಕೋರಲಾಗಿದೆ. ಇಲ್ಲವಾದಲ್ಲಿ ತಮ್ಮ ಅರ್ಜಿಗಳನ್ನು ಲಾಟರಿ ಅಂತಿಮ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದಿಲ್ಲ.

ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/2967/Zen/2022-23



ಆಕ್ಸಿಜನ್ ಬೇಕಾ ಆಕ್ಸಿಜನ್?!

'ಆಕ್ಸಿಜನ್ ಕಾನ್ಸಂಟ್ರೇಟರ್' ಎಂಬ ಹೆಸರು ವೈದ್ಯಕೀಯ ಕ್ಷೇತ್ರಕ್ಕೆ ಗೊತ್ತಿತ್ತು; ಆದರೆ ಜನಸಾಮಾನ್ಯರಿಗೆ ತಿಳಿದಿರಲಿಲ್ಲ. ಕೋವಿಡ್ ಮೊದಲನೆಯ ಅಲೆಯ ಕೊನೆಯಲ್ಲಿ ಎಲ್ಲರಿಗೂ ಗೊತ್ತಾಗುವಂತಾಯಿತು...

ಕ್ಷಮಾ ವಿ. ಭಾನುಪ್ರಕಾಶ್

'ಮಕ್ಕಳಿರಲವ್ವ ಮನೆ ತುಂಬ' ಎನ್ನುತ್ತದೆ ಜಾನಪದ. ಜಗತ್ತಿನ ಜನಸಂಖ್ಯೆ ಏರುಗತಿಯಲ್ಲಿ ಸಾಗಿದ್ದರೂ, 'ಮನೆಗೊಂದಾದರೂ ಮಗುವಿರಲಿ' ಎಂಬುದು ತಾಯಿಯ ಹೃದಯಪದ.

ಕನಸಿನ ಕೂಸುಗಳಾಗಿ ಹುಟ್ಟಿದ ಮಕ್ಕಳು, ಕೈಗೂಸಾಗಿರುವಾಗಲೇ ಲೋಕ ತೊರೆಯುವುದುಂಟು; ಹೀಗೆ, ಪುಟಾಣಿ ಮಕ್ಕಳ ಪ್ರಾಣಕ್ಕೆ ಎರವಾಗುವ ಅನೇಕ ಆರೋಗ್ಯಸಮಸ್ಯೆಗಳಲ್ಲಿ 'ನ್ಯುಮೋನಿಯಾ' ಕೂಡ ಒಂದು; ಕಡಿಮೆಯೆಂದರೂ ವರ್ಷಕ್ಕೆ ಬರೋಬ್ಬರಿ ಎಂಟು ಲಕ್ಷ ಮಕ್ಕಳು ನ್ಯುಮೋನಿಯಾದಿಂದ ಸಾವನ್ನಪ್ಪುತ್ತಾರೆ ಎನ್ನುತ್ತವೆ, ಯುನಿಸೆಫ್‌ನ ಸಮೀಕ್ಷೆಗಳು. ನ್ಯುಮೋನಿಯಾ, ಇತರ ಉಸಿರಾಟದ ಸಮಸ್ಯೆಗಳು ಮತ್ತು ಇತ್ತೀಚೆಗೆ ಜಗತ್ತನ್ನೇ ಕಾಡಿದ ಕೋವಿಡ್–19 ಚಿಕಿತ್ಸೆಯಲ್ಲಿ ಕೂಡ ಪ್ರಮುಖವಾಗಿ ಬೇಕಾಗಿದ್ದುದು 'ಆಮ್ಲಜನಕ'. ಆಮ್ಲಜನಕವನ್ನು ಪಡೆಯಲು ಆಸ್ಪತ್ರೆಗಳಲ್ಲೇ ವಾರಗಟ್ಟಲೆ ಇರಲು ಎಲ್ಲರಿಗೂ ಸಾಧ್ಯವಿಲ್ಲ; ಪ್ಯಾಂಡೆಮಿಕ್‌ನ ಸಮಯದಲ್ಲಿ ಆಸ್ಪತ್ರೆಗಳಲ್ಲಿ ಎಲ್ಲರಿಗೂ ಸ್ಥಳವೂ ಇರಲಿಲ್ಲ ಎಂಬ ಪರಿಸ್ಥಿತಿಯಿತ್ತು; ಆಗ ಸಹಾಯಕ್ಕೆ ಬಂದದ್ದು 'ಆಕ್ಸಿಜನ್ ಕಾನ್ಸಂಟ್ರೇಟರ್'; ಎಂದರೆ ಆಮ್ಲಜನಕದ ಕಾನ್ಸಂಟ್ರೇಟರ್.

'ಆಕ್ಸಿಜನ್ ಕಾನ್ಸಂಟ್ರೇಟರ್' ಎಂಬ ಹೆಸರು ವೈದ್ಯಕೀಯ ಕ್ಷೇತ್ರಕ್ಕೆ ಗೊತ್ತಿತ್ತುಬಿಟ್ಟರೆ, ಜನಸಾಮಾನ್ಯರಿಗೆ ತಿಳಿದಿರಲಿಲ್ಲ; ಕೋವಿಡ್ ಮಹಾಮಾರಿಯ ಮೊದಲನೆಯ ಅಲೆಯ ಕೊನೆಕೊನೆಗೆ ಆಸ್ಪತ್ರೆಗಳು ತುಂಬಿತುಳುಕಿದಾಗ, ಮನೆಯಲ್ಲೇ ಚಿಕಿತ್ಸೆ ಪಡೆಯಲು ಸಹಾಯಕ ಎಂದು 'ಆಕ್ಸಿಜನ್ ಕಾನ್ಸಂಟ್ರೇಟರ್'ನ ಬಗ್ಗೆ ವೈದ್ಯರು, ಸರ್ಕಾರಗಳು ಸುದ್ದಿಮಾಧ್ಯಮಗಳ ಮೂಲಕ ಜನರಿಗೆ ತಿಳಿಸಲು ಪ್ರಾರಂಭಿಸಿದರು; ಹೀಗೆ, ಈ ಹೆಸರು ಚಿರಪರಿಚಿತವಾಯ್ತು. ಇದೇನು ನೂರಿನ್ನೂರು ರೂಪಾಯಿಗಳಿಗೆ ಸಿಗಲು ಸಾಧ್ಯವೇ? ಹಾಗಾಗಿ, ಅನೇಕ ಸಮಾಜಸೇವಕ ಸಂಸ್ಥೆಗಳು ಬಾಡಿಗೆಗೆ ಅಥವಾ ಉಚಿತವಾಗಿ ಇವುಗಳ ವಿತರಣೆಯನ್ನು ಕೈಗೊಂಡವು. ಇದನ್ನು ಬಳಸಿ ಬದುಕುಳಿದವರಿಗೇ, ಅವರನ್ನು ಉಳಿಸಿಕೊಂಡವರಿಗೇ ಗೊತ್ತು, ಈ ಆವಿಷ್ಕಾರದ ಮಹತ್ವ. ಆಮ್ಲಜನಕವನ್ನು ಕ್ರೋಡೀಕರಿಸುವ ಆಕ್ಸಿಜನ್ ಕಾನ್ಸಂಟ್ರೇಟರ್‌ಗಳು, ಗಾಳಿಯಿಂದ ಆಮ್ಲಜನಕವನ್ನು, ಜೊತೆಗೆ ಚೂರೇ ಇಂಗಾಲದ ಡೈಆಕ್ಸೈಡನ್ನು ಬೇರ್ಪಡಿಸಿ, ಉಸಿರಾಡಲು ಬೇಕಾದಂತಹ ಪೂರಕ ಮಿಶ್ರಣವನ್ನು ತಯಾರಿಸಿ ರೋಗಿಗೆ ನೀಡುತ್ತವೆ. ಮುಖ್ಯವಾಗಿ ಗಾಳಿಯ ಪ್ರಮುಖ ಅಂಶವಾಗಿರುವ 'ಸಾರಜನಕ'ವನ್ನು ಬೇರ್ಪಡಿಸುತ್ತದೆ.

ಇವುಗಳಲ್ಲಿ ಸ್ಥೂಲವಾಗಿ ಎರಡು ಬಗೆ: ಒತ್ತಡವನ್ನು ಹಾಕಿ, ವಿವಿಧ ತಾಪಮಾನಗಳಲ್ಲಿ ವಿವಿಧ ಅನಿಲಗಳನ್ನು ಬೇರ್ಪಡಿಸುವ ತಂತ್ರವನ್ನು ಬಳಸುವ 'ಪಿಎಸ್‌ಎ'ಗಳು ಒಂದೆಡೆಯಾದರೆ, ವಿವಿಧ ಪಾಲಿಮರ್‌ಗಳ ಪದರಗಳನ್ನು ಬಳಸಿ, ಬೇಡದ ಅನಿಲಗಳನ್ನು ಬೇರ್ಪಡಿಸಿ, ಆಮ್ಲಜನಕವನ್ನು ನಮಗೆ ನೀಡುವ 'ಎಂಜಿಎಸ್'ಗಳು ಮತ್ತೊಂದು ಬಗೆ.

'ಪಿಎಸ್‌ಎ' ಎಂದರೆ 'ಪ್ರೆಶರ್ ಸ್ವಿಂಗ್ ಅಡ್ಸಾರ್ಪ್ಶನ್' ಎಂದರ್ಥ; ಇದರಲ್ಲಿ ಎರಡು ಸಿಲಿಂಡರ್‌ಗಳಿರುತ್ತವೆ. ಈ ಸಿಲಿಂಡರ್‌ಗಳ ಒಳಗೆ, ಹೊರಗಿನ ವಾತಾವರಣಕ್ಕಿಂತಲೂ ಎರಡೂವರೆ ಪಟ್ಟು ಹೆಚ್ಚು ಒತ್ತಡವಿರುತ್ತದೆ; ಜೊತೆಗೆ 'ಝಿಯೋಲೈಟ್'ಗಳೆಂಬ ಖನಿಜಗಳ ಹರಳುಗಳು ಇರುತ್ತವೆ; ಒತ್ತಡವನ್ನು ಬಳಸಿ ಅನಿಲಗಳನ್ನು ಬೇರ್ಪಡಿಸಿ, 'ಝಿಯೋಲೈಟ್'ನ ಸಹಾಯದಿಂದ ಸಾರಜನಕವನ್ನು ಹೀರಿಕೊಂಡು ಉಳಿದ ಮಿಶ್ರಣವನ್ನು ರೋಗಿಗೆ ನೀಡುತ್ತದೆ. ಇಲ್ಲಿ ಒಂದು ಸಿಲಿಂಡರ್‌ನಿಂದ ಆಮ್ಲಜನಕವಿರುವ ಮಿಶ್ರಣವು ಮೂಗಿನ ಕೊಳವೆಯ ಮೂಲಕ ರೋಗಿಗೆ ತಲುಪುವಷ್ಟರಲ್ಲಿ, ಮತ್ತೊಂದು ಸಿಲಿಂಡರ್‌ನಲ್ಲಿ ಇದೇ ಪ್ರಕ್ರಿಯೆ ನಡೆದು ಆಮ್ಲಜನಕದ ಕ್ರೋಡೀಕರಣ ನಡೆಯುತ್ತಿರುತ್ತದೆ.

ಎರಡನೆಯ ಬಗೆಯ 'ಆಕ್ಸಿಜನ್ ಕಾನ್ಸಂಟ್ರೇಟರ್'ಗಳೆಂದರೆ, 'ಎಂಜಿಎಸ್'ಗಳು; 'ಎಂಜಿಎಸ್' ಎಂದರೆ 'ಮೆಂಬ್ರೇನ್ ಗ್ಯಾಸ್ ಸೆಪರೇಶನ್' ಎಂದರ್ಥ; ಇಲ್ಲಿ ವಿಶೇಷವಾದ ಪದರಗಳನ್ನು ಬಳಸಿ ಗಾಳಿಯಿಂದ ಅದರ ವಿವಿಧ ಘಟಕಗಳಾದ ಅನಿಲಗಳನ್ನು ಬೇರ್ಪಡಿಸಲಾಗುತ್ತದೆ. ನಮ್ಮ ಸುತ್ತಲಿನ/ಒಳಗಿನ ಎಲ್ಲಾ ವಸ್ತುಗಳಂತೆ, ಅನಿಲಗಳಲ್ಲೂ ಪರಮಾಣುಗಳು/ಅಣುಗಳೇ ಇರುತ್ತವೆ ತಾನೇ? ಇಂತಹ ಪುಟಾಣಿ ಅಣುಗಳನ್ನು ಬೇರ್ಪಡಿಸಬೇಕಿದ್ದರೆ, ಅದಕ್ಕೆ ಬಳಕೆಯಾಗುವ ಪದರಗಳೂ ಆಣ್ವಿಕ ಮಟ್ಟದ ರಂಧ್ರಗಳನ್ನೇ ಹೊಂದಿರಬೇಕಲ್ಲವೇ? ಹಿಟ್ಟು ಜರಡಿ ಹಿಡಿಯುವುದಕ್ಕೂ, ಕಾಳುಗಳನ್ನು ಜರಡಿ ಹಿಡಿಯುವುದಕ್ಕೂ ಒಂದೇ ಜರಡಿ ಬಳಸಲು ಸಾಧ್ಯವಿಲ್ಲವಲ್ಲ, ಹಾಗೇ! ವಿವಿಧ ಅನಿಲಗಳಿಗಾಗಿಯೇ ವಿಶೇಷವಾದ ಆಣ್ವಿಕ ಜರಡಿಗಳನ್ನು ತಯಾರು ಮಾಡಿ ಬಳಸಲಾಗುತ್ತದೆ. ಹಾಗೆ, ಬೇಡದ ಅನಿಲಗಳನ್ನು ತೆಗೆದು, ಆಮ್ಲಜನಕವನ್ನು ರೋಗಿಗೆ ತಲುಪಿಸಲಾಗುತ್ತದೆ. ಆಮ್ಲಜನಕವು ರೋಗಿಯ ಅನುಕೂಲತೆಗೆ ತಕ್ಕಂತೆ ವಿವಿಧ ವೇಗಗಳಲ್ಲಿ ಅವರನ್ನು ತಲುಪಬಹುದು; ಉಸಿರಾಟದ ವೇಗಕ್ಕೆ ತಕ್ಕಂತೆ ಈ ಆಯ್ಕೆಗಳನ್ನು ಬದಲಾಯಿಸಿಕೊಳ್ಳಬಹುದು. ಇಂತಹ ಸಾಧನಗಳಲ್ಲಿ ಉತ್ಪಾದಿಸಲಾದ ಆಮ್ಲಜನಕವನ್ನು ವೈದ್ಯಕೀಯ ಬಳಕೆಗೆ ಮಾತ್ರವಲ್ಲ, ಅನೇಕ ಪ್ರಮುಖ ರಾಸಾಯನಿಕಗಳನ್ನು ಉತ್ಪಾದಿಸಲು ಕಚ್ಚಾವಸ್ತುವಾಗಿ, ಆಹಾರಸಂಸ್ಕರಣೆಯ ಭಾಗವಾಗಿ, ಗಾಜು ಮತ್ತು ಕಾಗದದ ಕಾರ್ಖಾನೆಯ ರಾಸಾಯನಿಕ ಪ್ರಕ್ರಿಯೆಗಳ ಭಾಗವಾಗಿ ಕೂಡ ಬಳಸಲಾಗುತ್ತದೆ.

'ಆಕ್ಸಿಜನ್ ಕಾನ್ಸಂಟ್ರೇಟರ್'ಗಳನ್ನು ತಯಾರಿಸಿದ್ದು ಯಾವುದೇ ಒಬ್ಬ ವಿಜ್ಞಾನಿಯಲ್ಲ, ಬದಲಿಗೆ ಒಂದು ವೈಜ್ಞಾನಿಕ ಸಮೂಹ; ಅನೇಕ ಭೌತವಿಜ್ಞಾನಿ, ರಸಾಯನ ವಿಜ್ಞಾನಿಗಳ ಕೊಡುಗೆ ಇದು. ವಿಜ್ಞಾನವೆಂದೂ ನಿಂತ ನೀರಲ್ಲ. ಪ್ರತಿಯೊಂದು ಪ್ರಕ್ರಿಯೆ, ಆವಿಷ್ಕಾರ ಅಥವಾ ಅನ್ವೇಷಣೆಯು ಹೊಸ ರೂಪ ಪಡೆದುಕೊಳ್ಳುತ್ತಾ, ಹೊಸ ಸುಧಾರಣೆಗಳಿಗೆ ಒಳಗಾಗುತ್ತಾ ಸಾಗುತ್ತವೆ; 'ಆಕ್ಸಿಜನ್ ಕಾನ್ಸಂಟ್ರೇಟರ್'ಗಳೂ ಇದಕ್ಕೆ ಹೊರತಲ್ಲ. ಈ ಎರಡೂ ಬಗೆಯ 'ಆಕ್ಸಿಜನ್ ಕಾನ್ಸಂಟ್ರೇಟರ್'ಗಳನ್ನೂ ಮೊದಲು ತಯಾರಿಸಿದಾಗ, ಅವುಗಳ ಗಾತ್ರ, ಆಕಾರ, ತೂಕವು ಸುಲಭವಾಗಿ ಎಲ್ಲೆಂದರಲ್ಲಿ ಕೊಂಡೊಯ್ಯಲು ಸಹಕಾರಿಯಾಗಿರಲಿಲ್ಲ; 2000ದ ಇಸವಿಯ ನಂತರ ಪೋರ್ಟೆಬಲ್ ಕಾನ್ಸಂಟ್ರೇಟರ್‌ಗಳು ತಯಾರಾದವು.

ಯಾವುದೇ ಬಗೆಯ ಕಾನ್ಸಂಟ್ರೇಟರ್‌ಗಳಾದರೂ, ಅದರೊಳಗೊಂದು ಮೋಟಾರು ಓಡಲೇಬೇಕು. ಅದಕ್ಕೊಂದು ಶಕ್ತಿಯ ಮೂಲ ಬೇಕಲ್ಲವೇ? ಅದು ಸಾಮಾನ್ಯವಾಗಿ ವಿದ್ಯುತ್ತೇ! ಬ್ಯಾಟರಿಗಳ ಬಳಕೆ ಕೂಡ ಇತ್ತೀಚೆಗೆ ಸಾಧ್ಯವಾಗಿದೆ. ಆದರೆ, ಇಂದಿಗೂ ವಿದ್ಯುತ್ ಕಾಣದ ಅನೇಕ ಹಳ್ಳಿಗಳಿವೆ; ಅಲ್ಲೆಲ್ಲಾ ಬ್ಯಾಟರಿಗಳೂ ಸುಲಭವಾಗಿ ಲಭ್ಯವಿಲ್ಲ. ಜೀವ ಉಳಿಸಲು ಬೇಕಾದ ಇಂತಹ ಒಂದು ಸಾಧನವು ಸರ್ಕಾರದ ಅಥವಾ ಸ್ವಯಂಸೇವಾ ಸಂಸ್ಥೆಗಳ ಮೂಲಕ ಸಿಕ್ಕರೂ, ಅವುಗಳನ್ನು ಬಳಸುವುದಕ್ಕೆ ಬೇಕಾದ ಶಕ್ತಿಮೂಲದ ಕೊರತೆ ಎದ್ದುಕಾಣುತ್ತಿದೆ; ಇದಕ್ಕೆ ಪರಿಹಾರವಾಗಿ, ಯುನಿಸೆಫ್ ಮತ್ತು ಆಕ್ಸಿಜನ್ ಕೋಲ್ಯಾಬ್‌ನವರು ಸೌರವಿದ್ಯುತ್ ಚಾಲಿತ ಆಮ್ಲಜನಕ ಕಾನ್ಸಂಟ್ರೇಟರ್‌ಗಳನ್ನು ತಯಾರಿಸಿ, ಗ್ರಾಮಗಳಿಗೆ ತಲುಪಿಸಿದ್ದಾರೆ. ತೀರ ಇತ್ತೀಚೆಗೆ, ಅಂದರೆ ಅಕ್ಟೋಬರ್ 2022ರಲ್ಲಿ, ಫ್ರೀಲ್ಯಾನ್ಸ್ ಸಂಶೋಧಕ ಡಾ. ಅಭಿಜಿತ್ ಲಾಲೆ ಅವರು ತಯಾರಿಸಿದ ಅತ್ಯಂತ ಚಿಕ್ಕ 'ಆಮ್ಲಜನಕ ಕಾನ್ಸಂಟ್ರೇಟರ್' ಮಾರುಕಟ್ಟೆಯಲ್ಲಿ ಲಭ್ಯವಾಗಿದ್ದು, ಉಸಿರಾಟದ ಸಮಸ್ಯೆಯಿರುವವರು ಇದನ್ನು ಆರಾಮಾಗಿ ಚೀಲದಲ್ಲಿಟ್ಟುಕೊಂಡು ಓಡಾಡಬಹುದಾಗಿದೆ; ಇದನ್ನೆಲ್ಲಾ ನೋಡಿದರೆ ಅನ್ನಿಸುವುದಿಷ್ಟೇ - ಯಾವುದೋ ಸಮಸ್ಯೆಗೆ ಉತ್ತರ ಸಿಗುತ್ತಿಲ್ಲವೇ? ವಿಜ್ಞಾನವನ್ನು ನಂಬಿರಿ, ಕಾಯಿರಿ!

❖

ಭಾಷೆಯಲ್ಲಿದೆ ಅರಿವಿನ ಮೂಲ

ಅಮೃತೇಶ್ವರಿ ಬಿ.

ಭಾಷೆಗಳು ಜ್ಞಾನವನ್ನು ಹಂಚುವ ಬಹು ದೊಡ್ಡ ಸಂಪರ್ಕ ಸಾಧನಗಳು. ಭಾಷೆ ಮತ್ತು ವಿಜ್ಞಾನಗಳೆರಡೂ ಒಂದಕ್ಕೊಂದು ಪೂರಕ. ಭಾಷೆಗಳು ಉಳಿಯದಿದ್ದರೆ ಎಲ್ಲ ಕ್ಷೇತ್ರಗಳ ಜ್ಞಾನವೂ ನಷ್ಟವಾಗುತ್ತದೆ.

ವೈದ್ಯಕೀಯ ವಿಜ್ಞಾನದ ಬೆಳವಣಿಗೆಗೂ ಭಾಷೆ ಬೇಕು. ಸ್ವಿಟ್ಜರ್ಲೆಂಡಿನ ಜ್ಯೂರಿಚ್ ವಿಶ್ವವಿದ್ಯಾಲಯದಲ್ಲಿ ಎವೆಲ್ಯುಷನರಿ ಬಯಾಲಜಿ ಮತ್ತು ಎನ್ವಿರಾನ್ಮೆಂಟಲ್ ಸ್ಟಡೀಸ್ ವಿಭಾಗದ ರೊಡ್ರಿಗೊ ಕೆಮೆರ ಲೆರೆಟ್ ಮತ್ತು ಜೊರ್ಡಿ ಬಸ್ಕಾಮ್ಮೆ ಅವರು ಔಷಧೀಯ ಸಸ್ಯಗಳ ಬಗ್ಗೆ ಸ್ಥಳೀಯ ಜನಕ್ಕಿರುವ ಜ್ಞಾನವು ಆ ಭಾಷೆಗಳು ಮತ್ತು ಸಸ್ಯಗಳು ಅಳಿದು ಹೋದಲ್ಲಿ ಎಷ್ಟು ಕುಸಿದುಹೋಗಬಲ್ಲದು ಎಂದು ಪ್ರಮಾಣೀಕರಿಸಿದ್ದಾರೆ.

ಯಾವುದೇ ಅರಿವು ಪೀಳಿಗೆಯಿಂದ ಪೀಳಿಗೆಗೆ, ಜನಾಂಗದಿಂದ ಜನಾಂಗಕ್ಕೆ ರವಾನೆಯಾಗಬೇಕಾದರೆ ಮಾಧ್ಯಮ ಅತ್ಯವಶ್ಯಕ. ಆ ಮಾಧ್ಯಮವೇ ಭಾಷೆ. ಭಾಷೆ ಎಂದರೆ ಒಂದು ಸಮುದಾಯವು ಪರಸ್ಪರ ವ್ಯವಹಾರಕ್ಕಾಗಿ ಬಳಸಬಹುದಾದ ಹಾಗೂ ಮಾನವ ಪರಿಸರದಲ್ಲಿನ ವಸ್ತು, ಘಟನೆ, ಕ್ರಿಯೆಗಳನ್ನು ವಿಸ್ತಾರವಾಗಿ ದಾಖಲುಗೊಳಿಸುವ ಧ್ವನಿವ್ಯವಸ್ಥೆ. ಜಗತ್ತಿನಲ್ಲಿ ಇಂತಹ ಸುಮಾರು 7400 ಭಾಷೆಗಳಿವೆಯಂತೆ. ಆದರೆ ಇವುಗಳಲ್ಲಿ ಶೇ 30ರಷ್ಟು ಭಾಷೆಗಳು ಈ ಶತಮಾನದ ಅಂತ್ಯದ ವೇಳೆಗೆ ಹೇಳಹೆಸರಿಲ್ಲದಂತೆ ಆಗಿಬಿಟ್ಟಿರುತ್ತವೆ ಎಂಬುದು ವಿಜ್ಞಾನಿಗಳ ಅಂದಾಜು. ಅವುಗಳಲ್ಲಿ ಸ್ಥಳೀಯ ಅರ್ಥಾತ್ ಆಯಾ ಪ್ರದೇಶದಲ್ಲಿಯಷ್ಟೆ ಕೇಳಿಸುವ ಭಾಷೆಗಳೇ ಹೆಚ್ಚು ಅಪಾಯದಲ್ಲಿ ಸಿಲುಕಿರುವವು. ಈ ಭಾಷೆಗಳು ಅಳಿದರೆ ಕೇವಲ ಭಾಷೆ ಹಾಗೂ ಸಂಸ್ಕೃತಿಗಷ್ಟೆ ನಷ್ಟವಲ್ಲ, ವಿಜ್ಞಾನಕ್ಕೂ ನಷ್ಟವಾಗಿಬಿಡಬಹುದು ಎಂದು ನಾವು ಅರ್ಥಮಾಡಿಕೊಂಡಿರಲಿಲ್ಲ. ಲೆರೆಟ್ ಮತ್ತು ಬಸ್ಕಾಮ್ಮೆ ಹೀಗೂ ಆಗುತ್ತದೆ ಎಂದು ನಿರೂಪಿಸಿದ್ದಾರೆ.

ಯಾವುದೇ ಅರಿವು ಪೀಳಿಗೆಯಿಂದ ಪೀಳಿಗೆಗೆ, ಜನಾಂಗದಿಂದ ಜನಾಂಗಕ್ಕೆ ರವಾನೆಯಾಗಬೇಕಾದರೆ ಮಾಧ್ಯಮ ಅತ್ಯವಶ್ಯಕ. ಆ ಮಾಧ್ಯಮವೇ ಭಾಷೆ.

ಇವರು ಶ್ರೀಮಂತ ಜೀವವೈವಿಧ್ಯ, ವಿಶಿಷ್ಟ ಭಾಷೆ ಮತ್ತು ಸಂಸ್ಕೃತಿಗಳು ಇರುವ ಮೂರು ಪ್ರದೇಶಗಳನ್ನು ಆರಿಸಿಕೊಂಡು, ಅಲ್ಲಿರುವ 3597 ಔಷಧೀಯ ಸಸ್ಯಗಳ ಬಗ್ಗೆ ಯಾವ್ಯಾವ ಭಾಷೆಯಲ್ಲಿ ಮಾಹಿತಿ ಇತ್ತು ಎಂದು ಗಮನಿಸಿದ್ದಾರೆ. ಅದರಲ್ಲಿ ಶೇ 75ರಷ್ಟು ವೈದ್ಯಸಂಗತಿಗಳು ಕೇವಲ ಒಂದು ಭಾಷೆಗೆ ಮಾತ್ರವೇ ಸೀಮಿತವಾಗಿದ್ದುವು. ಇತರೆ ಭಾಷೆಗಳಲ್ಲಿ ಅವುಗಳ ಉಲ್ಲೇಖವೇ ಇರಲಿಲ್ಲ. ಹೀಗೆ ಒಂದು ಭಾಷೆಗಷ್ಟೇ ತಿಳಿದಿರುವ ಸಸ್ಯಪ್ರಭೇದಗಳು ವಾಸ್ತವವಾಗಿ ಅಳಿವಿನ ಅಂಚಿನಲ್ಲಿಲ್ಲ, ಆದರೆ ಆ ವಿಶಿಷ್ಟ ಜ್ಞಾನವನ್ನು ಪಡೆದಿರುವ ಹೆಚ್ಚಿನ ಭಾಷೆಗಳು ಅಳಿವಿನ ಅಂಚಿನಲ್ಲಿವೆ! ಅರ್ಥಾತ್, ಜೀವವೈವಿಧ್ಯದ ನಷ್ಟದಿಂದ ವೈದ್ಯಕೀಯ ಜ್ಞಾನಕ್ಕೆ ಆಗುವ ಹಾನಿಗಿಂತಲೂ, ಭಾಷೆಯ ಅಳಿವಿನಿಂದಲೇ ನಷ್ಟ ಹೆಚ್ಚು.

ಮೂಲನಿವಾಸಿಗಳಿಗೆ ಸ್ಥಳೀಯ ಸಸ್ಯಗಳು, ಅವು ಒದಗಿಸುತ್ತಿರುವ ಪ್ರಯೋಜನಗಳು ಹಾಗೂ ಅವುಗಳಿಂದ ದೊರೆಯುತ್ತಿರುವ ಆರೋಗ್ಯದ ಲಾಭಗಳಿಗೆ ಸಂಬಂಧಿಸಿದ ಉತ್ತಮ ಜ್ಞಾನವಿರುತ್ತದಷ್ಟೆ. ಆದರೆ ಅವೆಲ್ಲವೂ ಅವರದೇ ಭಾಷೆಯಲ್ಲಿ ಸಂಗ್ರಹವಾಗಿರುತ್ತವೆ. ಇದನ್ನೇ ನಾವು 'ಪಾರಂಪರಿಕ ಜ್ಞಾನ' ಎನ್ನುತ್ತೇವೆ. ಒಂದೆಡೆ, ಭಾಷೆಯನ್ನು ಬಳಸದಿರುವುದು ಔಷಧೀಯ ಸಸ್ಯಗಳ ಬಗೆಗಿರುವ ಜ್ಞಾನದ ನಷ್ಟಕ್ಕೆ ಕಾರಣವಾದರೆ, ಇನ್ನೊಂದೆಡೆ, ಜಾಗತಿಕವಾಗಿ ಆಗುತ್ತಿರುವ ಪರಿಸರದಲ್ಲಿನ ಬದಲಾವಣೆಗಳು ಮನುಕುಲಕ್ಕೆ ಬೇಕಿರುವ ಸಸ್ಯಗಳು ಮತ್ತು ಬೆಳೆಗಳ ವ್ಯಾಪ್ತಿಯನ್ನೂ ಕುಗ್ಗಿಸುತ್ತಿವೆ. ಒಟ್ಟಾರೆ, ಭಾಷೆಯ ಅಳಿವು ಇಂತಹ ಉಪಯುಕ್ತ ಸಸ್ಯಗಳ ಬಳಕೆಯನ್ನು ಕಡಿಮೆ ಮಾಡುವುದರಿಂದ, ಪ್ರಕೃತಿಯು ಮಾನವನಿಗೆ ನೀಡಿರುವ ಅಮೂಲ್ಯ ಔಷಧಿಗಳ ಬಳಕೆಗೂ, ಹೊಸ ಔಷಧಿಗಳ ಆವಿಷ್ಕಾರಗಳಿಗೂ ಚ್ಯುತಿ ತರುವುದಂತೂ ಖಾತರಿ.



ಲೆರೆಟ್ ಮತ್ತು ಬಸ್ಕಾಮ್ಮೆ ಅವರು ಉತ್ತರ ಅಮೇರಿಕ, ವಾಯವ್ಯ ಅಮೇಜಾನಿಯಾ ಮತ್ತು ನ್ಯೂಗಿನಿಯಾ ಪ್ರದೇಶಗಳಲ್ಲಿನ ಮೂಲನಿವಾಸಿಗಳಿಗೆ ಅವರ ಸುತ್ತಲಿನ ಸಸ್ಯಪ್ರಭೇದಗಳ ಬಗೆಗಿರುವ ಸಾಂಪ್ರದಾಯಿಕ ಜ್ಞಾನವನ್ನು ಪರೀಕ್ಷಿಸಿದ್ದಾರೆ. ಅವರ ಅಂಕಿ–ಅಂಶಗಳ ಪ್ರಕಾರ 3597 ಸಸ್ಯಗಳು ಮತ್ತು ಅವು ದೊರೆಯುತ್ತಿರುವ ವೈದ್ಯಕೀಯ ಲಾಭಗಳು 236 ಸ್ಥಳೀಯ ಭಾಷೆಗಳಿಗೆ ತಿಳಿದಿತ್ತು. ಹಾಗೂ ಮೂರೂ ಪ್ರದೇಶಗಳಲ್ಲಿ ಔಷಧೀಯ ಸಸ್ಯಗಳ ಬಗ್ಗೆ ಅವರಿಗಿದ್ದ ಜ್ಞಾನವು ಕ್ರಮವಾಗಿ ಶೇ 73, 91, 84ರಷ್ಟು ಕೇವಲ ಒಂದೇ ಭಾಷೆಯ ಜನರಿಗೆ ತಿಳಿದಿತ್ತು. ಹಾಗಾದರೆ ವಿಶಿಷ್ಟ ಜ್ಞಾನವು ಹೆಚ್ಚಾಗಿ ಅಪಾಯದ ಅಂಚಿನಲ್ಲಿರುವ ಭಾಷೆಗಳಲ್ಲಿಯೇ ಅಡಗಿರುವುದೇ ಎಂಬುದು ಪ್ರಶ್ನೆ. ಇವರ ಫಲಿತಾಂಶದ ಪ್ರಕಾರ, ವೈದ್ಯಕೀಯ ಜ್ಞಾನವನ್ನು ಸಂರಕ್ಷಿಸುವುದಾದರೆ ಯಾವುದೋ ಒಂದು ಭಾಷೆಯನ್ನಷ್ಟೇ ಉಳಿಸಿದರೆ ಸಾಲದು; ಅಂತಹ ಎಲ್ಲ ಭಾಷೆಗಳನ್ನೂ ಉಳಿಸಬೇಕು. ಅದಕ್ಕಾಗಿ ವಿಶ್ವಸಂಸ್ಥೆಯು 2022-2032 ಅನ್ನು 'ಅಂತರರಾಷ್ಟ್ರೀಯ ಸ್ಥಳೀಯ ಭಾಷೆಗಳ ದಶಕ' ಎಂದು ಘೋಷಿಸಿದೆ. ಸ್ಥಳೀಯ ಭಾಷೆಗಳಿಗಿರುವ ಆಪತ್ತು ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಅವುಗಳ ಮಹತ್ವದ ಬಗ್ಗೆ ಜಾಗತಿಕವಾಗಿ ಅರಿವನ್ನು ಮೂಡಿಸುವುದು ಇದರ ಉದ್ದೇಶ.

ಈ ಮೂಲನಿವಾಸಿಗಳ ಪಾರಂಪರಿಕ ಜ್ಞಾನ ಅವರ ಭಾಷೆಯಲ್ಲಿಯೇ ಇರುತ್ತದೆ. ಆಯಾ ಸಮುದಾಯದ ಜನರಿಗೆ ತಮ್ಮ ಸುತ್ತಲಿನ ಸಸ್ಯಗಳು ಮತ್ತು ಅವು ನೀಡುವ ಜೈವಿಕ-ಔಷಧೀಯ ಪ್ರಯೋಜನಗಳ ಬಗ್ಗೆ ಅರಿವಿದೆ. ಬೇರೆ ಭಾಷೆ ಮಾತನಾಡುವ ಮೂಲನಿವಾಸಿಗಳೊಂದಿಗೆ ಅವರ ಜ್ಞಾನವನ್ನು ಹಂಚಿಕೊಂಡರೆ, ಸಂರಕ್ಷಣಾ ಕಾರ್ಯ ಸುಲಭ. ಆಗ ಆ ಭಾಷೆ ಅಳಿದು ಹೋದರೂ, ಜನರಲ್ಲಿ ವೈದ್ಯಕೀಯ ಜ್ಞಾನ ಭದ್ರವಾಗಿರಬಲ್ಲುದು. ಜಾಗತೀಕರಣದ ಪ್ರಭಾವದಿಂದಾಗಿ ಹೆಚ್ಚೆಚ್ಚು ಜನರು ಇಂಗ್ಲಿಷನ್ನು ಮಾತನಾಡುತ್ತಿರುವುದರಿಂದ ಅವರ ಮಾತೃಭಾಷೆಯ ಬಳಕೆ ಕಡಿಮೆಯಾಗಿಬಿಟ್ಟಿದೆ; ಭಾಷೆ-ಉಪಭಾಷೆಗಳು ನಶಿಸುತ್ತಿವೆ. ಹೀಗೇ ಮುಂದುವರಿದರೆ ಪ್ರಪಂಚದ ಕೆಲವು ಭಾಷೆಗಳನ್ನು ಹೊರತುಪಡಿಸಿ ಉಳಿದವು ಮಾತನಾಡುವವರಿಲ್ಲದೆ ನಶಿಸಿ ಹೋಗುತ್ತವೆ. ಮೂಲನಿವಾಸಿಗಳ ಭಾಷೆಯಂತೂ ಕೇಳುವಂತಿಲ್ಲ. ಜನಸಂಖ್ಯೆಯೂ ಕಡಿಮೆಯಿರುವುದರಿಂದ ಅವರ ಸಂತತಿಯೊಂದಿಗೇ ಅವರ ಭಾಷೆ ಮತ್ತು ಜ್ಞಾನವೂ ಮುಗಿದುಹೋಗುತ್ತದೆ. ಯಾವುದೇ ಭಾಷೆಯೂ ಜೀವಂತವಾಗಿರಬೇಕಾದರೆ ಜನರು ಅದನ್ನು ಬಳಸಬೇಕು. ಇಲ್ಲವಾದಲ್ಲಿ ಅದು ದಾಖಲೆಗಳ ಗುಂಪಿಗೆ ಸೇರಿಕೊಳ್ಳುತ್ತದಷ್ಟೇ. ಇದಕ್ಕೆ ಉದಾಹರಣೆ ದಕ್ಷಿಣ ಭಾರತದ ಕೊಚಿನ್ ಇಂಡೋ ಪೋರ್ಚುಗೀಸ್ ಕ್ರಿಯೊಲಿ ಭಾಷೆ ಮತ್ತು ಅಂಡಮಾನ್ ದ್ವೀಪದ ಅಕಾ-ಬೋ ಎಂಬ ಮೂಲನಿವಾಸಿ ಭಾಷೆಯನ್ನು ಮಾತನಾಡುವವರೇ ಉಳಿದಿಲ್ಲ. ಈ ಭಾಷೆಗಳನ್ನು ಮಾತನಾಡುತ್ತಿದ್ದ ಇಬ್ಬರೇ ಇಬ್ಬರು ಈಗ ಇಲ್ಲ. ಅವರೊಟ್ಟಿಗೆ ಅದೆಷ್ಟು ಮಾಹಿತಿಗಳು ಮಣ್ಣಾದವೋ ಗೊತ್ತಿಲ್ಲ.

3000 ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಗೂ ಈ ಅಪಾಯ ತಪ್ಪಿದ್ದಲ್ಲ. ಎಲ್ಲ ಭಾಷೆಗಳಿಗೂ ಅವುಗಳಿಗೇ ಸ್ವಂತವಾಗಿಬಿಟ್ಟಿರುವ ಜ್ಞಾನ-ವಿಜ್ಞಾನವಿರುತ್ತದೆ. ಅದನ್ನು ಆವಿಷ್ಕರಿಸಿ ಜಗತ್ತಿಗೆ ಹಂಚಬೇಕು. ಭಾಷೆ, ಜ್ಞಾನ ಮತ್ತು ವಿಜ್ಞಾನಗಳ ನಡುವಿನ ಸಂಬಂಧ ನಿಕಟವಾದುದು. ಹಾಗಾಗಿ ವಿಜ್ಞಾನ ಬೆಳೆಯಬೇಕಾದರೆ ಜ್ಞಾನ ಮುಖ್ಯ. ಜ್ಞಾನ ಬೆಳೆಯಬೇಕಾದರೆ ಭಾಷೆ ಉಳಿಯುವುದೂ ಅಷ್ಟೇ ಮುಖ್ಯ.

❖

ಇಯರ್‌ಫೋನ್ ಇಯರ್‌ಬಡ್ಸ್ ಆಯ್ಕೆಗಳು

ಇಯರ್‌ಫೋನ್ ಅಥವಾ ಇಯರ್‌ಬಡ್ಸ್ ತಂತ್ರಜ್ಞಾನದ ಸುಧಾರಣೆಯು ಹಾಡುಗಳ ಆಲಿಸುವಿಕೆಯಲ್ಲಿ ಹೊಸ ಕ್ರಾಂತಿಯನ್ನೇ ಮೂಡಿಸಿದೆ. ಆ್ಯಪ್ ಮೂಲಕವಾಗಿ ಧ್ವನಿಯ ಈಕ್ವಲೈಸರ್, ಇಯರ್‌ಬಡ್ ಕಳೆದುಹೋದರೆ ಅದನ್ನು ಪತ್ತೆ ಮಾಡುವ ವ್ಯವಸ್ಥೆ, ಧ್ವನಿ ಮಟ್ಟ ವಿಪರೀತವಾದರೆ ಕಿವಿಗಳಿಗೆ ಹಾನಿಯಾಗದಂತೆ ತಡೆಯುವ ಸ್ವಯಂಚಾಲಿತ ವ್ಯವಸ್ಥೆಯಿದೆ.

ಅವಿನಾಶ್ ಬಿ.

ಕೋವಿಡ್ ದಾಳಿಯ ಬಳಿಕ ಬಹುತೇಕ ಕೆಲಸಗಳು ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್‌ಗಳಿಗೆ ವರ್ಗಾವಣೆಯಾದಾಗ ಸದ್ದಿಲ್ಲದೆ ಮಾರುಕಟ್ಟೆ ಬೆಳೆಸಿಕೊಂಡಿದ್ದು ಇಯರ್‌ಫೋನ್ ಮತ್ತು ಹೆಡ್‌ಫೋನ್‌ಗಳು. ಸಂಗೀತವನ್ನು ಆಲಿಸುವುದಕ್ಕೆ ಮಾತ್ರವೇ ಅಲ್ಲದೆ, ಆನ್‌ಲೈನ್ ಸಮಾವೇಶಗಳಿಗೂ ಇವು ಅಗತ್ಯ ಸಾಧನಗಳಾಗತೊಡಗಿದವು. ಹೊಸದಾಗಿ ಈಗ ಪುಟ್ಟದಾದ ವೈರ್‌ಲೆಸ್ ಇಯರ್‌ಬಡ್ಸ್ ಬಂದಿವೆ. ವೈರ್‌ಸಹಿತ, ವೈರ್‌ಲೆಸ್ ಇದ್ದರೂ ನೆಕ್ ಬ್ಯಾಂಡ್ ಇರುವಂಥವು ಅಥವಾ ಪೂರ್ಣವಾಗಿ ವೈರ್‌ಲೆಸ್ ಬೇಕೋ ಎಂಬುದು ನಮ್ಮ ಆಯ್ಕೆಗೆ ಬಿಟ್ಟ ವಿಚಾರ.

ಈಗಿನ ಟ್ರೆಂಡ್ ಎಂದರೆ ಟ್ರೂ ವೈರ್‌ಲೆಸ್ ಸ್ಟೀರಿಯೊ (TWS) ಸಾಧನಗಳು. ಅವುಗಳಿಗೆ ಅನುಗುಣವಾಗಿ ಆಯಾ ಕಂಪನಿಗಳು ಇಯರ್‌ಬಡ್ಸ್ ಅಥವಾ ಇಯರ್‌ಫೋನ್‌ಗೆ ಸಂಬಂಧಿಸಿದ ಆ್ಯಪ್‌ಗಳನ್ನು ಕೂಡ ತಯಾರಿಸಿ (ಆಂಡ್ರಾಯ್ಡ್ ಅಥವಾ ಐಒಎಸ್) ನೀಡತೊಡಗಿದವು. ಹಲವು ವೈಶಿಷ್ಟ್ಯಗಳನ್ನು ನಿಭಾಯಿಸಬಲ್ಲ ಆ್ಯಪ್ ಬಂದಿರುವುದು ಹಾಡುಗಳ ಆಲಿಸುವಿಕೆಯಲ್ಲಿ ಹೊಸ ಕ್ರಾಂತಿಯನ್ನೇ ಮೂಡಿಸಿತು.

ಈಗ ಆಡಿಯೊ ಕೇಳಲು ಸಾಕಷ್ಟು ವೈವಿಧ್ಯಮಯ ಸಾಧನಗಳು ಮಾರುಕಟ್ಟೆಯಲ್ಲಿರುವಾಗ ಅವುಗಳ ಖರೀದಿ ವೇಳೆ ನಾವು ಗಮನಿಸಬೇಕಾದ ಅಂಶಗಳ ಕುರಿತು ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಸದ್ದು ರದ್ದು - ANC ಮತ್ತು ENC

ಕಿವಿಯೊಳಗೆ ಅಥವಾ ಕಿವಿಯ ಮೇಲೆ ಕೂರಬಹುದಾದ ಆಡಿಯೊ ಸಾಧನಗಳನ್ನು ಖರೀದಿಸುವಾಗ ನಾವು ಮುಖ್ಯವಾಗಿ ನೋಡಬೇಕಾದ ವಿಚಾರವೆಂದರೆ, ಆ್ಯಕ್ಟಿವ್ ನಾಯ್ಸ್ ಕ್ಯಾನ್ಸಲೇಶನ್ (ಎಎನ್‌ಸಿ) ಎಂಬ ವೈಶಿಷ್ಟ್ಯ. ಹೆಚ್ಚು ಬೆಳಕಿರುವಲ್ಲಿ ಮೊಬೈಲ್ ಸ್ಕ್ರೀನ್ ಮಸುಕಾಗುವಂತೆಯೇ, ಧ್ವನಿ ಹೆಚ್ಚಿದ್ದರೆ ಅವುಗಳನ್ನು ನಮ್ಮ ಕಿವಿಗೆ ಕೇಳಿಸದಂತೆ ಮಾಡುವುದು ಈ ನಾಯ್ಸ್ ಕ್ಯಾನ್ಸಲಿಂಗ್. ಹೊರಗಿನ ಅನಗತ್ಯ ಧ್ವನಿಯನ್ನು ಇಯರ್‌ಬಡ್ಸ್‌ನಲ್ಲಿರುವ ಮೈಕ್ರೋಫೋನ್ ಆಲಿಸಿ (ಗ್ರಹಿಸಿ), ಅದಕ್ಕೆ ಪ್ರತಿಯಾಗಿ ಬೇರೆ ಧ್ವನಿಯನ್ನು ಹೊರಡಿಸಿ ಹೊರಗಿನ ಧ್ವನಿಯು ಹಾಡು ಆಲಿಸಲು ತೊಂದರೆಯಾಗದಂತೆ ಮಾಡುವುದು ಇದರ ಕೆಲಸ. ಸಂಗೀತದ ಧ್ವನಿಯನ್ನು ಅತ್ಯಂತ ನಿಖರವಾಗಿ ಕೇಳಿ ಆನಂದಿಸಲು ಇದು ನೆರವಾಗುತ್ತದೆ. ಅಂತೆಯೇ, ನಾವು ಕರೆಯಲ್ಲಿರುವಾಗ ಅತ್ತ ಕಡೆಯಿಂದ ನಮ್ಮ ಮಾತನ್ನು ಆಲಿಸುವವರಿಗೆ ಸರಿಯಾದ ಧ್ವನಿ ಕೇಳಿಸಲು ಉಪಯುಕ್ತವಾಗುವುದು ENC ಅಥವಾ ಎನ್‌ವಿರಾನ್ಮೆಂಟಲ್ ನಾಯ್ಸ್ ಕ್ಯಾನ್ಸಲಿಂಗ್ ವ್ಯವಸ್ಥೆ. ಇದೂ ಇದೆಯೇ ಎಂದು ಕೇಳಿಕೊಳ್ಳಿ.

ಬ್ಯಾಟರಿ ಚಾರ್ಜ್ ಅವಧಿ

ಇಯರ್‌ಬಡ್ಸ್ ಆಯ್ಕೆಯಲ್ಲಿ ಪ್ರಮುಖ ಪಾತ್ರ ವಹಿಸುವುದು ಅದರಲ್ಲಿ ಎಷ್ಟು ಕಾಲ ಬ್ಯಾಟರಿ ಚಾರ್ಜ್ ಇರಬಲ್ಲುದು ಎಂಬ ಅಂಶ. ಒಮ್ಮೆ ಚಾರ್ಜ್ ಮಾಡಿದ ಬಳಿಕ 3ರಿಂದ 12 ಗಂಟೆವರೆಗೂ ಬರುವ ವೈವಿಧ್ಯಮಯ ಇಯರ್‌ಬಡ್ಸ್ ಈಗ ಸಿಗುತ್ತವೆ. ಇದರ ಜೊತೆಗೆ, ಬಡ್‌ಗಳನ್ನು ಇರಿಸಿ ಚಾರ್ಜ್ ಮಾಡಬಲ್ಲ ಪೋರ್ಟೆಬಲ್ ಚಾರ್ಜಿಂಗ್ ಕೇಸ್ ಬರುತ್ತದೆ. ಅದೂ ಸೇರಿದರೆ 48 ಗಂಟೆಗಳಿಗೂ ಹೆಚ್ಚು ಕಾಲ ಬ್ಯಾಟರಿ ಚಾರ್ಜ್ ಲಭ್ಯ. ಆದರೆ ANC ಸದಾ ಕಾಲ ಆನ್ ಇದ್ದರೆ ಬ್ಯಾಟರಿ ಚಾರ್ಜ್ ಬೇಗನೇ ಕಡಿಮೆಯಾಗುತ್ತದೆ ಎಂಬುದು ನೆನಪಿರಲಿ.

ಬ್ಲೂಟೂತ್ ಕೊಡೆಕ್ಗ್ಳು

ಟೂತ್ ಮೂಲಕ ವೈರ್‌ಲೆಸ್ ಇಯರ್‌ಬಡ್‌ಗಳಲ್ಲಿ ಹೆಚ್ಚು ಗುಣಮಟ್ಟದ ಹಾಡುಗಳನ್ನು ಆನಂದಿಸಬೇಕಿದ್ದರೆ, aptX, aptX HD ಅಥವಾ LDAC ಮುಂತಾದ ಮಾದರಿಯ ಕೊಡೆಕ್‌ಗಳನ್ನು ಇಯರ್‌ಬಡ್ಸ್ ಬೆಂಬಲಿಸುತ್ತದೆಯೇ ಎಂದು ಪರಿಶೀಲಿಸಿಕೊಂಡು ಖರೀದಿಸಬೇಕಾಗುತ್ತದೆ. ಕೊಡೆಕ್ ಎಂದರೆ ಡಿಜಿಟಲ್ ದತ್ತಾಂಶವನ್ನು ಎನ್‌ಕೋಡ್ ಮತ್ತು ಡೀಕೋಡ್ ಮಾಡಬಲ್ಲ ಒಂದು ಕಂಪ್ಯೂಟರ್ ಪ್ರೋಗ್ರಾಂ.

ಬ್ಲೂಟೂತ್ ಮಲ್ಟಿಪಾಯಿಂಟ್

ಇದು ತೀರಾ ಹೊಸದು. ಏಕಕಾಲದಲ್ಲಿ ಎರಡು ಬ್ಲೂಟೂತ್ ಮೂಲಗಳಿಗೆ, ಉದಾಹರಣೆಗೆ ಸ್ಮಾರ್ಟ್ ಫೋನ್ ಹಾಗೂ ಕಂಪ್ಯೂಟರ್‌ಗಳಿಗೆ ಸಂಪರ್ಕಿಸುವ ವೈಶಿಷ್ಟ್ಯವಿದು.

ಚಾರ್ಜಿಂಗ್ ಪೋರ್ಟ್

ಚಾರ್ಜಿಂಗ್ ಕೇಸ್‌ಗಳನ್ನು ಚಾರ್ಜ್ ಮಾಡುವುದಕ್ಕೆ ಟೈಪ್ ಸಿ, ಮೈಕ್ರೋ ಯುಎಸ್‌ಬಿ, ಆ್ಯಪಲ್ ಸಾಧನಗಳಲ್ಲಿ ಲೈಟ್ನಿಂಗ್ ಪೋರ್ಟ್ ಇರುವುದರಿಂದ ನಮಗೆ ಸೂಕ್ತವಾದುದನ್ನು ಆಯ್ಕೆ ಮಾಡಿಕೊಳ್ಳಬಹುದು.

ಇನ್ನುಳಿದಂತೆ, ನಮ್ಮಿಷ್ಟದ ಬಣ್ಣ ಆಯ್ಕೆ ಮಾಡಿಕೊಳ್ಳಬಹುದು. ಕ್ಲಾಸ್ 1 ಬ್ಲೂಟೂತ್ ಸಾಧನಗಳನ್ನು ಪರಿಗಣಿಸಿದರೆ, ಅವುಗಳ ವ್ಯಾಪ್ತಿ ಹೆಚ್ಚು ಇರುತ್ತದೆ. ಕರೆಯ ಗುಣಮಟ್ಟ ಹೇಗಿರುತ್ತದೆ ಎಂಬುದನ್ನು ಕೂಡ ಬಳಸಿದವರಲ್ಲಿ ವಿಚಾರಿಸಿ ತಿಳಿದುಕೊಳ್ಳುವುದು ಅತ್ಯಗತ್ಯ. ಇದರ ಜೊತೆಗೆ, ಕಿವಿಯ ಕುಹರಗಳ ಗಾತ್ರಕ್ಕೆ ಅನುಗುಣವಾಗಿ, ಬದಲಾಯಿಸಬಲ್ಲ ವಿಭಿನ್ನ ಗಾತ್ರದ ಇಯರ್‌ಟಿಪ್‌ಗಳನ್ನು ನೀಡಲಾಗುತ್ತದೆಯೇ ಎಂದೂ ತಿಳಿದುಕೊಳ್ಳಬೇಕು.

ಇಯರ್‌ಬಡ್ಸ್

ಹಿಮಾಚಲ ಪ್ರದೇಶ: 48 ಗಂಟೆಗಳಲ್ಲಿ ಪ್ರಚಾರಕ್ಕೆ ತೆರೆ

ಪಕ್ಷದ ಪರ ಪ್ರಚಾರಕ್ಕೆ ರಾಹುಲ್ ಗೈರು

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಮಾಚಲ ಪ್ರದೇಶದಲ್ಲಿ ಮುಂದಿನ 48 ಗಂಟೆಗಳಲ್ಲಿ ಚುನಾವಣಾ ಪ್ರಚಾರಕ್ಕೆ ತೆರೆ ಬೀಳಲಿದೆ. ಆದರೆ ಇದೇ ಮೊದಲ ಬಾರಿಗೆ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪರ ಪ್ರಚಾರದಿಂದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೊರಗುಳಿದಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಸೋಲುವ ಭೀತಿ ಮತ್ತು ಸೋಲಿನ ಹೊಣೆ ಹೊತ್ತುಕೊಳ್ಳುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ರಾಹುಲ್ ಗಾಂಧಿ ಚುನಾವಣಾ ಪ್ರಚಾರದಿಂದ ದೂರ ಉಳಿದಿದ್ದಾರೆ ಎಂದು ಬಿಜೆಪಿ ವ್ಯಂಗ್ಯವಾಡಿದೆ. 'ಇದ್ಯಾವುದನ್ನೂ ಕಿವಿಗೊಡದ ರಾಹುಲ್, ತಮ್ಮ ಪಾಡಿಗೆ ತಾವು 'ಭಾರತ ಜೋಡೊ' ಯಾತ್ರೆಯಲ್ಲಿ ನಿರತರಾಗಿದ್ದಾರೆ.

ಈ ಮಧ್ಯೆ ಆರೋಪವನ್ನು ಕಾಂಗ್ರೆಸ್ ಅಲ್ಲಗಳೆದಿದೆ. 'ರಾಜ್ಯವನ್ನು ಪಕ್ಷ ಅನಾಥವಾಗಿ ಬಿಟ್ಟಿಲ್ಲ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಸಕ್ರಿಯವಾಗಿ ಪ್ರಚಾರದಲ್ಲಿ ಭಾಗಿಯಾಗಿದ್ದಾರೆ. ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, ರಾಜಸ್ಥಾನ ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಸೇರಿ ಅನೇಕ ಹಿರಿಯ ನಾಯಕರು ಪ್ರಚಾರದಲ್ಲಿ ತೊಡಗಿದ್ದಾರೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೊನೆಯ ಎರಡು ದಿನ ಪ್ರಚಾರದಲ್ಲಿ ಭಾಗಿಯಾಗಲಿದ್ದಾರೆ' ಎಂದು ಹೇಳಿದೆ.

'ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಆದರೆ ಭಾರತ ಜೋಡೊದಂಥ ಕಾರ್ಯಕ್ರಮವು ಜೀವಮಾನದಲ್ಲಿ ಒಮ್ಮೆ ಮಾತ್ರ ಬರುತ್ತವೆ' ಎಂದು ರಾಹುಲ್ ಗೈರು ಹಾಜರಿಯನ್ನು ಕಾಂಗ್ರೆಸ್ ಮುಖಂಡರು ಸಮರ್ಥಿಸಿಕೊಂಡಿದ್ದಾರೆ.

ಹಿಮಾಚಲ ಪ್ರದೇಶಕ್ಕೆ ಖರ್ಗೆ: ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಂಗಳವಾರ ಶಿಮ್ಲಾಕ್ಕೆ ತೆರಳಿ, ಪಕ್ಷದ ಉನ್ನತ ನಾಯಕರೊಂದಿಗೆ ಸಭೆ ನಡೆಸಿದರು. ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸಹ ಸಭೆಯಲ್ಲಿ ಭಾಗಿಯಾಗಿದ್ದು, ಚುನಾವಣೆಯಲ್ಲಿ ಪಕ್ಷದ ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಸಲಾಯಿತು ಎಂದು ಮೂಲಗಳು ತಿಳಿಸಿವೆ.

'ಕಾಂಗ್ರೆಸ್ ಪ್ರಣಾಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಡಿ'

'ಹಿಮಾಚಲ ಪ್ರದೇಶದಲ್ಲಿ ರಾಜ್ಯಮಟ್ಟದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಲಾಗುವುದು. ಪಕ್ಷವು ಚುನಾವಣಾ ಭರವಸೆಗಳನ್ನು ಖಂಡಿತ ಈಡೇರಿಸುತ್ತದೆ, ಬೇರೆ ಪಕ್ಷಗಳಂತಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಮಂಗಳವಾರ ಹೇಳಿದರು.

ಪಿಟಿಐ ಸಂದರ್ಶನದಲ್ಲಿ ಮಾತನಾಡಿದ ಅವರು, ' ಬಿಜೆಪಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಸಂಬಂಧಿತ ಸಮಸ್ಯೆಯನ್ನು ಪರಿಹರಿಸಲಿದೆ. ಹಿಮಾಚಲ ಪ್ರದೇಶದ ಜನರು ಕಾಂಗ್ರೆಸ್ ನೀಡಿರುವ ಭರವಸೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಿಲ್ಲ' ಎಂದು ಹೇಳಿದರು.

ಬಿಜೆಪಿ ಸೇರಿದ ಕಾಂಗ್ರೆಸ್‌ನ 26 ನಾಯಕರು: ಚುನಾವಣೆ ಸಮೀಪಿಸುತ್ತಿದ್ದಂತೆಯೇ ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಆಘಾತ ಉಂಟಾಗಿದೆ. ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಜಿ ಕಾರ್ಯದರ್ಶಿ ಸೇರಿ ಒಟ್ಟು 26 ಮಂದಿ ನಾಯಕರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆ ಆಗಿದ್ದಾರೆ.

'ಡಬಲ್ ಎಂಜಿನ್' ಬರೀ ಬಡಾಯಿ'

ಅಹಮದಾಬಾದ್: ಗುಜರಾತ್ ಸರ್ಕಾರವು ದೆಹಲಿಯಿಂದ ಕಾರ್ಯನಿರ್ವಹಿಸುತ್ತಿದೆ. ಹೀಗಾಗಿಯೇ ಕಳೆದ ಆರು ವರ್ಷಗಳಲ್ಲಿ ರಾಜ್ಯವು ಮೂವರು ಮುಖ್ಯಮಂತ್ರಿಗಳನ್ನು ಕಂಡಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕ ಪಿ.ಚಿದಂಬರಂ ಆರೋಪಿಸಿದರು. ಇದೇ ವೇಳೆ 'ಡಬಲ್ ಎಂಜಿನ್' ಸರ್ಕಾರ ಎಂಬುದು ಬರೀ ಬಡಾಯಿ ಅಷ್ಟೇ ಎಂದು ಲೇವಡಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '135 ಮಂದಿಯನ್ನು ಬಲಿ ಪಡೆದ ಗುಜರಾತ್ ಮೊರ್ಬಿ ತೂಗು ಸೇತುವೆ ಕುಸಿತ ದುರಂತಕ್ಕೆ ಯಾರೊಬ್ಬರೂ ಕ್ಷಮೆ ಯಾಚಿಸಿಲ್ಲ ಅಥವಾ ಘಟನೆಯ ಹೊಣೆ ಹೊತ್ತು ರಾಜೀನಾಮೆ ಘೋಷಿಸಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ 2022

ಗುಜರಾತ್: ಬಿಜೆಪಿ ಸೇರಿದ ಕಾಂಗ್ರೆಸ್ ಶಾಸಕ ಮೋಹನ್‌ಸಿನ್ಹಾ

ಅಹಮದಾಬಾದ್ (ಪಿಟಿಐ): ಗುಜರಾತ್ ಕಾಂಗ್ರೆಸ್‌ನ ಹಿರಿಯ ಶಾಸಕರಾಗಿದ್ದ ಮೋಹನ್‌ಸಿನ್ಹಾ ರಾಥ್ವಾ ಅವರು ಮಂಗಳವಾರ ಪಕ್ಷದ ಸದಸ್ಯತ್ವ ಹಾಗೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ವಿಧಾನಸಭೆ ಚುನಾವಣೆ ಸಿದ್ಧತೆಯಲ್ಲಿರುವ ಪಕ್ಷಕ್ಕೆ ಇದರಿಂದ ದೊಡ್ಡ ಹಿನ್ನಡೆ ಎದುರಾಗಿದೆ.

ಬುಡಕಟ್ಟು ಸಮುದಾಯದ ಪ್ರಬಲ ನಾಯಕರಾಗಿರುವ ರಾಥ್ವಾ, ಹತ್ತು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. 78 ವರ್ಷದ ಮೋಹನ್‌ಸಿನ್ಹಾ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಜಗದೀಶ್ ಠಾಕೂರ್‌ಗೆ ಅವರು ರಾಜೀನಾಮೆ ಪತ್ರ ರವಾನಿಸಿದ್ದಾರೆ. ಸದ್ಯ ಛೋಟಾ ಉದಯಪುರ (ಎಸ್‌ಟಿ ಮೀಸಲು) ವಿಧಾನಸಭೆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು.

ಗುರುದ್ವಾರದಲ್ಲಿ ಪ್ರಾರ್ಥನೆ ಸಲ್ಲಿಸಿ ಯಾತ್ರೆಗೆ ಚಾಲನೆ

ಮಹಾರಾಷ್ಟ್ರಕ್ಕೆ ಭಾರತ್ ಜೋಡೊ ಯಾತ್ರೆ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಹಾರಾಷ್ಟ್ರದ ನಾಂದೇಡ್‌ನ ಗುರುದ್ವಾರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ನಾಂದೇಡ್, ಮಹಾರಾಷ್ಟ್ರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ ಯಾತ್ರೆ'ಯು ಸೋಮವಾರ ರಾತ್ರಿ ತೆಲಂಗಾಣದಿಂದ ಮಹಾರಾಷ್ಟ್ರ ತಲುಪಿತು. ದೊಂದಿಯೊಂದನ್ನು ಹಿಡಿದು ಮಹಾರಾಷ್ಟ್ರ ಪ್ರವೇಶಿಸಿದ ರಾಹುಲ್, ಮುಂದಿನ 15 ದಿನಗಳ ಮಹಾರಾಷ್ಟ್ರ ಯಾತ್ರೆಯಲ್ಲಿ ರಾಜ್ಯದ ಜನರ ಕಷ್ಟಗಳನ್ನು ಆಲಿಸುವುದಾಗಿ ಹೇಳಿದ್ದಾರೆ.

ಗುರುನಾನಕ್ ಜಯಂತಿ ಅಂಗವಾಗಿ ಮಂಗಳವಾರ ಬೆಳಿಗ್ಗೆ ನಾಂದೇಡ್‌ನ ಗುರುದ್ವಾರಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುವ ಮೂಲಕ ರಾಹುಲ್ ಅವರು 62ನೇ ದಿನದ ಯಾತ್ರೆಗೆ ಚಾಲನೆ ನೀಡಿದರು.

'ಭ್ರಾತೃತ್ವ ಮತ್ತು ಸಮಾನತೆಗಾಗಿ ರಾಹುಲ್ ಅವರು ಗುರುದ್ವಾರದಲ್ಲಿ ಪ್ರಾರ್ಥನೆ ಸಲ್ಲಿಸಿದರು' ಎಂದು ಪಕ್ಷ ಟ್ವೀಟ್ ಮಾಡಿದೆ.

ಕೇಂದ್ರ ಸರ್ಕಾರದ ನೋಟು ಅಮಾನ್ಯೀಕರಣದಂಥ ತಪ್ಪು ನೀತಿಗಳು ಮತ್ತು ಸರಕು ಮತ್ತು ಸೇವಾ ತೆರಿಗೆಯ ಅಸಮರ್ಪಕ ಜಾರಿಯ ಕಾರಣದಿಂದಾಗಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಸಂಕಷ್ಟಕ್ಕೀಡಾಗಿವೆ ಎಂದು ಅವರು ಹೇಳಿದರು.

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿಗಳಾದ ಸುಶೀಲ್ ಕುಮಾರ್ ಶಿಂದೆ ಮತ್ತು ಅಶೋಕ್ ಚೌವಾಣ್, ಮಹಾರಾಷ್ಟ್ರ ಕಾಂಗ್ರೆಸ್ ಮುಖ್ಯಸ್ಥ ನಾನಾ ಪಟೋಲೆ, ಇತರ ಪ್ರಮುಖ ನಾಯಕರಾದ ಬಾಳಾಸಾಹೇಬ್ ಥಾರೋಟ್, ನಸೀಮ್ ಖಾನ್ ಮುಂತಾದವರು ಯಾತ್ರೆಯಲ್ಲಿ ರಾಹುಲ್ ಜೊತೆಗೂಡಿದ್ದರು.

ಆದಿತ್ಯ ಠಾಕ್ರೆ ಪಾಲ್ಗೊಳ್ಳುವ ನಿರೀಕ್ಷೆ: ಶಿವಸೇನಾದ (ಉದ್ಧವ್ ಠಾಕ್ರೆ ಬಣ) ನಾಯಕ ಆದಿತ್ಯ ಠಾಕ್ರೆ ಅವರು ಯಾತ್ರೆಯಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಪಕ್ಷದ ಮುಖಂಡರೊಬ್ಬರು ತಿಳಿಸಿದ್ದಾರೆ.

ಸೇವಾ ದಳದ ಪ್ರಧಾನ ಕಾರ್ಯದರ್ಶಿ ಸಾವು

ನಾಂದೇಡ್‌ನಲ್ಲಿ ಮಂಗಳವಾರ ಆರಂಭವಾಗಿರುವ ಕಾಂಗ್ರೆಸ್‌ನ 'ಭಾರತ್ ಜೋಡೊ ಯಾತ್ರೆಯಲ್ಲಿ' ಪಾಲ್ಗೊಂಡಿದ್ದ ಕಾಂಗ್ರೆಸ್ ಸೇವಾ ದಳದ ಪ್ರಧಾನ ಕಾರ್ಯದರ್ಶಿ ಕೃಷ್ಣ ಕುಮಾರ್ ಪಾಂಡೆ ಎಂಬುವವರು ಯಾತ್ರೆ ವೇಳೆಯೇ ಕುಸಿದುಬಿದ್ದು ಸಾವಿಗೀಡಾಗಿದ್ದಾರೆ ಎಂದು ಪಕ್ಷದ ನಾಯಕರೊಬ್ಬರು ತಿಳಿಸಿದ್ದಾರೆ. ಇವರ ನಿಧನಕ್ಕೆ ಸಂತಾಪ ಸೂಚಿಸಿರುವ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ, 'ಕೃಷ್ಣ ಅವರು ಕಡೇ ಗಳಿಗೆಯವರೆಗೆ ರಾಷ್ಟ್ರಧ್ವಜವನ್ನು ಹಿಡಿದುಕೊಂಡಿದ್ದರು' ಎಂದು ಹೇಳಿದ್ದಾರೆ.

ಗುರುನಾನಕ್ ಜಯಂತಿ ಗುರುನಾನಕ್ ಅವರ 553ನೇ ಜಯಂತಿ ಅಂಗವಾಗಿ ಪಂಜಾಬ್‌ನ ಅಮೃತಸರದ ಸ್ವರ್ಣ ಮಂದಿರದಲ್ಲಿ ಭಕ್ತರು ಮಂಗಳವಾರ ಹಣತೆಗಳನ್ನು ಬೆಳಗಿದರು –ಪಿಟಿಐ ಚಿತ್ರ

ನೋಟು ಅಮಾನ್ಯೀಕರಣ ಸಂಘಟಿತ ಲೂಟಿ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಕ್ಕಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ 'ಪೇಸಿಎಂ' ಅಭಿಯಾನ ನಡೆಸಿದ ರೀತಿಯೇ, ಪ್ರಧಾನಿ ನರೇಂದ್ರ ಮೋದಿ ಅವರ ನೋಟು ಅಮಾನ್ಯೀಕರಣ ನಿರ್ಧಾರ ಟೀಕಿಸಲು ಎಐಸಿಸಿ 'ಪೇಪಿಎಂ' ಬಾಣವನ್ನು ಪ್ರಯೋಗಿಸುತ್ತಿದೆ.

ನೋಟು ಅಮಾನ್ಯೀಕರಣಕ್ಕೆ ಆರು ವರ್ಷ ತುಂಬಿದ ಹಿನ್ನೆಲೆಯಲ್ಲಿ ಮಂಗಳವಾರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, 'ಮೋದಿ ತಮ್ಮ ಕೆಲವೇ ಕೆಲವು ಶತಕೋಟ್ಯಧಿಪತಿ ಸ್ನೇಹಿತರು ಭಾರತದ ಆರ್ಥಿಕತೆಯ ಮೇಲೆ ಏಕಸ್ವಾಮ್ಯ ಮತ್ತು ಸಣ್ಣ ಹಾಗೂ ಮಧ್ಯಮ ವ್ಯವಹಾರಗಳನ್ನು ಮುಗಿಸಲು ನೋಟು ಅಮಾನ್ಯ ಜಾರಿಗೊಳಿಸಿದರು' ಎಂದು ಆರೋಪಿಸಿದೆ.

'ಸಣ್ಣ ಮತ್ತು ಮಧ್ಯಮ ವ್ಯವಹಾರಗಳನ್ನು ಮುಗಿಸುವ ಮೂಲಕ ಭಾರತದ ಆರ್ಥಿಕತೆಯ ಮೇಲೆ 'ಪೇಪಿಎಂ' ತಮ್ಮ ಇಬ್ಬರು-ಮೂವರು ಶತಕೋಟ್ಯಧಿಪತಿಗಳು ಏಕಸ್ವಾಮ್ಯ ಸಾಧಿಸುವುದನ್ನು ಖಾತ್ರಿಪಡಿಸಲು ಉದ್ದೇಶಪೂರ್ವಕವಾಗಿ ಜಾರಿಗೊಳಿಸಿದ ನಡೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಖರ್ಗೆ ಕಿಡಿ: 'ನೋಟು ಅಮಾನ್ಯ ಕ್ರಮ ಮೋದಿ ಸರ್ಕಾರದ ಮಹಾ ವೈಫಲ್ಯ. ಇದು ಆರ್ಥಿಕತೆಯ ಪತನಕ್ಕೆ ಕಾರಣವಾಯಿತು. ಆದರೆ, ಇದನ್ನು ಮೋದಿ ಈಗಲೂ ಒಪ್ಪಿಕೊಳ್ಳಲು, ದೇಶದ ಜನರ ಕ್ಷಮೆ ಕೇಳಲು ಸಿದ್ಧವಿಲ್ಲ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ಮಾಡಿದರು.

'ನೋಟು ಅಮಾನ್ಯೀಕರಣದಿಂದ ದೇಶವನ್ನು ಕಪ್ಪು ಹಣ ಮುಕ್ತಗೊಳಿಸುವ ಭರವಸೆ ನೀಡಲಾಯಿತು. ಆದರೆ, ಇದು ವ್ಯವಹಾರಗಳನ್ನು ಹಾಳುಗಡೆವಿತು. ಉದ್ಯೋಗಗಳನ್ನು ನಾಶಪಡಿಸಿತು ಎಂದು ಟ್ವೀಟ್‌ನಲ್ಲಿ ಕಿಡಿಕಾರಿದ್ದಾರೆ.

ನೋಟು ಅಮಾನ್ಯೀಕರಣವು ಸ್ವತಂತ್ರ ಭಾರತದಲ್ಲಿ ನಡೆದ 'ಬಹುದೊಡ್ಡ ಸಂಘಟಿತ ಲೂಟಿ' ಎಂದು ಆರೋಪಿಸಿರುವ ಕಾಂಗ್ರೆಸ್ ನಾಯಕ ಗೌರವ್ ವಲ್ಲಭ್, 2016ರಲ್ಲಿ ಮೋದಿ ನೇತೃತ್ವದ ಸರ್ಕಾರ ಜಾರಿಗೊಳಿಸಿದ ಈ ನಿರ್ಧಾರದ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದು ಆಗ್ರಹಿಸಿದರು.

ಸ್ವತಂತ್ರ ಭಾರತದ 'ಬಹುದೊಡ್ಡ ಸಂಘಟಿತ ಲೂಟಿ'ಗೆ ಈಗ ಆರು ವರ್ಷಗಳು. 2016ರ ನವೆಂಬರ್‌ನಲ್ಲಿ ₹17.97 ಲಕ್ಷ ಕೋಟಿ ನಗದು ಚಲಾವಣೆಯಲ್ಲಿತ್ತು. ಆದರೆ, ಇಂದು ಚಲಾವಣೆಯಲ್ಲಿರುವ ನಗದು ₹30.88 ಲಕ್ಷ ಕೋಟಿಗೆ ಏರಿಕೆಯಾಗಿದೆ. ದೇಶದ ಆರ್ಥಿಕತೆಯನ್ನು ನಾಶಪಡಿಸಿದ್ದಾರೆ ಎಂದು ಆರೋಪಿಸಿದರು.

ನೋಟು ಅಮಾನ್ಯೀಕರಣವು ಒಂದು ಕ್ರಿಮಿನಲ್ ಅಪರಾಧ. ಈ ಬಗ್ಗೆ ಮೋದಿ ಅವರು ಶ್ವೇತಪತ್ರ ಹೊರಡಿಸಬೇಕು ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಆಗ್ರಹಿಸಿದರು. 'ಇದು ಒಂದು ಪ್ರಮಾದ. ಆರು ವರ್ಷಗಳಲ್ಲಿ ದೇಶಕ್ಕೆ ಎಷ್ಟು ಕಪ್ಪು ಹಣ ತರಲಾಗಿದೆ ಎನ್ನುವುದನ್ನು ತಿಳಿಯಬಯಸಿದ್ದೇವೆ' ಎಂದು ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಹೇಳಿದೆ.

ಆರ್‌ಬಿಐ ವರದಿ ಪ್ರಕಾರ ಅಮಾನ್ಯವಾದ ನೋಟುಗಳಲ್ಲಿ ಶೇ 99.3ರಷ್ಟು ನೋಟುಗಳು ಬ್ಯಾಂಕಿಗೆ ಮರಳಿ ಬಂದಿವೆ. ಹಾಗಾದರೆ, ಎಷ್ಟು ಕಪ್ಪು ಹಣ ವಸೂಲಾಗಿದೆ ಎಂದು ಎನ್‌ಸಿಪಿ ಕೇಳಿದೆ.

ದೇಶದ ಮೊದಲ ಖಾಸಗಿ ರಾಕೆಟ್ ಉಡಾವಣೆ ಶೀಘ್ರ

ನವದೆಹಲಿ (ಪಿಟಿಐ): ದೇಶದಲ್ಲಿ ಖಾಸಗಿಯಾಗಿ ಅಭಿವೃದ್ಧಿಪಡಿಸಲಾಗಿರುವ ಮೊದಲ ರಾಕೆಟ್ 'ವಿಕ್ರಮ್-ಎಸ್'ಅನ್ನು ನವೆಂಬರ್ 12ರಿಂದ–16ರ ಒಳಗೆ ಉಡಾವಣೆ ಮಾಡಲಾಗುವುದು ಎಂದು ಹೈದರಾಬಾದ್ ಮೂಲದ ಸ್ಟಾರ್ಟ್‌ಅಪ್ 'ಸ್ಕೈರೂಟ್ ಏರೋಸ್ಪೇಸ್' ಸಂಸ್ಥೆ ಮಂಗಳವಾರ ಘೋಷಿಸಿದೆ.

ಈ ಉಡ್ಡಯನ ಯೋಜನೆಗೆ 'ಪ್ರಾರಂಭ್' ಎಂಬ ಹೆಸರು ನೀಡಲಾಗಿದೆ. ಇದನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಶ್ರೀಹರಿಕೋಟಾದ ಉಡ್ಡಯನ ಕೇಂದ್ರದಿಂದ ಉಡಾವಣೆ ಮಾಡಲಾಗುವುದು. ನವೆಂಬರ್ 12ರಿಂದ 16ರ ವರೆಗಿನ ಅವಧಿಯಲ್ಲಿ ರಾಕೆಟ್ ಉಡಾವಣೆಗೆ ಅಧಿಕಾರಿಗಳು ಅವಕಾಶ ನೀಡಿದ್ದಾರೆ. ಹವಾಮಾನ ಪರಿಸ್ಥಿತಿಯನ್ನು ಆಧರಿಸಿ ನಿರ್ದಿಷ್ಟ ಸಮಯವನ್ನು ನಿಗದಿಪಡಿಸಲಾಗುವುದು' ಎಂದು ಸ್ಕೈರೂಟ್ ಏರೊಸ್ಪೇಸ್ ಸಂಸ್ಥೆಯ ಸಿಇಒ, ಸಹ ಸಂಸ್ಥಾಪಕ ಪವನ್ ಕುಮಾರ್ ಚಂದನ ಅವರು ಮಾಹಿತಿ ನೀಡಿದ್ದಾರೆ.

ಇಸ್ರೊ ಮತ್ತು ಇನ್-ಸ್ಪೇಸ್ ನೀಡಿದ್ದ ಸಹಕಾರದಿಂದಾಗಿ ಈ ರಾಕೆಟ್‌ಅನ್ನು ಕಡಿಮೆ ಅವಧಿಯಲ್ಲಿ ಯಶಸ್ವಿಯಾಗಿ ಅಭಿವೃದ್ಧಿಗೊಳಿಸಲಾಯಿತು. ಖ್ಯಾತ ವಿಜ್ಞಾನಿ ವಿಕ್ರಮ್ ಸಾರಾಭಾಯ್ ಅವರ ಸ್ಮರಣಾರ್ಥವಾಗಿ 'ವಿಕ್ರಮ್-ಎಸ್' ಎಂದು ಈ ರಾಕೆಟ್‌ಗೆ ಹೆಸರು ನೀಡಲಾಯಿತು ಎಂದು ಪವನ್ ಕುಮಾರ್ ಅವರು ಹೇಳಿದ್ದಾರೆ.

ವಿಕ್ರಮ್-ಎಸ್ ರಾಕೆಟ್ ಒಂದೇ ಹಂತದ ಬಾಹ್ಯಾಕಾಶದ ಕಕ್ಷೆ ತಲುಪುವ ನೌಕೆಯಾಗಿದೆ. ಇದು ಮೂರು ಪೇಲೋಡ್‌ಗಳನ್ನು ಹೊತ್ತೊಯ್ಯಲಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ನಾಗ ಭರತ್ ಡಾಕ ತಿಳಿಸಿದ್ದಾರೆ.

ಬಾಹ್ಯಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ಭಾಗಿಯಾಗುವುದಕ್ಕೆ 2020ರಲ್ಲಿ ಅವಕಾಶ ನೀಡಲಾಗಿತ್ತು.

ಸಾಕ್ಷ್ಯಾಧಾರಗಳ ಕೊರತೆ: ಗಲ್ಲು ಶಿಕ್ಷೆಗೆ ಗುರಿಯಾಗಿದ್ದವರ ಖುಲಾಸೆ

ನವದೆಹಲಿ (ಪಿಟಿಐ): 19 ವರ್ಷದ ಮಹಿಳೆ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಪ್ರಕರಣ ಸಂಬಂಧ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಮೂವರು ಅಪರಾಧಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಸುಪ್ರೀಂ ಕೋರ್ಟ್ ಸೋಮವಾರ ಖುಲಾಸೆಗೊಳಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಯು.ಯು. ಲಲಿತ್, ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಮತ್ತು ಬೇಲಾ ಎಂ.ತ್ರಿವೇದಿ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠವು ಈ ಸಂಬಂಧ 40 ಪುಟಗಳ ತೀರ್ಪು ಪ್ರಕಟಿಸಿದೆ.

'ಆರೋಪಿಗಳ ಬಂಧನ, ಕೃತ್ಯಕ್ಕೆ ಬಳಸಿದ್ದ ಕಾರು, ಘಟನಾ ಸ್ಥಳದಲ್ಲಿ ಜಪ್ತಿ ಮಾಡಿರುವ ಸಾಧನಗಳು ಹಾಗೂ ಕಲೆ ಹಾಕಿದ ಮಾದರಿ, ವೈಜ್ಞಾನಿಕ ಹಾಗೂ ವೈದ್ಯಕೀಯ ಸಾಕ್ಷ್ಯ, ಡಿಎನ್‌ಎ ವಿವರ, ಫೋನ್‌ನಲ್ಲಿ ಮಾತನಾಡಿರುವ ಕುರಿತಾದ ಧ್ವನಿ ಮುದ್ರಿಕೆ (ಸಿಡಿಆರ್) ಹೀಗೆ ಆರೋಪ ಸಾಬೀತುಪಡಿಸಲು ಬೇಕಿರುವ ಯಾವುದೇ ಸಾಕ್ಷ್ಯಾಧಾರಗಳನ್ನು ಪ್ರಾಸಿಕ್ಯೂಷನ್ ಒದಗಿಸಿಲ್ಲ. ಹೀಗಾಗಿ ಬೇರೆ ದಾರಿ ಇಲ್ಲದೆ ಅಪರಾಧಿಗಳನ್ನು ಖುಲಾಸೆಗೊಳಿಸುತ್ತಿದ್ದೇವೆ' ಎಂದು ನ್ಯಾಯಪೀಠ ಹೇಳಿದೆ.

'ಘೋರ ಅಪರಾಧದಲ್ಲಿ ಭಾಗಿಯಾಗಿದ್ದವರನ್ನು ಶಿಕ್ಷೆಗೆ ಒಳಪಡಿಸದಿದ್ದಾಗ ಅಥವಾ ಬಿಡುಗಡೆಗೊಳಿಸಿದಾಗ ಸಮಾಜದಲ್ಲಿ ಹತಾಶೆಯ ವಾತಾವರಣ ನಿರ್ಮಾಣವಾಗುವುದು ಸಹಜ. ಅದರಲ್ಲೂ ಮುಖ್ಯವಾಗಿ ಸಂತ್ರಸ್ತೆಯ ಕುಟುಂಬದವರಿಗೆ ವಿಪರೀತ ಸಂಕಟವಾಗುತ್ತದೆ. ಆದರೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಬರೀ ಅನುಮಾನದ ಆಧಾರದಲ್ಲಿ ಆರೋಪಿಗಳನ್ನು ಶಿಕ್ಷೆಗೆ ಗುರಿಪಡಿಸುವುದಕ್ಕೆ ಕಾನೂನು ಅನುವು ಮಾಡಿಕೊಡುವುದಿಲ್ಲ' ಎಂದೂ ನ್ಯಾಯಪೀಠ ತಿಳಿಸಿದೆ.

'ವಿಚಾರಣಾ ಪ್ರಕ್ರಿಯೆಯಲ್ಲಿ ಸಾಕಷ್ಟು ಲೋಪಗಳಾಗಿವೆ' ಎಂದು ಹೇಳಿರುವ ನ್ಯಾಯಪೀಠವು ಸಂತ್ರಸ್ತೆಯ ಕುಟುಂಬದವರಿಗೆ ಪರಿಹಾರ ಪಡೆಯುವ ಹಕ್ಕು ಇದೆ' ಎಂದೂ ತಿಳಿಸಿದೆ.

ಕೆಲಸ ಮುಗಿಸಿ ಮನೆಗೆ ಮರಳುತ್ತಿದ್ದ ಮಹಿಳೆಯನ್ನು 2012ರ ಫೆಬ್ರುವರಿಯಲ್ಲಿ ದೆಹಲಿಯ ಚಾವ್ಲಾ ಪ್ರದೇಶದಲ್ಲಿ ಅಪಹರಿಸಿದ್ದ ಅಪರಾಧಿಗಳು ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಬರ್ಬರವಾಗಿ ಕೊಲೆ ಮಾಡಿದ್ದರು. ಘಟನೆ ನಡೆದ ಮೂರು ದಿನಗಳ ನಂತರ ಹರಿಯಾಣದ ರೇವಾರಿ ಬಳಿಯ ಗ್ರಾಮವೊಂದರಲ್ಲಿ ಕೊಳೆತ ಹಾಗೂ ತುಂಡರಿಸಿದ ಸ್ಥಿತಿಯಲ್ಲಿ ಮಹಿಳೆಯ ಮೃತದೇಹ ಪತ್ತೆಯಾಗಿತ್ತು.

ನೀತಿ ಸಮಿತಿ ಅಧ್ಯಕ್ಷ ಜಾವಡೇಕರ್

ನವದೆಹಲಿ (ಪಿಟಿಐ): ಕೇಂದ್ರ ಮಾಜಿ ಸಚಿವ ಪ್ರಕಾಶ್ ಜಾವಡೇಕರ್ ಅವರನ್ನು ರಾಜ್ಯಸಭಾ ನೀತಿ ಸಮಿತಿ ಮುಖ್ಯಸ್ಥರಾಗಿ ಮತ್ತು ಬಿಜೆಪಿ ಸಂಸದ ಸಿ.ಎಂ. ರಮೇಶ್ ಅವರನ್ನು ವಸತಿ ಸಮಿತಿಯ ಮುಖ್ಯಸ್ಥರಾಗಿ ನೇಮಿಸಲಾಗಿದೆ.

ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಹಲವು ಸಮಿತಿಗಳನ್ನು ಪುನರ್ ರಚನೆ ಮಾಡಿ ಅವುಗಳ ಮುಖ್ಯಸ್ಥರನ್ನು ನೇಮಕ ಮಾಡಿದ್ದಾರೆ ಎಂದು ಮೇಲ್ಮನೆ ಸಚಿವಾಲಯ ಪ್ರಕಟಣೆ ಬಿಡುಗಡೆ ಮಾಡಿದೆ.

ದೇಶದ 576 ಮಾತೃಭಾಷೆಗಳ ಸಮೀಕ್ಷೆ ಮುಕ್ತಾಯ

ನವದೆಹಲಿ (ಪಿಟಿಐ): ದೇಶದಲ್ಲಿನ 576 ಮಾತೃಭಾಷೆಗಳ ಸಮೀಕ್ಷೆ ಮತ್ತು ಅವುಗಳಿಗೆ ಸಂಬಂಧಿಸಿದ ಪ್ರದೇಶಗಳ ವಿಡಿಯೊ ಚಿತ್ರೀಕರಣವನ್ನು ಕೇಂದ್ರ ಗೃಹ ಸಚಿವಾಲಯ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಭಾಷೆಗಳ ಜೊತೆಗೆ ಅವುಗಳ ಉಪಭಾಷೆಗಳ ಸಮೀಕ್ಷೆಯನ್ನೂ ನಡೆಸಲಾಗಿದೆ.

ದೇಶದ ಪ್ರತಿಯೊಂದು ಮಾತೃಭಾಷೆಯ ಅಸ್ಮಿತೆಯ ಸಂರಕ್ಷಣೆ ಹಾಗೂ ಭಾಷೆಗಳ ಮೂಲ ಮಾಧುರ್ಯವನ್ನು ವಿಶ್ಲೇಷಿಸಲು ಅನುಕೂಲವಾಗುವಂತೆ ರಾಷ್ಟ್ರೀಯ ಮಾಹಿತಿ ಕೇಂದ್ರದಲ್ಲಿ (ಎನ್‌ಐಸಿ) 'ವೆಬ್ ಆರ್ಕೈವ್' (ವೆಬ್ ದಸ್ತಾವೇಜು) ಸ್ಥಾಪಿಸಲು ಯೋಜಿಸಲಾಗಿದೆ ಎಂದು ಗೃಹ ಸಚಿವಾಲಯದ 2021-22ನೇ ಸಾಲಿನ ವಾರ್ಷಿಕ ವರದಿಯಲ್ಲಿ ಮಾಹಿತಿ ನೀಡಲಾಗಿದೆ.

ಈ ಉದ್ದೇಶಕ್ಕಾಗಿ, ಭಾಷಾಶಾಸ್ತ್ರಜ್ಞರಿಂದ ಭಾಷಾ ದತ್ತಾಂಶಗಳ ವ್ಯವಸ್ಥಿತ ಜೋಡಣೆ ಮತ್ತು ಸಂಪಾದನಾ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ಸಚಿವಾಲಯವು ಮಾಹಿತಿ ನೀಡಿದೆ.

'ಭಾರತದ ಮಾತೃಭಾಷಾ ಸಮೀಕ್ಷೆ ಯಶಸ್ವಿಯಾಗಿ ಪೂರ್ಣಗೊಂಡಿದೆ. 6ನೇ ಪಂಚವಾರ್ಷಿಕ ಯೋಜನೆ ಜಾರಿಗೊಂಡಾಗಿನಿಂದಲೂ ಭಾರತ ಭಾಷಾ ಸಮೀಕ್ಷೆಯನ್ನು (ಎಲ್‌ಎಸ್‌ಐ) ನಿಯಮಿತವಾಗಿ ಸಂಶೋಧನಾ ಚಟುವಟಿಕೆಯನ್ನಾಗಿ ನಡೆಸಲಾಗುತ್ತಿದೆ' ಎಂದೂ ಹೇಳಿದೆ.

ಈ ಯೋಜನೆಯ ಭಾಗವಾಗಿ ಜಾರ್ಖಂಡ್‌ಗೆ ಸಂಬಂಧಿಸಿದ ಭಾಷಾ ಸಮೀಕ್ಷೆಯ ಸಂಪುಟವನ್ನು ಅಂತಿಮಗೊಳಿಸಲಾಗಿದೆ. ಹಿಮಾಚಲ ಪ್ರದೇಶಕ್ಕೆ ಸಂಬಂಧಪಟ್ಟ ಸಮೀಕ್ಷೆ ಅಂತಿಮಗೊಳ್ಳುವ ಹಂತದಲ್ಲಿದೆ. ತಮಿಳುನಾಡು ಮತ್ತು ಉತ್ತರ ಪ್ರದೇಶದ ಕ್ಷೇತ್ರಕಾರ್ಯ ನಡೆಯುತ್ತಿದೆ ಎಂದು ತಿಳಿಸಿದೆ.

'ರಾಜ್ಯಪಾಲ ಕೇಂದ್ರದ ಕೈಗೊಂಬೆ'

ಒಂದನೇ ಪುಟದಿಂದ

ಇದರ ಬೆನ್ನಲ್ಲೇ ರಾಜ್ಯಪಾಲರ ಕಾನೂನು ಸಲಹೆಗಾರ ತಮ್ಮ ಸ್ಥಾನಕ್ಕೆ ಮಂಗಳವಾರ ಸಂಜೆ ರಾಜೀನಾಮೆ ನೀಡಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಕುಲಪತಿ ನೇಮಕ ಸಂಬಂಧ ಕೇರಳ ವಿಧಾನಮಂಡಲವು ಅನುಮೋದಿಸುವ ಮಸೂದೆಗೆ ರಾಜ್ಯಪಾಲ ಆರಿಫ್ ಅವರು ಇನ್ನೂ ಅಂಕಿತ ಹಾಕಿಲ್ಲ. ಹಲವು ಮಸೂದೆಗಳಿಗೆ ಅವರಿನ್ನೂ ಅಂಕಿತ ಹಾಕಿಲ್ಲ ಎಂದು ಆಡಳಿತಾರೂಢ ಎಲ್‌ಡಿಎಫ್ ಆರೋಪಿಸಿದೆ. ರಾಜ್ಯಪಾಲರ ಈ ನಡೆಯನ್ನು ಖಂಡಿಸಿ ಆಡಳಿತ ಮೈತ್ರಿಕೂಟದ ಪಕ್ಷವಾದ ಸಿಪಿಎಂನ ಸದಸ್ಯರು, ರಾಜ್ಯಪಾಲರ ವಿರುದ್ಧ ಚಳವಳಿ ಆರಂಭಿಸಿದ್ದಾರೆ.

ರಾಜ್ಯಪಾಲರನ್ನು ಕೇಂದ್ರವು ವಾಪಸ್ ಕರೆಸಿಕೊಳ್ಳುವವರೆಗೂ ಪ್ರತಿಭಟನೆ ನಡೆಸಲು ಎಲ್‌ಡಿಎಫ್ ಮಿತ್ರಪಕ್ಷಗಳು ನಿರ್ಧರಿಸಿವೆ. ಇದರ ಭಾಗವಾಗಿ ರಾಜ್ಯಪಾಲರ ವಿರುದ್ಧ ಕರಪತ್ರ ಹೊರಡಿಸಲಾಗಿದೆ. ರಾಜ್ಯದಾದ್ಯಂತ ಮನೆ–ಮನೆಗೆ ತೆರಳಿ ಕರಪತ್ರ ಹಂಚಲಾಗುತ್ತಿದೆ. ರಾಜಭವನದ ಮುಂದೆ ಇದೇ 15ರಂದು ಭಾರಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದು, ಪ್ರತಿಭಟನೆ ಬೆಂಬಲಿಸುವಂತೆ ವಿರೋಧ ಪಕ್ಷಗಳಿಗೂ ಆಹ್ವಾನ ನೀಡಲಾಗಿದೆ.

'ರಾಜ್ಯಪಾಲರು ಸಂವಿಧಾನಕ್ಕೆ ಬದ್ಧವಾಗಿರಬೇಕು. ಬದಲಿಗೆ ನಮ್ಮ ರಾಜ್ಯಪಾಲರು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಹೇಳಿದಂತೆ ಕೇಳುತ್ತಿದ್ದಾರೆ. ಇದನ್ನು ಎದುರಿಸಲು ಜನರ ಬೆಂಬಲ ಅಗತ್ಯ. ಹೀಗಾಗಿಯೇ ಕರಪತ್ರ ಹಂಚಿ, ಪ್ರತಿಭಟನೆಗೆ ಬೆಂಬಲ ನೀಡುವಂತೆ ಜನರಿಗೆ ಕರೆ ನೀಡಲಾಗುತ್ತಿದೆ. ರಾಜಭವನದ ಮುಂದೆ ನಡೆಯುವ ಪ್ರತಿಭಟನೆಗೆ ಒಂದು ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಲು ನಿರ್ಧರಿಸಲಾಗಿದೆ' ಎಂದು ಸಿಪಿಎಂ ಹೇಳಿದೆ.

ಪ್ರತಿಭಟನೆ ತೀವ್ರತೆ ಪಡೆದುಕೊಳ್ಳುತ್ತಿರುವ ಸಂದರ್ಭದಲ್ಲೇ ರಾಜಭವನದ ಅಧಿಕಾರಿಗಳು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಕೇರಳ ರಾಜ್ಯಪಾಲರ ಕಾನೂನು ಸಲಹೆಗಾರ ಕೆ.ಜಾಜು ಬಾಬು ಮತ್ತು ವಿಶ್ವವಿದ್ಯಾಲಯ ಕುಲಪತಿಗಳ ಸ್ಥಾಯಿ ಸಮಿತಿಯ ಸದಸ್ಯತ್ವಕ್ಕೆ ಎಂ.ಯು.ವಿಜಯಲಕ್ಷ್ಮಿ ಅವರು ರಾಜೀನಾಮೆ ನೀಡಿದ್ದಾರೆ. 'ನನ್ನ ಹುದ್ದೆಯನ್ನು ತೆರವು ಮಾಡುವ ಸ್ಥಿತಿ ಈಗ ಬಂದೊದಗಿದೆ. ಕಾರಣ ನಿಮಗೂ ಗೊತ್ತಿದೆ' ಎಂದು ಬಾಬು ಅವರು ತಮ್ಮ ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ.

ಪತ್ರಕರ್ತರ ಪ್ರತಿಭಟನೆ

ಕೇರಳ ರಾಜ್ಯಪಾಲರು ತಮ್ಮ ಪತ್ರಿಕಾಗೋಷ್ಠಿಯಿಂದ ಇಬ್ಬರು ವರದಿಗಾರರನ್ನು ಹೊರಗಟ್ಟಿದ್ದನ್ನು ಖಂಡಿಸಿ, ಕೇರಳ ಕಾರ್ಯನಿರತ ಪತ್ರಕರ್ತರ ಸಂಘವು ಮಂಗಳವಾರ ಪ್ರತಿಭಟನೆ ನಡೆಸಿತು.

ಸೋಮವಾರ ನಡೆದಿದ್ದ ಪತ್ರಿಕಾಗೋಷ್ಠಿಯಿಂದ ಹೊರನಡೆಯುವಂತೆ ಕೈರಾಲಿ ಟಿ.ವಿ. ಮತ್ತು ಮೀಡಿಯಾಒನ್ ವರದಿಗಾರರಿಗೆ ರಾಜ್ಯಪಾಲ ಆರಿಫ್ ಮಹೊಮ್ಮದ್ ಖಾನ್ ಅವರು ಹೇಳಿದ್ದರು. ಇದನ್ನು ಖಂಡಿಸಿ ಪತ್ರಕರ್ತರ ಸಂಘದ ಸದಸ್ಯರು ಮಂಗಳವಾರ ರಾಜಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ಪ್ರತಿಭಟನೆಯನ್ನು ಪ್ರಮುಖ ರಾಜಕೀಯ ಪಕ್ಷಗಳೂ ಬೆಂಬಲಿಸಿವೆ.

ಆಯ್ದ ಪತ್ರಕರ್ತರನ್ನು ಹೊರಗಟ್ಟಿದ್ದನ್ನು ಖಂಡಿಸಿ ಪತ್ರಕರ್ತರು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ. 'ಆಯ್ದ ಮಾಧ್ಯಮಗಳ ವರದಿಗಾರರ ಬಗ್ಗೆ ಇರುವ ಪೂರ್ವಗ್ರಹವನ್ನು ರಾಜ್ಯಪಾಲರು ಬಿಡಬೇಕು. ಪತ್ರಕರ್ತರು ಮುಕ್ತ ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸುವಂತಹ ವಾತಾವರಣ ಇರಬೇಕು' ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/34/2022–23 ದಿನಾಂಕ: 07–11–2022
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MLA Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **22–11–2022ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/2992/ಅಡ್ವರ್ಟೋರ್/2022–23

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
ಸಂ: ಕೆಆರ್‌ಡಿಸಿಎಲ್/ಐಎಫ್‌ಬಿ/2022–23/31 ದಿನಾಂಕ: 05.11.2022
ಟೆಂಡರ್ ಪ್ರಕಟಣೆ
ಹೊಸಕೋಟೆ–ಚಿಂತಾಮಣಿ ರಸ್ತೆಯ ಭೀಮಕ್ಕನಹಳ್ಳಿ ಮತ್ತು ಬೀಚಗೊಂಡನಹಳ್ಳಿ ಗ್ರಾಮಗಳ ಬಳಿಯ ಟೋಲ್ ಪ್ಲಾಜಾಗಳಿಂದ ಬಳಕೆದಾರರ ಶುಲ್ಕ ಸಂಗ್ರಹಣೆ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **www.eproc.karnataka.gov.in** ವೆಬ್‌ಸೈಟ್ ಮೂಲಕ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸ್ವೀಕರಿಸುವ ಅಂತಿಮ **ದಿನಾಂಕ : 25.11.2022ರ 17.30 ಗಂಟೆ**ವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28.11.2022ರಂದು ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುತ್ತದೆ.
ಗಮನಿಸಿ : ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳಿದ್ದಲ್ಲಿ ಕೇವಲ ಇ–ಪೋರ್ಟಲ್/ಕರಅನಿನಿ ವೆಬ್‌ಸೈಟ್ : http:www.krdcl.inನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು ಕೆಆರ್‌ಡಿಸಿಎಲ್, ಬೆಂಗಳೂರು
DIPR/CP/Yakshi/2984/2022-23

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2022–23/5413 ದಿನಾಂಕ:07.11.2022
–: ಟೆಂಡರ ಅಧಿಸೂಚನೆ (ಇ–ಪ್ರೊಕ್ಯೂರಮೆಂಟ್‌ನಲ್ಲಿ):–
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1, 2 & 4 ರಲ್ಲಿ ಲೆಕ್ಕ ಶೀರ್ಷಿಕೆ: 3054–ರಾಜ್ಯ ಹೆದ್ದಾರಿ/ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ , 3054 ರಾಜ್ಯ ಹೆದ್ದಾರಿ ರಸ್ತೆ ನಿರ್ವಹಣೆ (ಅತೀವೃಷ್ಠಿ ಹಾಗೂ ನೆರೆಹಾವಳಿ) ಸುಧಾರಣೆ, 3054– ಜಿಲ್ಲಾ ಮುಖ್ಯ ರಸ್ತೆಗಳ ಸೇತುವೆ ನಿರ್ವಹಣೆ (ಅತೀವೃಷ್ಠಿ /ಪ್ರವಾಹ), 5054–ರಾಜ್ಯ ಹೆದ್ದಾರಿ ರಸ್ತೆ / ಜಿಲ್ಲಾ ಮತ್ತು ಇತರೆ ರಸ್ತೆಗಳು ಕಾಮಗಾರಿಗಳು–ಸುಧಾರಣೆಗಳು ಮತ್ತು 5054–ರಾಜ್ಯ ಹೆದ್ದಾರಿ / ಜಿಲ್ಲಾ ಮುಖ್ಯ ರಸ್ತೆ ಸೇತುವೆ–ಸುಧಾರಣೆಗಳು ಅಡಿಯಲ್ಲಿ ಒಟ್ಟು 22 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 558.46 ಲಕ್ಷಗಳು ಹಾಗೂ ರೂ. 3.98 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಗರಿಷ್ಠ ಹಾಗೂ ಕನಿಷ್ಠ ಅನುಕ್ರಮವಾಗಿ ರೂ. 8,38,000/– ಹಾಗೂ ರೂ. 10,000/– ಇರುತ್ತದೆ. ಭಾಗ–1 : ಟೆಂಡರ ಸ್ವೀಕರಿಸುವ ದಿನಾಂಕ 17–11–2022 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ 18–11–2022 ರ ಸಂಜೆ 4.45 ಘಂಟೆ ನಂತರ ಭಾಗ–2 : ಟೆಂಡರ ಸ್ವೀಕರಿಸುವ ದಿನಾಂಕ 15–11–2022 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 16–11–2022 ರ ಸಂಜೆ 4.45 ಘಂಟೆ ನಂತರ ಭಾಗ–3: ಟೆಂಡರ ಸ್ವೀಕರಿಸುವ ದಿನಾಂಕ 22–11–2022 ರ ಸಂಜೆ 4.30 ಘಂಟೆಯರೆಗೆ ಮತ್ತು ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 23–11–2022 ರ ಸಂಜೆ 4.45 ಘಂಟೆ ನಂತರ, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ದಿನಾಂಕ: 08.11.2022 ರ ನಂತರ ಪಡೆಯಬಹುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1135/MCA/2022-23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.
ಸಂಖ್ಯೆ: ಮಾನಿಮಂ/71/ಹೆಚ್‌ಪಿಐ/17ನೇ ಪ್ರವರ್ಗ/2022/5310 ದಿನಾಂಕ : 08–11–2022
ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ
ಮೆ॥ ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ, ಇವರು, ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚಿಂಚೋಳಿ ಗ್ರಾಮದ ಸರ್ವೇ ನಂ. 239/ಎ, 240/ಎ, 249, 250 (ಕೆ.ಐ.ಎ.ಡಿ.ಬಿ ನೀಡಿರುವ ಜಾಗ) ಮತ್ತು ಸರ್ವೇ ನಂ.21/2, 21/3, 22, 23, 246/1, 247/ಎ, 248/1, 248/2 ಇಲ್ಲಿ 5000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ಅರೆಯುವ ಸಕ್ಕರೆ ಘಟಕ, 30 ಮೆ ವ್ಯಾಟ್ ಸಹ–ವಿದ್ಯುತ್ ಉತ್ಪಾದನಾ ಘಟಕ ಮತ್ತು 423 ಕೆ.ಎಲ್.ಪಿ.ಡಿ ಮಲ್ಟಿ ಫೀಡ್ ಡಿಸ್ಟಿಲರಿ ಘಟಕವನ್ನು ಒಟ್ಟು 213 ಎಕರೆ 18 ಗುಂಟೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುತ್ತಾರೆ.
ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ: 1.12.2009) ಪ್ರಕಾರ ರಾಜ್ಯ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ನವದೆಹಲಿ, ಇವರ Terms of Reference ಪತ್ರ ಸಂಖ್ಯೆ: J-11011/64/2012-IA-II(I) ದಿನಾಂಕ: 23.02.2022 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ: 15.10.2022 ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ. **ಯೋಜನೆಯ ವಿವರಗಳು ಕೆಳಕಂಡಂತಿದೆ:**
1 **ಕಂಪನಿಯ ಹೆಸರು ಮತ್ತು ವಿಳಾಸ:** ಮೆ॥ ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ, ಚಿಂಚೋಳಿ ಗ್ರಾಮ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.
2 **ಉದ್ದೇಶಿತ ಯೋಜನೆಯ ಸ್ಥಳ:** ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಚಿಂಚೋಳಿ ಗ್ರಾಮದ ಸರ್ವೇ ನಂ. 239/ಎ, 240/ಎ, 249, 250 (ಕೆ.ಐ.ಎ.ಡಿ.ಬಿ ನೀಡಿರುವ ಜಾಗ) ಮತ್ತು ಸರ್ವೇ ನಂ.21/2, 21/3, 22, 23, 246/1, 247/ಎ, 248/1, 248/2 ರಲ್ಲಿ ಒಟ್ಟು 213 ಎಕರೆ 18 ಗುಂಟೆ ಪ್ರದೇಶ.
3 **ಉದ್ದೇಶಿತ ಕಾರ್ಖಾನೆಯ ಯೋಜನೆ:** 5000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ಅರೆಯುವ ಸಕ್ಕರೆ ಘಟಕ, 30 ಮೆ.ವ್ಯಾಟ್ ಸಹ–ವಿದ್ಯುತ್ ಉತ್ಪಾದನಾ ಘಟಕ ಮತ್ತು 423 ಕೆ.ಎಲ್.ಪಿ.ಡಿ ಮಲ್ಟಿ ಫೀಡ್ ಡಿಸ್ಟಿಲರಿ ಘಟಕ ಸ್ಥಾಪಿಸುವುದು.
4 **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 10.12.2022 (ಶನಿವಾರ), ಸಮಯ: ಬೆಳಗ್ಗೆ 11.30 ಗಂಟೆ, ಸ್ಥಳ: ಸಿದ್ಧಸಿರಿ ಸೌಹಾರ್ದ ಸಹಕಾರಿ ನಿಯಮಿತ, ಚಿಂಚೋಳಿ ಗ್ರಾಮ, ಚಿಂಚೋಳಿ ತಾಲ್ಲೂಕು, ಕಲಬುರಗಿ ಜಿಲ್ಲೆ.**
5 **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ :** ಅ) ಜಿಲ್ಲಾಧಿಕಾರಿಗಳ ಕಛೇರಿ, ಕಲಬುರಗಿ ಜಿಲ್ಲೆ, ಕಲಬುರಗಿ. ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕಲಬುರಗಿ ಜಿಲ್ಲೆ, ಕಲಬುರಗಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕಲಬುರಗಿ. ಈ) ಪುರ ಸಭೆ, ಚಿಂಚೋಳಿ, ಕಲಬುರಗಿ ಜಿಲ್ಲೆ. ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ. ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. ಋ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.
ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ :kspcb.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಸದಸ್ಯ ಕಾರ್ಯದರ್ಶಿ
"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

❦ ಸುಭಾಷಿತ ❦

ಸ್ವಗೌರವವು ಹೊಸ ಸವಾಲನ್ನು ಎದುರಿಸಲು ಧೈರ್ಯವನ್ನು ತುಂಬುತ್ತದೆ. - ಶಿವ್ ಖೇರಾ

ನಗರದ ಧಮನಿಗಳಲ್ಲಿ ಕಿಲುಬು ಶೇಖರಣೆ ಸರಹದ್ದಿನಾಚೆಗೂ ವಿಷವರ್ತುಲ ವಿಸ್ತರಣೆ

ಜಾಗತಿಕ ಹೂಡಿಕೆದಾರರ ಸಮ್ಮೇಳನದ ಯಶಸ್ಸನ್ನು ಸರ್ಕಾರಿ ವಕ್ತಾರರು ಹಾಡಿಹೊಗಳುತ್ತಿರುವ ಸಂದರ್ಭದಲ್ಲೇ ಪ್ರಜೆಗಳ ಬದುಕಿನ ಗುಣಮಟ್ಟದ ಬಗ್ಗೆ ಅಧಿಕಾರಿಗಳ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತಿರುವ ಸಂಗತಿಗಳು ಒಂದರಮೇಲೊಂದರಂತೆ ಬೆಳಕಿಗೆ ಬರುತ್ತಿವೆ. ನಗರ ಮಾಲಿನ್ಯ ನಿಯಂತ್ರಣಕ್ಕೆಂದೇ ಕಳೆದ ವರ್ಷ (2020-21ರಲ್ಲಿ) ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದ ₹ 279 ಕೋಟಿ ಮೊತ್ತ ಬಳಕೆಯಾಗದೇ ಉಳಿದಿದೆ. ಕಸ ವಿಲೇವಾರಿಗೆ, ಕಟ್ಟಡ ಅವಶೇಷಗಳ ತೆರವಿಗೆ ಮತ್ತು ವಾಯುಮಾಲಿನ್ಯ ನಿವಾರಣೆಗೆಂದೇ ಅನುದಾನ ಲಭ್ಯವಾಗುತ್ತಿದ್ದರೂ ಇಂಥ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಬೇಕಾದ ಹೊಸ ಯೋಜನೆಗಳೇ ಅನುಷ್ಠಾನವಾಗಿಲ್ಲ. ಸಾಲದ್ದಕ್ಕೆ, ಈಗಿನ ಹಣಕಾಸು ವರ್ಷದಲ್ಲಿ ಮತ್ತೆ ₹ 140 ಕೋಟಿ ಅನುದಾನವನ್ನು ರಾಜ್ಯ ಪಡೆದಿದೆ. ಈ ಮೊತ್ತವನ್ನು ವಿನಿಯೋಗಿಸುವ ಹೊಣೆ ಬಿಬಿಎಂಪಿ ಮತ್ತು ಬಿಎಂಟಿಸಿಗಳ ಮೇಲಿದ್ದು, ನಗರಮಾಲಿನ್ಯದ ಗಂಭೀರ ಸಮಸ್ಯೆಯ ಬಿಸಿ ಅವಕ್ಕೆ ತಟ್ಟಿದಂತಿಲ್ಲ. ದೇಶದ ಅತ್ಯಂತ ಹತ್ತು ಕೊಳಕು ನಗರಗಳಲ್ಲಿ ಬೆಂಗಳೂರೂ ಒಂದೆಂಬ ಕುಖ್ಯಾತಿಯನ್ನು ತೊಡೆದು ಹಾಕಬೇಕೆಂಬ ಯಾವ ವಿಶೇಷ ಆಸಕ್ತಿಯೂ ನಗರಾಡಳಿತಕ್ಕೆ ಇದ್ದಂತಿಲ್ಲ. ಹೊಗೆ ಕಕ್ಕದ 300 ಎಲೆಕ್ಟ್ರಿಕ್ ಬಸ್‌ಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ರಸ್ತೆಗೆ ಇಳಿಸಿದೆ ನಿಜ. ಇನ್ನೊಂದು ವರ್ಷದಲ್ಲಿ ಅಂಥ ಇನ್ನೂ 1,222 ಬಸ್‌ಗಳನ್ನು ಓಡಿಸಲಾಗುವುದೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ನಗರದ ವಾಹನ ದಟ್ಟಣೆಯನ್ನು ಗಮನಿಸಿದರೆ ಈ ಸಂಖ್ಯೆ ಅದೆಷ್ಟು ಅಲ್ಪವೆಂಬುದು ಗೊತ್ತಾಗುತ್ತದೆ. ಸುಮಾರು 5,600 ಬಸ್‌ಗಳನ್ನು ಬಿಎಂಟಿಸಿ ಓಡಿಸುತ್ತಿದ್ದು, 'ನಗರದ ಸಮಗ್ರ ಸಂಚಾರ ಯೋಜನೆ'ಯ ಪ್ರಕಾರ ಇವುಗಳ ಸಂಖ್ಯೆ ಈಗಾಗಲೇ 12,000 ಇರಬೇಕಿತ್ತು. ಸಮೂಹ ಸಾರಿಗೆಯು ಸಮರ್ಪಕವಾಗಿ ಇಲ್ಲದಿರುವ ಕಾರಣದಿಂದ ಖಾಸಗಿ ದ್ವಿಚಕ್ರ ವಾಹನಗಳು, ಕಾರುಗಳ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆ. ದಾಖಲೆಗಳ ಪ್ರಕಾರ, ಇದುವರೆಗೆ 22 ಲಕ್ಷ ಕಾರುಗಳು ಮತ್ತು 69 ಲಕ್ಷ ದ್ವಿಚಕ್ರ ವಾಹನಗಳು ನೋಂದಣಿಗೊಂಡಿವೆ. ಇಷ್ಟೊಂದು ವಾಹನಗಳು ನಗರದಲ್ಲಿ ಡೀಸೆಲ್, ಪೆಟ್ರೋಲ್ ಹೊಗೆ ಹೊಮ್ಮಿಸುತ್ತಿರುವಾಗ ಕೆಲವೇ ನೂರು ವಿದ್ಯುತ್‌ಚಾಲಿತ ಬಸ್‌ಗಳು ಮತ್ತು ಖಾಸಗಿ ವಾಹನಗಳು ಗಾಳಿಯ ಶುದ್ಧೀಕರಣಕ್ಕೆ ಯಾವ ಗಮನಾರ್ಹ ಕೊಡುಗೆಯನ್ನೂ ಕೊಡಲಾರವು. ಇಷ್ಟಕ್ಕೂ ರಸ್ತೆಯಿಂದ ಹೊಮ್ಮುವ ಕಣಮಾಲಿನ್ಯಕ್ಕೆ ವಾಹನದ ಹೊಗೆಗಿಂತ ಹೆಚ್ಚಿನ ಕೊಡುಗೆ ರಸ್ತೆಯ ದೂಳಿನಿಂದಲೇ ಬರುತ್ತದೆ. ರಸ್ತೆಗಳ ಗುಣಮಟ್ಟ ಕಳಪೆ ಇದ್ದಷ್ಟೂ ಟಯರ್ ಸವೆತದಿಂದ ಹೊಮ್ಮುವ ವಿಷಕಣಗಳ ದಟ್ಟಣೆ ಹೆಚ್ಚಾಗಿರುತ್ತದೆ. ಜಗತ್ತಿನ ಅತ್ಯಂತ ಕೊಳಕು ಗಾಳಿಯ ನಗರವೆಂದು ಕುಖ್ಯಾತಿ ಪಡೆದ ದೆಹಲಿಯಲ್ಲಿ ರಸ್ತೆದೂಳಿನ ನಿವಾರಣೆಗೆಂದು ದಿನವೂ ನೀರಿನ ತುಂತುರು ಸಿಂಪಡಣೆ ಮಾಡುವ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ದೂಳುಮಾಲಿನ್ಯವನ್ನು ಕಡಿಮೆ ಮಾಡುವ ದಿಸೆಯಲ್ಲಿ ಬಿಎಂಟಿಸಿಯಷ್ಟೇ ಬಿಬಿಎಂಪಿಯ ಹೊಣೆಗಾರಿಕೆಯೂ ಹೆಚ್ಚಿನದಾಗಿ ಇರಬೇಕಾಗುತ್ತದೆ. ಕಸ ವಿಲೇವಾರಿ ಮತ್ತು ವಾಯುಮಾಲಿನ್ಯ ನಿಯಂತ್ರಣಕ್ಕೆಂದು ಕೇಂದ್ರದಿಂದ ಮಂಜೂರಾದ ಹಣವನ್ನೂ ವಿನಿಯೋಗಿಸಲಾರದಷ್ಟು ಜಡತ್ವವನ್ನು ಈ ಸಂಸ್ಥೆಗಳು ಪ್ರದರ್ಶಿಸುತ್ತಿವೆ ಎಂದರೆ ಅದಕ್ಕೇನು ಹೇಳೋಣ? ಇದೇ ಪ್ರಮಾಣದ ನಿಷ್ಕ್ರಿಯತೆಯನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯೂ ಪ್ರದರ್ಶಿಸಿದೆ.

ಕೊಳೆ ತೊಳೆಯಲು ಹಣವಷ್ಟೇ ಸಾಕೆ? ಮನದ ಮಬ್ಬು ತಿಳಿಯಾಗಬೇಡವೆ?

ರಸ್ತೆಯಲ್ಲಿ ಸವಕಳಿಗೊಂಡು ಬಿಸಾಕಿದ ಟಯರ್‌ಗಳ ಸಂಸ್ಕರಣೆಯಲ್ಲೂ ಕರ್ನಾಟಕ ಅಸೀಮ ನಿರ್ಲಕ್ಷ್ಯವನ್ನು ತೋರುತ್ತಿದೆಯೆಂದು ದಿಲ್ಲಿಯಿಂದ ಬಂದ ವರದಿಗಳು ಹೇಳುತ್ತಿವೆ. ಬಿಸಾಕಿದ ಟಯರ್‌ಗಳನ್ನು ಕರಗಿಸಿ ತೈಲವನ್ನು ಬಸಿದು ಮಾರುವ ಕಾರ್ಖಾನೆಗಳು ಅಪಾರ ಪ್ರಮಾಣದಲ್ಲಿ ವಿಷಗಾಳಿಯನ್ನು ಹೊರಕ್ಕೆಲ್ಲ ಹಬ್ಬಿಸುತ್ತಿದ್ದು, ಅವನ್ನೆಲ್ಲ ಮುಚ್ಚಿಸಬೇಕೆಂದು ಮೂರು ವರ್ಷಗಳ ಹಿಂದೆಯೇ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ನೀಡಿದೆ. ಆದರೂ ಕರ್ನಾಟಕದಲ್ಲಿ ಈಗಲೂ ಇಂಥ 19 ಘಟಕಗಳು ಗಾಳಿಗೆ ಕೊಳೆಯನ್ನು ಸೇರಿಸುತ್ತಲೇ ಇವೆ. ಟಯರ್ ಕರಗಿಸುವ ಉದ್ಯಮ 'ಅತಿ ಅಪಾಯಕಾರಿ' (ಕೆಂಪು) ಗುಂಪಿಗೆ ಸೇರಿದ್ದು, ಅದರಿಂದ ಹೊರಹೊಮ್ಮುವ ಗಾಳಿಯಲ್ಲಿ ಫ್ಯೂರಾನ್ ಮತ್ತು ಡಯಾಕ್ಸಿನ್ ನಂತಹ ತೀವ್ರ ವಿಷಕಣಗಳಿರುತ್ತವೆ. ಅವುಗಳ ಉಸಿರಾಟದಿಂದ ಶ್ವಾಸಕೋಶ ಭಗ್ನ, ಬಂಜೆತನ, ಮೂತ್ರಪಿಂಡ ವೈಫಲ್ಯದಂತಹ ಗಂಭೀರ ಕಾಯಿಲೆಗಳು ಬರುತ್ತವೆ ಎಂಬುದು ಎಂದೋ ಸಾಬೀತಾಗಿದೆ. ಟಯರ್‌ಗಳನ್ನು ಕರಗಿಸುವ ಅಂಥ ಘಟಕಗಳನ್ನು ಬೆಂಗಳೂರಿನಿಂದಾಚೆ ದೂರದ ಜಿಲ್ಲೆಗಳಲ್ಲಿ ಸ್ಥಾಪಿಸಿ, ಅದರತ್ತ ಕಣ್ಣೆತ್ತಿ ನೋಡಲಾಗುತ್ತಿಲ್ಲವೆಂದರೆ ಅದು ಮಾಲಿನ್ಯತಜ್ಞರ ನೈತಿಕ ಕುಸಿತದ ಲಕ್ಷಣವೂ ಹೌದು. ನಮ್ಮಲ್ಲಿ ಜಾಸ್ತಿ ಹೊಗೆ ಕಕ್ಕುವ ಹಳೆಯ ವಾಹನಗಳನ್ನೂ ಚಿಕ್ಕಪುಟ್ಟ ಪಟ್ಟಣಗಳಿಗೆ ಸಾಗಹಾಕುತ್ತೇವೆ. ಹಳೆ ಟಯರ್‌ಗಳ ಸಂಸ್ಕರಣಾ ಘಟಕಗಳನ್ನೂ ತಳ್ಳುತ್ತೇವೆ. ಕೊಳಕು ಚರಂಡಿ ನೀರನ್ನೂ ಅತ್ತ ಹರಿಯಬಿಡುತ್ತೇವೆ. ಶುದ್ಧ ನೀರು, ಲಕಲಕ ಹೊಳೆಯುವ ಆಸ್ಪತ್ರೆಗಳು ಮಾತ್ರ ದೊಡ್ಡ ನಗರಗಳಿಗೇ ಲಭ್ಯವಾಗುವಂತೆ ನೋಡಿಕೊಳ್ಳುತ್ತೇವೆ. ನಾವು ಕಟ್ಟಿಕೊಳ್ಳುತ್ತಿರುವ ಸ್ವಸ್ಥ, ಸಮಸಮಾಜದ ವೈಖರಿ ಇದು.

ಈ ಪರೀಕ್ಷೆಯು ಭಾರತದ ಗಂಡುಹಿರಿಮೆಯ ಸಮಾಜದ ಕಪ್ಪುಚುಕ್ಕೆಯಾಗಿದೆ

ಎರಡು ಬೆರಳ ಪರೀಕ್ಷೆಯೆನ್ನುವ ಅಸಭ್ಯ ನಡತೆ

ವಿಶ್ಲೇಷಣೆ

ಡಾ. ಎಚ್.ಎಸ್. ಅನುಪಮಾ

ಒಪ್ಪಿಗೆಯಿಲ್ಲದೆ ನಡೆಸುವ ಲೈಂಗಿಕ ಕ್ರಿಯೆಯೇ ಅತ್ಯಾಚಾರ ಎಂದಾದರೆ, ಒಪ್ಪಿಗೆಯ ಅಸ್ತಿತ್ವವನ್ನು ಸಂತ್ರಸ್ತೆಯ ಹೇಳಿಕೆಯಲ್ಲಿ ಹುಡುಕಬೇಕು, ಅವಳ ಯೋನಿಯ ಬಿಗಿತನ, ಮಡಿಕೆ, ಸಡಿಲತನದಲ್ಲಿ ಅಲ್ಲ. ಈ ಸರಳ ಮೂಲಭೂತ ತಿಳಿವಳಿಕೆಯೂ ಇಲ್ಲ ಎನ್ನುವುದೇ ಭಾರತದ ಗಂಡುಹಿರಿಮೆಯ ಸಮಾಜದ ಕಪ್ಪುಚುಕ್ಕೆ.

ಮೊದಲೆಲ್ಲ, ಅತ್ಯಾಚಾರಕ್ಕೆ ಒಳಗಾದ ಮಹಿಳೆಯ ಆರೋಗ್ಯ ತಪಾಸಣೆ, ಸಾಕ್ಷ್ಯ ಸಂಗ್ರಹದ ವೇಳೆ ತಪಾಸಣೆಗೆ ಬರುವ ವೈದ್ಯ ಅಥವಾ ವೈದ್ಯೆ ತಮ್ಮೆರಡು ಬೆರಳುಗಳನ್ನು ಯೋನಿಯಲ್ಲಿ ಹಾಕಿ, ಯೋನಿಪೊರೆ ಇದೆಯೇ, ಅದರ ಸ್ಥಿತಿ ಹೇಗಿದೆ, ಯೋನಿಯು ಬಿಗಿಯಾಗಿದೆಯೇ, ಸಡಿಲವಾಗಿದೆಯೇ, ಸಂಭೋಗ- ಬಲಾತ್ಕಾರ ನಡೆದ ಕುರುಹುಗಳೇನಾದರೂ ಇವೆಯೇ ಎಂಬುದನ್ನು ಪರಿಶೀಲಿಸಿ ವಿವರ ನೀಡಲು 'ಎರಡು ಬೆರಳ ಪರೀಕ್ಷೆ' ನಡೆಸುವುದು ಅವಶ್ಯವಾಗಿತ್ತು. ಆದರೆ ಮಹಿಳೆಯ ಘನತೆಯನ್ನು ಕುಗ್ಗಿಸುವ ಈ ಪರೀಕ್ಷೆಯನ್ನು ನಿಲ್ಲಿಸಲೇಬೇಕೆಂದು ನ್ಯಾಯಾಲಯಗಳು ಹೇಳುತ್ತಾ ಬಂದರೂ ಅದು ಕೊನೆಗೊಳ್ಳದ ಕಾರಣ, ಎರಡು ಬೆರಳ ಪರೀಕ್ಷೆ ನಡೆಸುವುದು 'ಅಸಭ್ಯ ನಡತೆ'ಯಾಗಿದ್ದು ಅದು ಶಿಕ್ಷಾರ್ಹ ಎಂದು ಪರಿಗಣಿಸುವಂತೆ ಆಯಿತು.

2004ರಲ್ಲಿ ಜಾರ್ಖಂಡ್‌ನ ಬಾಲಕಿಯ ಮೇಲೆ ಕೇಡಿಗನೊಬ್ಬ ಅತ್ಯಾಚಾರ ನಡೆಸಿ ಬೆಂಕಿ ಹಚ್ಚಿದ ಪ್ರಕರಣದಲ್ಲಿ, ತೀರಿಕೊಳ್ಳುವ ಮೊದಲು ಹುಡುಗಿ ಘಟನೆಯ ಪೂರ್ತಿ ವಿವರ ಕೊಟ್ಟಳು. ಪೂರಕ ಸಾಕ್ಷಿಗಾಗಿ ಅವಳ ಯೋನಿ ಪರೀಕ್ಷೆ ನಡೆಯಿತು. ಸೆಷನ್ಸ್ ನ್ಯಾಯಾಲಯ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿದಾಗ ಆತ ಹೈಕೋರ್ಟ್ ಮೊರೆ ಹೋದ. 2018ರಲ್ಲಿ ಖುಲಾಸೆಯಾದ! ಖುಲಾಸೆ ಪ್ರಶ್ನಿಸಿ ಸಲ್ಲಿಸಲಾದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ, 'ಮರಣಶಯ್ಯೆಯಲ್ಲಿರುವ ಹುಡುಗಿಯ ಹೇಳಿಕೆಗಿಂತ ದೊಡ್ಡ ಸಾಕ್ಷ್ಯ ಬೇಕಿಲ್ಲ. ಅಂಥ ಸ್ಥಿತಿಯಲ್ಲೂ ಅವಳಿಗೆ ಎರಡು ಬೆರಳ ಪರೀಕ್ಷೆ ನಡೆಸಿರುವುದು ಅಮಾನವೀಯ. ಹೆಣ್ಣು ಸಂಭೋಗಕ್ಕೆ ಒಗ್ಗಿಕೊಂಡಿರುವವಳೋ, ಅನೇಕ ಸಲ ಲೈಂಗಿಕ ಕ್ರಿಯೆಯಲ್ಲಿ ಭಾಗಿಯಾಗಿರುವವಳೋ ಎನ್ನುವುದು ಅಪ್ರಸ್ತುತವೆಂದು ಸುಪ್ರೀಂ ಕೋರ್ಟ್ ಬಹಳಷ್ಟು ಸಲ ಹೇಳಿದೆ. ಆದರೂ ಯೋನಿ ಪರೀಕ್ಷೆ ನಡೆಸುತ್ತಲೇ ಇರುವುದು ಗಂಡುಹಿರಿಮೆಯ, ಲಿಂಗಪೂರ್ವಗ್ರಹದ ನಡೆಯಾಗಿದೆ' ಎಂದು ಅ.31ರಂದು ನೀಡಿದ ತೀರ್ಪಿನಲ್ಲಿ ಖಂಡಿಸಿದರು. ಸಂತ್ರಸ್ತೆಗೆ ಆ ಪರೀಕ್ಷೆ ನಡೆಸುವುದು ಶಿಕ್ಷಾರ್ಹ ಅಪರಾಧವೆಂದು ತಿಳಿಸಿದರು.

ಅತ್ಯಾಚಾರ ಆರೋಪಿಯ ಪುರುಷತ್ವದ ಪರೀಕ್ಷೆಗೆ ಅವನ ಒಪ್ಪಿಗೆಯ ಅವಶ್ಯಕತೆ ಇರುವುದಿಲ್ಲ. ಆದರೆ ದೌರ್ಜನ್ಯ ಪ್ರಕರಣ ಒತ್ತಟ್ಟಿಗಿರಲಿ, ಹೆರಿಗೆ, ಪ್ರಜನನಾಂಗ ಕಾಯಿಲೆ ಪತ್ತೆಯೇ ಮೊದಲಾದ ಸಂದರ್ಭಗಳಲ್ಲಿಯೂ ಅವಳು ಅನುಮತಿಸದಿದ್ದರೆ ಯೋನಿ ಪರೀಕ್ಷೆ ಮಾಡುವಂತಿಲ್ಲ. ದಿನ ತುಂಬಿದ ಎಷ್ಟೋ ಬಸುರಿಯರು ಈ ಪರೀಕ್ಷೆ ತಪ್ಪಿಸಲು ಐಚ್ಛಿಕವಾಗಿ ಸಿಸೇರಿಯನ್‌ಗೆ ಒಳಗಾಗುತ್ತಾರೆ. ಹಾಗಿರುವಾಗ ಯೋನಿ ಪರೀಕ್ಷೆಯ ವರದಿಯನ್ನು ಇಟ್ಟುಕೊಂಡು ಪ್ರತಿವಾದಿ ವಕೀಲರು ಸಾರ್ವಜನಿಕರ ಎದುರು ಅವಹೇಳನಕಾರಿ ಪ್ರಶ್ನೆ ಕೇಳುತ್ತಾ ನಡೆಸುತ್ತಿದ್ದ ಅತ್ಯಾಚಾರ ವಿಚಾರಣೆ ಅಮಾನವೀಯ; ಪೊಲೀಸರಿಂದ, ವೈದ್ಯಕೀಯ ಸಿಬ್ಬಂದಿಯಿಂದ, ನ್ಯಾಯಾಲಯದಿಂದ, ಮಾಧ್ಯಮದವರಿಂದ ಸಂತ್ರಸ್ತ ಮಹಿಳೆ ಮತ್ತೆಮತ್ತೆ ಅವಮಾನ ಅನುಭವಿಸುವುದು ನಿಲ್ಲಬೇಕು ಎಂದು 80ರ ದಶಕದಿಂದ ಉಪೇಂದ್ರ ಬಕ್ಷಿ, ಸೀಮಾ ಸಖಾರೆ, ವಸುಧಾ ಧಗಂವರ್ ಮೊದಲಾದ ಹೋರಾಟಗಾರರು ಹಕ್ಕೊತ್ತಾಯ ತಂದರು.

ಅತ್ಯಾಚಾರ ಆಗಿದೆ ಅಥವಾ ಇಲ್ಲ ಎನ್ನಲು ಎರಡು ಬೆರಳ ಪರೀಕ್ಷೆಯು ಯಾವ ವೈಜ್ಞಾನಿಕ ಸಾಕ್ಷ್ಯವನ್ನೂ ಒದಗಿಸುವುದಿಲ್ಲ. ಪರೀಕ್ಷೆಯಿಂದ ಸಿಗುವ ಮಾಹಿತಿಯಿಂದ ಏನೂ ಉಪಯೋಗವಿಲ್ಲ ಎಂದು ಅನೇಕ ಅಂತರರಾಷ್ಟ್ರೀಯ ನಿಯಮಾವಳಿಗಳು ಮತ್ತು ವಿಶ್ವಸಂಸ್ಥೆಯ ಮಾರ್ಗದರ್ಶಿ ಸೂತ್ರಗಳೂ ಉಲ್ಲೇಖಿಸಿದವು.

ನಮ್ಮ ಸುಪ್ರೀಂ ಕೋರ್ಟ್ ಸಹ ಹಲವಾರು ಪ್ರಕರಣಗಳ ವಿಚಾರಣೆಯ ವೇಳೆ ಎರಡು ಬೆರಳ ಪರೀಕ್ಷೆ ನಡೆಸಬಾರದೆಂದು ಹೇಳಿತ್ತು. 2012ರ ನಿರ್ಭಯಾ ಅತ್ಯಾಚಾರ ಪ್ರಕರಣದ ಬಳಿಕ ರೂಪುಗೊಂಡ ನ್ಯಾಯಮೂರ್ತಿ ಜೆ.ಎಸ್.ವರ್ಮಾ ಸಮಿತಿಯ ವರದಿಯು, 'ಅತ್ಯಾಚಾರಕ್ಕೆ ಒಳಗಾದವರ ಹೇಳಿಕೆಯನ್ನೇ ಪರಮ ಸತ್ಯ ('ಗಾಸ್ಪೆಲ್ ಟ್ರೂತ್') ಎಂದು ಭಾವಿಸಬೇಕು. ಉಳಿದವೆಲ್ಲ ಅದಕ್ಕೆ ಪೂರಕ ಸಾಕ್ಷ್ಯಗಳಾಗಬೇಕು. ಎರಡು ಬೆರಳ ಪರೀಕ್ಷಾ ವಿಧಾನವನ್ನು ರದ್ದುಗೊಳಿಸಬೇಕು. ಅತ್ಯಾಚಾರಕ್ಕೆ ಒಳಗಾದ ಮಹಿಳೆಯ ಈ ಮೊದಲ ಲೈಂಗಿಕ ಅನುಭವಕ್ಕೂ ಸಾಕ್ಷ್ಯದ ಗುಣಮೌಲ್ಯಕ್ಕೂ ಸಂಬಂಧವಿಲ್ಲ' ಎಂದು ಸ್ಪಷ್ಟವಾಗಿ ತಿಳಿಸಿತು. ಕೇಂದ್ರ ಸರ್ಕಾರ ದೇಶದೆಲ್ಲೆಡೆ ಆಸ್ಪತ್ರೆಗಳಿಗೆ, ಆರೋಗ್ಯ- ಪೊಲೀಸ್ ಇಲಾಖೆ ಸಿಬ್ಬಂದಿಗೆ ಕಳಿಸಿದ ಸುತ್ತೋಲೆಯಲ್ಲೂ ಆ ಪರೀಕ್ಷೆ ಅನಗತ್ಯವೆಂದು ಹೇಳಲಾಯಿತು.

ವಿಚಾರಣೆಯ ವೇಳೆ ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳಲ್ಲಿ, 'ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಯ ನಡತೆ ಮತ್ತು ನೈತಿಕತೆ ಅಪ್ರಸ್ತುತ. ದೌರ್ಜನ್ಯಕ್ಕೆ ಒಳಗಾದವರ ಈ ಮೊದಲ ಲೈಂಗಿಕ ಸಂಬಂಧ, ಅನುಭವ ಕುರಿತು, ಅವರ ಅನೈತಿಕ ಸ್ವಭಾವ ಕುರಿತು ಪಾಟೀ ಸವಾಲಿನ ವೇಳೆಯೂ ಕೇಳುವಂತಿಲ್ಲ (ಸೆಕ್ಷನ್ 146, ಇಂಡಿಯನ್ ಎವಿಡೆನ್ಸ್ ಆ್ಯಕ್ಟ್). ಒಪ್ಪಿಗೆಯ ಪ್ರಶ್ನೆಯೇ ವಿವಾದಿತವಾಗಿರುವಾಗ ದೌರ್ಜನ್ಯಕ್ಕೆ ಒಳಗಾದವರ ನಡತೆ ಅಥವಾ ಈ ಮೊದಲ ಲೈಂಗಿಕತೆಯು ಅವರ 'ಒಪ್ಪಿಗೆ'ಯ ಮೌಲ್ಯ ನಿರ್ಧರಿಸುವಲ್ಲಿ ಅಪ್ರಸ್ತುತ (ಸೆಕ್ಷನ್ 53ಎ, ಇಂಡಿಯನ್ ಎವಿಡೆನ್ಸ್ ಆ್ಯಕ್ಟ್)' ಎಂದೂ ತಿಳಿಸಿತು. 2014ರ ಮಾರ್ಚ್ 6ರಂದು ಕೇಂದ್ರ ಆರೋಗ್ಯ ಸಚಿವಾಲಯವು ಹೊಸ ಮಾರ್ಗಸೂಚಿ ಗಳನ್ನು ದೇಶದ ಪ್ರತಿಯೊಂದು ಆಸ್ಪತ್ರೆಗೂ ರವಾನಿಸಿತ್ತು. ಅದರಲ್ಲಿ, 'ಅತ್ಯಾಚಾರ ದೃಢಗೊಳಿಸಲು ಎರಡು ಬೆರಳ ಪರೀಕ್ಷೆ ಮಾಡಬಾರದು. ವೈದ್ಯಕೀಯ ಪರೀಕ್ಷೆಯ ವೇಳೆ ಸಂತ್ರಸ್ತೆ ಮತ್ತು ವೈದ್ಯರನ್ನು ಹೊರತುಪಡಿಸಿ ಮೂರನೇ ವ್ಯಕ್ತಿ ಹಾಜರಿರಬಾರದು. ವೈದ್ಯ ಪುರುಷನಾಗಿದ್ದರೆ, ಮಹಿಳಾ ದಾದಿ ಕೊಠಡಿಯಲ್ಲಿ ಇರಬೇಕು. ತಾವು ಯಾವ ಪರೀಕ್ಷೆ ಮಾಡುತ್ತಿದ್ದೇವೆ, ಅದರ ಅಗತ್ಯವೇನೆಂದು ವೈದ್ಯರು ಸಂತ್ರಸ್ತೆಗೆ ಅರ್ಥವಾಗುವ ಭಾಷೆಯಲ್ಲಿ ವಿವರಿಸಿ, ಪೂರ್ವಾನುಮತಿ ಪಡೆದುಕೊಳ್ಳಬೇಕು' ಎಂದು ತಿಳಿಸಲಾಗಿತ್ತು.

'ಸಂತ್ರಸ್ತೆ 12 ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿದ್ದರೆ, ಪರೀಕ್ಷೆಗಳ ವಿವರವನ್ನು ಆಕೆಯ ಪೋಷಕರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿ ಅನುಮತಿ ಪಡೆದುಕೊಳ್ಳಬೇಕು. ಅತ್ಯಾಚಾರ ಎಂಬುದು ಕಾನೂನಿಗೆ ಸಂಬಂಧಪಟ್ಟ ಪದವಾಗಿದ್ದು, ಇದನ್ನು ವೈದ್ಯರು ಬಳಸುವಂತಿಲ್ಲ. ವೈದ್ಯಕೀಯ ಪರಿಭಾಷೆಯಲ್ಲಿ ಸಂತ್ರಸ್ತೆಯ ದೇಹಸ್ಥಿತಿ ಮತ್ತು ತಪಾಸಣೆಯ ವಿವರಗಳ ಷರಾ ಬರೆಯಬೇಕು' ಎಂದು ಹೇಳಿತ್ತು. ಆದರೆ ಮೇಲೆ ಸೂಚಿಸಿದವು ಮಾರ್ಗಸೂಚಿಗಳಷ್ಟೇ ವಿನಾ ಕಾನೂನುಗಳಲ್ಲ. ಹಾಗಾಗಿ ಪಾಲಿಸಲೇಬೇಕೆಂಬ ಕಡ್ಡಾಯ ನಿಯಮ ಇರುವುದಿಲ್ಲ. ಈ ನಡುವೆ, ಎರಡು ಬೆರಳ ಪರೀಕ್ಷೆಯನ್ನು ನಿಷೇಧಿಸುವಂತೆ ಮದ್ರಾಸ್ ಹೈಕೋರ್ಟ್ ಈ ವರ್ಷದ ಏಪ್ರಿಲ್‌ನಲ್ಲಿ ತಮಿಳುನಾಡು ಸರ್ಕಾರಕ್ಕೆ ನಿರ್ದೇಶನ ನೀಡಿತು. ಅದರ ಮುಂದುವರಿಕೆಯಾಗಿ ಈಗ ಸುಪ್ರೀಂ ಕೋರ್ಟ್ ತೀರ್ಪು ಬಂದಿದೆ.

ಒಟ್ಟಾರೆ, ಹೆಣ್ಣಿಗೆ ದೇಹದ ಹೊರತಾಗಿ ಒಂದು ಅಸ್ತಿತ್ವ- ವ್ಯಕ್ತಿತ್ವ ಇದೆಯೆಂದು ಭಾರತೀಯ ಸಮಾಜ ಭಾವಿಸಿಲ್ಲ. ಹಾಗಾಗಿಯೇ, ಹೆಣ್ಣನ್ನು ಮದುವೆಯ ಆಧಾರದ ಮೇಲೆ ಅಳೆಯುವ, ವಿಭಾಗಿಸುವ ಕ್ರಮ ಕಾನೂನಿನಲ್ಲೂ ಮುಂದುವರಿದಿದೆ. ಮದುವೆಯಾದದ್ದೇ ಹೆಣ್ಣು ತವರ ಹೆಸರು- ಅಧಿಕಾರ- ಮನೆತನದ ಹೆಸರನ್ನು ತನ್ನ ಮಕ್ಕಳಿಗೆ ದಾಟಿಸುವ ಹಕ್ಕು ಕಳೆದುಕೊಳ್ಳುತ್ತಾಳೆ. ಆಧಾರ್ ಕಾರ್ಡು, ಪಡಿತರ ಕಾರ್ಡುಗಳಲ್ಲೂ ಅವಳ ತವರಿನ ಕುರುಹು ಅಳಿಸಿಹೋಗುತ್ತದೆ. ಪುರುಷ ಲೈಂಗಿಕ ದಬ್ಬಾಳಿಕೆಯೇ ಎರಡು ಬೆರಳ ಪರೀಕ್ಷೆ, ಕನ್ಯತ್ವ, ಯೋನಿ ಬಿಗಿತ ಪ್ರಮುಖವಾಗುವುದರ ಹಿಂದೆ ಕೆಲಸ ಮಾಡುತ್ತಿದೆ.

ಗಂಡುಮಯ ಭಾರತೀಯ ಸಮಾಜದ ಪ್ರತೀ ವ್ಯವಸ್ಥೆಯೊಳಗಿರುವ ಪುರುಷತನವು 'ಪ್ರಭುತ್ವ'ವಾಗಿ ಮಹಿಳೆಯನ್ನು ಶೋಷಣೆಗೆ ಒಳಪಡಿಸಿರುತ್ತದೆ. ಇಂತಲ್ಲಿ ಹೆಣ್ಣು ಬರಿಯ ಕಾನೂನು ಎಂಬ ಕತ್ತಿಯನ್ನು ನೆಚ್ಚಿಕೊಂಡರೆ ಸಾಲದು. ನಮ್ಮದೇ ಎದೆಯೋನಿಕಿಬ್ಬೊಟ್ಟೆಗಳ ನಡುವಿನಿಂದ ಹುಟ್ಟಿ ಬೆಳೆಯುವ ಗಂಡು ಹಿಂಸಾರೂಪಿ ಆಗದಂತೆ ತಡೆಯುವ ಪ್ರಯತ್ನ ಕುಟುಂಬದ ಒಳಗಿನಿಂದಲೇ ನಡೆಯಬೇಕು. ಪ್ರತೀ ಮನೆಯೂ ತನ್ನ ಗಂಡುಗಳ ಹೆಣ್ಣುಗುಣ ನಾಶವಾಗದಂತೆ ಬೆಳೆಸಬೇಕು. ಮಹಿಳಾ ಘನತೆಗೆ ಕುಂದು ತರುವ ಎಲ್ಲವನ್ನೂ ಎಲ್ಲರನ್ನೂ ಸಾರಾಸಗಟಾಗಿ ನಿರಾಕರಿಸಬೇಕು. ಆಗ ಲಿಂಗ ಸಮಾನತೆ ಸ್ವಭಾವವಾಗಿ ಮೈಗೂಡುತ್ತದೆ. ಎರಡು ಬೆರಳ ಪರೀಕ್ಷೆಯೂ ಅತ್ಯಾಚಾರವೂ ನಮಗೆ ಸಂಬಂಧಪಡದ ಬರಿಯ ಪದಗಳಾಗುತ್ತವೆ.

ಲೇಖಕಿ: ವೈದ್ಯೆ, ಕವಲಕ್ಕಿ, ಹೊನ್ನಾವರ

ಚುರುಮುರಿ

ಅಯ್ಯೋ ದೇವ್ರೇ...

• ಮಣ್ಣೆ ರಾಜು

'ಡಾಕ್ಟರ್‌ಗಳು ಬರೆಯುವ ಪ್ರಿಸ್ಕ್ರಿಪ್ಷನ್ ಅರ್ಥ ಮಾಡಿಕೊಳ್ಳುವುದು ಕಷ್ಟ ಕಣ್ರೀ...' ಅಂದಳು ಸುಮಿ.

'ಪ್ರಿಸ್ಕ್ರಿಪ್ಷನ್‌ಗಿಂತ ನಾವು ಡಾಕ್ಟರನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ, ಅವರು ನಮ್ಮನ್ನು ಅರ್ಥ ಮಾಡಿಕೊಳ್ಳೋದು ಅದಕ್ಕಿಂತ ಮುಖ್ಯ' ಅಂದ ಶಂಕ್ರಿ.

'ಹಾಗಲ್ಲಾರೀ, ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯ ಹ್ಯಾಂಡ್‌ರೈಟಿಂಗ್ ರೂಢಿಸಿಕೊಂಡು ಡಾಕ್ಟರ್‌ಗಳು ಪ್ರಿಸ್ಕ್ರಿಪ್ಷನ್ ಬರೆಯಬೇಕಲ್ವಾ?'

'ಹಾಗಂತ, ಮೆಡಿಕಲ್ ಕಾಲೇಜಿನಲ್ಲಿ ಕಾಪಿರೈಟಿಂಗ್ ಮಾಡಿಸಿ ಡಾಕ್ಟರ್‌ಗಳ ಹ್ಯಾಂಡ್‌ರೈಟಿಂಗ್ ಇಂಪ್ರೂವ್ ಮಾಡಿ ಅಂತ ಕೇಳಲಾಗುತ್ತಾ? ಪ್ರಿಸ್ಕ್ರಿಪ್ಷನ್ ಅರ್ಥವಾಗಬೇಕೆಂದರೆ ಮೆಡಿಕಲ್ ಓದಬೇಕು, ಇಲ್ಲವೇ ಮೆಡಿಕಲ್ ಸ್ಟೋರ್ ಇಡಬೇಕು'.

'ಡಾಕ್ಟರ್ ಲಿಪಿ ನಮಗೆ ಅರ್ಥವಾಗದ ಬ್ರಹ್ಮಲಿಪಿ ಆಗಿಬಿಟ್ಟಿದೆ...' ಸುಮಿ ಲೊಚಗುಟ್ಟಿದಳು.

'ವೈದ್ಯೋ ನಾರಾಯಣೋ ಹರಿಃ, ಡಾಕ್ಟರನ್ನು ನಾವು ದೇವರೆಂದು ಭಾವಿಸಿದ್ದೇವೆ. ಬ್ರಹ್ಮ ನಮ್ಮ ಸೃಷ್ಟಿಕರ್ತ, ಡಾಕ್ಟರ್ ನಮ್ಮ ರಿಪೇರಿಕರ್ತ. ಕಾಯಿಲೆ ಕಸಾಲೆಗಳನ್ನು ರಿಪೇರಿ ಮಾಡುವವರು ಡಾಕ್ಟರ್‌ಗಳೇ. ಡಾಕ್ಟರ್ ದೇವರ ಹ್ಯಾಂಡ್‌ರೈಟಿಂಗ್‌ಗಿಂತ ಅವರ ಅನುಗ್ರಹ ಮುಖ್ಯವಾಗಬೇಕು'.

'ದೇವರು ಒಬ್ಬ, ನಾಮ ಹಲವು ಅಂತಾರಲ್ಲ, ಡಾಕ್ಟರ್ ದೇವರಲ್ಲೂ ಹಲವು ನಾಮಗಳಿವೆಯೇನ್ರೀ?'

'ಇವೆ. ಹೃದಯ ತಜ್ಞ, ನೇತ್ರ ತಜ್ಞ, ಕೀಲುಮೂಳೆ ತಜ್ಞ, ನರ ತಜ್ಞ, ದಂತ ವೈದ್ಯ ಹೀಗೆ...'

'ಡಾಕ್ಟರ್ ದೇವರಿಗೆ ಕೋಪ ಬಂದರೆ ಶಾಪ ಕೊಡುತ್ತಾ?'

'ಇಲ್ಲ, ಲೋಪ ಮಾಡುತ್ತೆ. ಮೊನ್ನೆ ಡಾಕ್ಟರ್ ದೇವರು ಲೋಪ ಮಾಡಿದ್ದಕ್ಕೆ ತುಮಕೂರಿನಲ್ಲಿ ಬಾಣಂತಿ, ಅವಳಿ ಹಸುಗೂಸುಗಳು ಜೀವ ಕಳಕೊಂಡವು'.

'ಅಯ್ಯೋ, ಹಾಗಾಗಬಾರದು. ದೊಡ್ಡ ದೇವರು ಡಾಕ್ಟರ್ ದೇವರಿಗೆ ಸೇವಾ ಮನೋಭಾವ, ಕರುಣೆ ಕರುಣಿಸಿ, ಕೋಪ, ತಾಪ ನಿವಾರಿಸಿ ಕಾಪಾಡಲಿ. ಡಾಕ್ಟರ್ ದೇವರು ರೋಗಿಗಳನ್ನು ಕಾಪಾಡಲಿ...' ಸುಮಿ ಪ್ರಾರ್ಥಿಸಿದಳು.

ದಿನದ ಟ್ವೀಟ್

ಬೇಕು ರೈಲು ಕಾರಿಡಾರ್

ಮತ್ತೊಂದು ರಸ್ತೆ ಸಂಪರ್ಕಕ್ಕಿಂತ ವೇಗದ ರೈಲು ಕಾರಿಡಾರ್‌ನ ಅಗತ್ಯ ನಮಗೆ ಹೆಚ್ಚಾಗಿ ಇದೆ. ರೈಲುಗಳು ತ್ವರಿತವಾಗಿ, ಅಗ್ಗದ ಬೆಲೆಯಲ್ಲಿ, ಸುರಕ್ಷಿತವಾಗಿ ಸಂಚರಿಸುತ್ತವೆ. ಅವುಗಳಿಗೆ ಆಮದು ತೈಲದ ಅಗತ್ಯ ಇಲ್ಲ, ಅವು ಪರಿಸರಸ್ನೇಹಿ ಕೂಡ. ವೇಗದ ರೈಲುಗಳು ಇಂಧನವನ್ನು ಅಧಿಕ ಪ್ರಮಾಣದಲ್ಲಿ ಕಬಳಿಸುವ ವಿಮಾನಯಾನದ ಅವಲಂಬನೆಯನ್ನೂ ತಗ್ಗಿಸುತ್ತವೆ.

(ಉದ್ದೇಶಿತ ಬೆಂಗಳೂರು- ಪುಣೆ ಎಕ್ಸ್‌ಪ್ರೆಸ್ ರಸ್ತೆ ಮಾರ್ಗದ ಯೋಜನೆಗೆ ಪ್ರತಿಕ್ರಿಯೆ)

ಆನಂದ ಗುಂಡೂರಾವ್, ಬಿ-ಪ್ಯಾಕ್ ಸದಸ್ಯ

ಕಿಡಿನುಡಿ

ಬೆಂಗಳೂರಿನಲ್ಲಿ ಮಂಗಳವಾರ ಕಂಡ ವಾಹನರಹಿತ ರಸ್ತೆಗಳು, ಭಾರತದ ಸಿಲಿಕಾನ್ ವ್ಯಾಲಿಯ ವೈಜ್ಞಾನಿಕ ಮನೋಧೋರಣೆಗೆ ಸಾಕ್ಷಿಯಾದವು!
#LunarEclipse.

ರಾಮಚಂದ್ರ ಎಮ್.

25 ವರ್ಷಗಳ ಹಿಂದೆ

ಭಾನುವಾರ, 9-11-1997

• **ರಾಜೀವ್ ಹತ್ಯೆ: ವಿ.ಪಿ. ಸಿಂಗ್, ಶೇಖರ್, ಕರುಣಾನಿಧಿ ವಿರುದ್ಧ ದೋಷಾರೋಪ**

ನವದೆಹಲಿ, ನ. 8 (ಯುಎನ್‌ಐ, ಪಿಟಿಐ)- ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆಗೆ ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ, ಮಾಜಿ ಪ್ರಧಾನಿಗಳಾದ ವಿ.ಪಿ. ಸಿಂಗ್ ಮತ್ತು ಚಂದ್ರಶೇಖರ್ ಹಾಗೂ ಹಣಕಾಸು ಸಚಿವ ಪಿ.ಚಿದಂಬರಂ ಅವರು ವಿವಿಧ ಹಂತಗಳಲ್ಲಿ ಎಸಗಿದ ಲೋಪವೇ ಕಾರಣ ಎಂದು ಪ್ರಕರಣದ ವಿಚಾರಣೆ ನಡೆಸುತ್ತಿರುವ ಜೈನ್ ಆಯೋಗ ತನ್ನ ಮಧ್ಯಂತರ ವರದಿಯಲ್ಲಿ ಅವರ ವಿರುದ್ಧ ದೋಷಾರೋಪ ಹೊರಿಸಿದೆ.

ರಾಜೀವ್ ಗಾಂಧಿ ಅವರ ಹತ್ಯೆಯ ಪ್ರಮುಖ ಆರೋಪಿಯಾಗಿರುವ ಎಲ್‌ಟಿಟಿಇಗೆ ತಮಿಳುನಾಡಿನ ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಸಹಾಯ ಮಾಡಿದ್ದಾರೆ ಎಂದು ತೀವ್ರವಾಗಿ ಆರೋಪಿಸಿರುವ ಆಯೋಗವು, ರಾಜೀವ್ ಗಾಂಧಿ ಅವರ ಜೀವಕ್ಕೆ ಇದ್ದ ಅಪಾಯವನ್ನು ಅಂದಾಜು ಮಾಡುವಲ್ಲಿ ಮಾಜಿ ಪ್ರಧಾನಿಗಳಾದ ವಿ.ಪಿ.ಸಿಂಗ್ ಮತ್ತು ಚಂದ್ರಶೇಖರ್ ಅವರು ವಿಫಲರಾದರು ಎಂದಿದೆ.

• **ಪಟೇಲ್ ನಾಯಕತ್ವದಲ್ಲಿ ವಿಶ್ವಾಸ- ಸಿಂಧ್ಯ**

ಬೆಂಗಳೂರು, ನ. 8- 'ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರನ್ನು ಅಸ್ಥಿರಗೊಳಿಸಲು ನಾವು (ಸಚಿವರು) ಹೋಗುವುದಿಲ್ಲ; ಯಾರಾದರೂ ಅಂತಹ ಪ್ರಯತ್ನ ಮಾಡಹೊರಟರೆ ವಿಫಲರಾಗುತ್ತಾರೆ' ಎಂದು ಪಿ.ಜಿ.ಆರ್. ಸಿಂಧ್ಯ ಅವರು ಇಂದು ಇಲ್ಲಿ ನುಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 'ಈ ವಿಚಾರದಲ್ಲಿ ಪಟೇಲ್ ಅವರು ಹೇಗೆ ಪ್ರತಿಕ್ರಿಯಿಸಿದ್ದಾರೋ ಎಲ್ಲವನ್ನೂ ನಾವು ಒಪ್ಪುತ್ತೇವೆ. ಪಟೇಲರ ನಾಯಕತ್ವಕ್ಕೆ ಯಾವುದೇ ತೊಂದರೆ ಇಲ್ಲ ಎಂದು ದೇವೇಗೌಡರೂ ಹೇಳಿದ್ದಾರೆ' ಎಂದರು.

50 ವರ್ಷಗಳ ಹಿಂದೆ

ಗುರುವಾರ, 9-11-1972

• **ಡಿಎಂಕೆ ವಿರಸ ಕೇವಲ ಅವುಟ: ಸಂಪುಟದ ಅವಸಾನ ಖಚಿತ**

ವೆಲ್ಲೂರು, ನ. 8- ಡಿಎಂಕೆ ಸರ್ಕಾರದ ಗತಿ ಬಹುಮಟ್ಟಿಗೆ ಕುಸಿಯುವ ಘಟ್ಟ ಮುಟ್ಟಿದೆ ಎಂದು ಸಂಸ್ಥಾ ಕಾಂಗ್ರೆಸ್ ನಾಯಕ ಕೆ. ಕಾಮರಾಜ್ ಅವರು ಇಂದು ಹೇಳಿದರು.

ತಿರುವಾಹಿತಿಪುರಂನಲ್ಲಿ ನಿನ್ನೆ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿ, ಡಿಎಂಕೆ ಸರ್ಕಾರ ಉಳಿಯದೆಂಬುದನ್ನು ಗ್ರಹಿಸಿ ಕೆಲವರು ಆ ಪಕ್ಷದಿಂದ ಹೊರ ಬರುತ್ತಿದ್ದಾರೆ ಎಂದೂ, ಇಂಥವರೇ ಭ್ರಷ್ಟಾಚಾರ ಮತ್ತು ದುರಾಚಾರಗಳನ್ನು ಪೋಷಿಸುತ್ತಿದ್ದಾರೆ ಎಂಬುದನ್ನು ಜನರು ಅರಿಯಬೇಕೆಂದೂ, ಅದರ ಎರಡು ಗುಂಪುಗಳು ಕೇವಲ 'ಅವುಟ ಹೂಡಿ ನಾಟಕ ಆಡುತ್ತಿವೆ' ಎಂದೂ ಅವರು ನುಡಿದರು.

• **ರಿಚರ್ಡ್ ನಿಕ್ಸನ್ ಮತ್ತೆ ಶ್ವೇತಭವನಕ್ಕೆ: ಪ್ರಚಂಡ ಬಹುಮತ**

ವಾಷಿಂಗ್ಟನ್, ನ. 8- ಅಧ್ಯಕ್ಷ ರಿಚರ್ಡ್ ಎಂ. ನಿಕ್ಸನ್ ಅವರು ಪ್ರಚಂಡ ಬಹುಮತದಿಂದ ನಿನ್ನೆ ರಾತ್ರಿ ಅಮೆರಿಕದ ಅಧ್ಯಕ್ಷ ಗದ್ದುಗೆಗೆ ಪುನರಾಯ್ಕೆಯಾಗಿ ಶ್ವೇತಭವನದಲ್ಲಿ ಮತ್ತೆ ನಾಲ್ಕು ವರ್ಷಗಳ ಅಧಿಕಾರವನ್ನು ಸ್ಥಿರಪಡಿಸಿಕೊಂಡರು.

ಅವರ ಪ್ರತಿಸ್ಪರ್ಧಿ ಮೆಕ್‌ಗವರ್ನ್ 1864ರಿಂದೀಚೆಗೆ ಯಾವುದೇ ಡೆಮಾಕ್ರಟಿಕ್ ಅಭ್ಯರ್ಥಿ ಕಾಣದ ಭಾರೀ ಪರಾಭವವನ್ನು ಕಂಡರು. ಆದರೆ, ಡೆಮಾಕ್ರಟಿಕರ ಕೈಹಿಡಿತದಿಂದ ಕಾಂಗ್ರೆಸ್ ಅನ್ನು ತಪ್ಪಿಸಲು ರಿಪಬ್ಲಿಕನ್ನರು ವಿಫಲರಾಗಿದ್ದಾರೆ.

ಸಂಗತ

ಧ್ಯಾನ ಎಂಬ ಪ್ರೀತಿಯ ಲಗಾಮು

ಮಕ್ಕಳಲ್ಲಿ ಕಂಡುಬರುವ ಮಾನಸಿಕ ಒತ್ತಡದ ಸನ್ನಿವೇಶಗಳನ್ನು ಯಶಸ್ವಿಯಾಗಿ ನಿಭಾಯಿಸಲು ಧ್ಯಾನ ಸಹಕಾರಿ

• ಡಾ. ಎಚ್.ಬಿ.ಚಂದ್ರಶೇಖರ್

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಧ್ಯಾನವನ್ನು ಅಭ್ಯಾಸ ಮಾಡಿಸುವ ಕುರಿತು ಚರ್ಚೆ ನಡೆಯುತ್ತಿದೆ. ವೈದ್ಯಕೀಯ ಸಂಶೋಧನೆ ಹಾಗೂ ನರವಿಜ್ಞಾನದ ಪ್ರಕಾರ, ಮನಸ್ಸನ್ನು ಶಾಂತಗೊಳಿಸಿ ಗಮನ ಕೇಂದ್ರೀಕರಿಸಲು, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಧ್ಯಾನವು ಪರಿಣಾಮಕಾರಿ ಎಂಬುದು ನಿರ್ವಿವಾದ. ಯಾವುದಾದರೂ ಒಂದು ವಿಷಯ ಅಥವಾ ವಸ್ತುವಿನ ಬಗ್ಗೆ ನಮ್ಮ ಮನಸ್ಸನ್ನು ಕೇಂದ್ರೀಕರಿಸುವುದು 'ಧ್ಯಾನ' ಎನಿಸಿಕೊಳ್ಳುತ್ತದೆ.

ಇತ್ತೀಚಿನ ಸಂಶೋಧನೆಯಂತೆ, ವ್ಯಕ್ತಿಯೊಬ್ಬ ದಿನವೊಂದರಲ್ಲಿ ಸಾವಿರಾರು ಬಗೆಯ ಆಲೋಚನೆಗಳನ್ನು ಮಾಡುತ್ತಾನೆ. ಅವುಗಳಲ್ಲಿ ಬಹುಪಾಲು ಆಲೋಚನೆಗಳು ಪುನರಾವರ್ತಿತ. ಭವಿಷ್ಯದಲ್ಲಿ ಆಗಬಹುದಾದ ಅಥವಾ ಈ ಹಿಂದೆ ಆಗಿಹೋದ ಅನೇಕ ಘಟನೆ, ಅನುಭವಗಳಿಗೆ ಸಂಬಂಧಿಸಿದಂತೆ ನಮ್ಮ ಹೆಚ್ಚಿನ ಆಲೋಚನೆಗಳು ಇರುತ್ತವೆ. ಇದರಿಂದ ಆ ಕ್ಷಣದಲ್ಲಿ ಮಾಡಬೇಕಾದ ಕೆಲಸಗಳ ಬಗ್ಗೆ ನಮ್ಮ ಗಮನ ಕಡಿಮೆಯಾಗುವುದರ ಜೊತೆಗೆ ಅನಗತ್ಯ ಆತಂಕಕ್ಕೆ ಸಿಲುಕುವ ಸಂಭವವೂ ಇರುತ್ತದೆ. ನಮ್ಮೊಳಗೆ ನಾವು ನಿರಂತರವಾಗಿ 'ವಟಗುಟ್ಟುವ' ಮತ್ತು ಅತ್ತಿತ್ತ ಹೊಯ್ದಾಡುವ ಮನಸ್ಸನ್ನು ಶಮನ ಮಾಡಿ, ಅದಕ್ಕೊಂದು ಪ್ರೀತಿಯ ಲಗಾಮು ಹಾಕಲು ಧ್ಯಾನ ಸಹಕಾರಿಯಾಗುತ್ತದೆ.

ಅನೇಕ ಸಮೀಕ್ಷೆಗಳಲ್ಲಿ ಕಂಡುಕೊಂಡಂತೆ, ವಯಸ್ಕರಂತೆ ಮಕ್ಕಳು ಸಹ ವಿವಿಧ ಕೌಟುಂಬಿಕ ಮತ್ತು ಶೈಕ್ಷಣಿಕ ಕಾರಣಗಳಿಂದ ಭಯ, ಒತ್ತಡ, ಆತಂಕವನ್ನು ಎದುರಿಸುತ್ತಿರುತ್ತಾರೆ. ಅದರಲ್ಲೂ ನಗರಗಳಲ್ಲಿ ವಾಸಿಸುವ ಮಕ್ಕಳು ಹೆಚ್ಚು ಮಾನಸಿಕ ಒತ್ತಡ ಅನುಭವಿಸುತ್ತಾರೆ. ಒಂದು ಅಧ್ಯಯನದ ಪ್ರಕಾರ, ಜಾಗತಿಕವಾಗಿ ಶೇ 56ರಷ್ಟು ಮಕ್ಕಳು ಆತಂಕ ಅನುಭವಿಸುತ್ತಾರೆ ಎನ್ನಲಾಗಿದೆ. ಶಾಲೆಗೆ ಹೋಗಿ, ಬರುವುದು, ಶೈಕ್ಷಣಿಕ ಕಾರ್ಯಗಳ ನಿರ್ವಹಣೆ, ಪರೀಕ್ಷೆ, ಫಲಿತಾಂಶದಂತಹ ಅನೇಕ ಕಾರಣಗಳು ಮಕ್ಕಳಲ್ಲಿ ಮಾನಸಿಕ ಒತ್ತಡ ಉಂಟು ಮಾಡುವ ಸಂಭವ ಇರುತ್ತದೆ. ಇಂತಹ ಒತ್ತಡದ ಸನ್ನಿವೇಶಗಳನ್ನು ಯಶಸ್ವಿಯಾಗಿ ನಿಭಾಯಿಸಲು ಧ್ಯಾನ ಸಹಕಾರಿಯಾಗುತ್ತದೆ.

ವಿಶ್ವದ ಅನೇಕ ದೇಶಗಳಲ್ಲಿನ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಧ್ಯಾನ ಮಾಡಿಸುವ ರೂಢಿ ಚಾಲ್ತಿಯಲ್ಲಿದೆ. ಸ್ವೀಡನ್, ಪೋರ್ಚುಗಲ್ ಮತ್ತು ನೆದರ್‌ಲ್ಯಾಂಡ್ಸ್ ದೇಶಗಳಲ್ಲಿನ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲೆಯ ಆರಂಭ ಹಾಗೂ ಮುಕ್ತಾಯದ ವೇಳೆ ಕೆಲ ನಿಮಿಷಗಳ ಕಾಲ ವಿದ್ಯಾರ್ಥಿಗಳಿಗೆ ಧ್ಯಾನವನ್ನು ಅಭ್ಯಾಸ ಮಾಡಿಸುವ ಕ್ರಮ ರೂಢಿಯಲ್ಲಿದೆ. ಇದರ ಭಾಗವಾಗಿ ಶಿಕ್ಷಕರಿಗೂ ತರಬೇತಿಯನ್ನು ನೀಡಲಾಗಿದೆ.

ಸಂಕೀರ್ಣ ಉದ್ವೇಗಗಳನ್ನು ನಿರ್ವಹಿಸಲು ಇಂಗ್ಲೆಂಡ್‌ನ ಶಾಲೆಗಳಲ್ಲಿ ತನ್ಮಯ ಸ್ಥಿತಿ ಮತ್ತು ಧ್ಯಾನದ ಕುರಿತ ತರಬೇತಿಯನ್ನು ನೀಡಲಾಗುತ್ತದೆ. ಮಕ್ಕಳಿಗೆ ಸ್ನಾಯುಗಳನ್ನು ಸಡಿಲಿಸುವುದು ಹಾಗೂ ಸರಾಗ ಉಸಿರಾಟದ ಕ್ರಮವನ್ನು ಕಲಿಸಲಾಗುತ್ತಿದೆ. ಅತಿ ಚೇಷ್ಟೆ, ತುಂಟತನ ಮಾಡುವ ಮಕ್ಕಳಿಗೆ ಧ್ಯಾನದಲ್ಲಿ ತೊಡಗುವ 'ಶಿಕ್ಷೆ' ನೀಡುವ ಮೂಲಕ ಅವರನ್ನು ಸಹಜ ಶಿಸ್ತಿಗೆ ಒಳಪಡಿಸುವ ಕ್ರಮವೂ ಇದ್ದು, ಉಪಯುಕ್ತ ಎನ್ನಲಾಗಿದೆ.

ಅಮೆರಿಕ, ಆಸ್ಟ್ರೇಲಿಯಾ, ಫ್ರಾನ್ಸ್, ಫಿನ್ಲೆಂಡ್, ಜರ್ಮನಿ, ಥಾಯ್ಲೆಂಡ್ ಸೇರಿದಂತೆ ಹಲವು ರಾಷ್ಟ್ರಗಳ ಶಾಲೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಧ್ಯಾನಾಭ್ಯಾಸದ ರೂಢಿ ಇದೆ. ಅನೇಕ ದೇಶಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳ ಮಕ್ಕಳಿಗೂ ಧ್ಯಾನದ ಅಭ್ಯಾಸ ಮಾಡಿಸಲಾಗುತ್ತಿದ್ದು, ಮಕ್ಕಳು 'ಗಮನ ಕೇಂದ್ರೀಕರಿಸಲು' ಪ್ರಯೋಜನ ಆಗುತ್ತಿರುವ ಬಗ್ಗೆ ವರದಿಗಳಿವೆ.



ದೆಹಲಿಯಲ್ಲಿ ನಾಲ್ಕು ವರ್ಷಗಳ ಹಿಂದೆ ಜಾರಿಗೆ ತಂದ 'ಸಂತಸದ ಪಠ್ಯಕ್ರಮ'ದ (ಹ್ಯಾಪಿನೆಸ್ ಕರಿಕ್ಯುಲಮ್) ಭಾಗವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಧ್ಯಾನ ಹಾಗೂ ತನ್ಮಯವಾಗಿ ಇರುವುದನ್ನು ಕಲಿಸಲಾಗುತ್ತಿದ್ದು, ಇದು ಶಾಲೆಗಳ ಶೈಕ್ಷಣಿಕ ಸುಧಾರಣೆಗೆ ನೆರವಾಗಿದೆ ಎಂದು ಅಲ್ಲಿನ ಸರ್ಕಾರ ತಿಳಿಸಿದೆ.

ಶಾಲೆಗಳಲ್ಲಿ ಧ್ಯಾನದ ಅಭ್ಯಾಸಕ್ಕೆ ಅವಕಾಶ ಮಾಡಿಕೊಡುವುದು ಧಾರ್ಮಿಕ ಚಟುವಟಿಕೆ ಎನಿಸಿಕೊಳ್ಳುತ್ತದೆ ಎಂಬ ಆತಂಕ ಅನೇಕರದ್ದಾಗಿದೆ. ಧ್ಯಾನವನ್ನು ಧಾರ್ಮಿಕ ಚಟುವಟಿಕೆಯನ್ನಾಗಿಸದೆಯೂ ಕಲಿಸಲು ಸಾಧ್ಯವಿದೆ.

ತಮಗೆ ಅನುಕೂಲವೆನಿಸುವ ಭಂಗಿಯಲ್ಲಿ ಬೆನ್ನು ನೇರ ಮಾಡಿ ಕುಳಿತುಕೊಂಡು, ಕಣ್ಣುಗಳನ್ನು ಮೆದುವಾಗಿ ಮುಚ್ಚಿ, ಆರಂಭದಲ್ಲಿ ಸುತ್ತಲಿನ ವಾತಾವರಣದ ವಿವಿಧ ಶಬ್ದಗಳೆಡೆ ಗಮನಹರಿಸುತ್ತಾ, ನಂತರ ನಿಧಾನವಾಗಿ ಮನಸ್ಸನ್ನು ಉಸಿರಾಟದಲ್ಲಿ ತಲ್ಲೀನ ಮಾಡುವುದು. ಮನದಲ್ಲೇಳುವ ಯಾವುದೇ ಆಲೋಚನೆಯನ್ನು ನಿಯಂತ್ರಿಸದೆ ಗಮನಿಸುತ್ತಾ, ಸಾಧ್ಯವಾದಷ್ಟೂ ಉಸಿರಾಟದ ಕಡೆಯೇ ಹೆಚ್ಚು ಗಮನ ಹರಿಸುವುದನ್ನು ಅಭ್ಯಾಸ ಮಾಡಬೇಕು. ಉಸಿರಾಟವನ್ನು ಹೊಟ್ಟೆಯ ಮೂಲಕ ಮಾಡುವುದು ಪರಿಣಾಮಕಾರಿ. ಇದನ್ನು ಬೆಲ್ಲಿ ಬ್ರೀಥಿಂಗ್ ಎನ್ನುತ್ತಾರೆ. ಆತಂಕ, ಅವಸರವಿದ್ದಾಗ ಉಸಿರಾಟ ಏರುಪೇರಾಗುತ್ತದೆ. ಆ ಸಮಯದಲ್ಲಿ ಉಸಿರಾಟದ ಕಡೆ ಗಮನ ಹರಿಸಿದರೆ ಆತಂಕ ಮಾಯವಾಗಿ ಶಾಂತಿ ಲಭಿಸುತ್ತದೆ. ಅನೇಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಆಗಾಗ್ಗೆ ಉಸಿರಾಟದ ಕಡೆ ಗಮನಹರಿಸಲು ತಿಳಿಸುತ್ತಾ ಅವರ ಗಮನ ಸೆಳೆಯುವ ರೂಢಿ ಇದೆ.

ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಧ್ಯಾನವನ್ನು ನಿಯಮಿತವಾಗಿ ಅಭ್ಯಾಸ ಮಾಡುವುದರಿಂದ ಶಾಲೆಗಳಲ್ಲಿ ಶಾಂತಿ, ಸೌಹಾರ್ದ ಉತ್ತಮಗೊಂಡು, ಶೈಕ್ಷಣಿಕ ಗುಣಮಟ್ಟದ ಅಭಿವೃದ್ಧಿಗೂ ಸಹಾಯಕವಾಗುತ್ತದೆ ಎಂದು ಆಶಿಸಬಹುದು.

ವಾಚಕರ ವಾಣಿ

ಕನ್ನಡದ ಬದಲು ಗುಜರಾತಿಯಲ್ಲಿ ಅರ್ಜಿ!

ಯಾವುದೇ ಭಾಷೆಯನ್ನು ಯಾರ ಮೇಲೆಯೂ ಒತ್ತಾಯಪೂರ್ವಕವಾಗಿ ಹೇರಬಾರದು. ಅದನ್ನು ಅವರು ಸ್ವಇಚ್ಛೆಯಿಂದ ಕಲಿಯುವಂತೆ ಇರಬೇಕು. ಉದಾಹರಣೆಗೆ, ಇಂಗ್ಲಿಷ್ ಕಲಿಯಲು ಯಾರೂ ಒತ್ತಾಯಪಡಿಸುವುದಿಲ್ಲ. ಆದರೂ ಕುಗ್ರಾಮದ ಕಡುಬಡವರು ಕೂಡ ತಮ್ಮ ಮಕ್ಕಳು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯಲಿ ಎಂದು ಬಯಸುತ್ತಾರೆ. ನಗರಗಳಲ್ಲಿನ ಉದ್ಯೋಗಕ್ಕೆ ಇಂಗ್ಲಿಷ್ ಅನಿವಾರ್ಯವಾಗಿರುವುದೇ ಇದಕ್ಕೆ ಕಾರಣ. ಆದರೆ ನಮ್ಮ ನಾಡಿನಲ್ಲಿ ಕನ್ನಡಕ್ಕೆ ದುಃಸ್ಥಿತಿ ಒದಗಿರುವುದು ಮಾತ್ರ ನೋವಿನ ಸಂಗತಿ. ಖಾಸಗಿ ಕಚೇರಿಗಳು ಒತ್ತಟ್ಟಿಗಿರಲಿ, ಸರ್ಕಾರಿ ಕಚೇರಿಗಳಲ್ಲೂ ಕನ್ನಡ ಮಾಯವಾಗುತ್ತಿರುವುದು ಇದಕ್ಕೆ ನಿದರ್ಶನ.

ಬೆಂಗಳೂರಿನ ವಿಲ್ಸನ್ ಗಾರ್ಡನ್ ಪ್ರದೇಶದ ಅಂಚೆ ಕಚೇರಿಯಲ್ಲಿ ಇಂಗ್ಲಿಷ್, ಹಿಂದಿಯೊಡನೆ ಕನ್ನಡದಲ್ಲಿ ಇರಬೇಕಾದ ಅರ್ಜಿಗಳು ಹಾಗೂ ಕರಪತ್ರಗಳು ಕನ್ನಡದ ಬದಲಿಗೆ ಗುಜರಾತಿ ಭಾಷೆಯಲ್ಲಿ ಇರುತ್ತವೆ. ಅಲ್ಲಿನ ಸಿಬ್ಬಂದಿಯನ್ನು ವಿಚಾರಿಸಿದರೆ, ಇದು ಕೇಂದ್ರ ಸರ್ಕಾರದ ಕಚೇರಿಯಾದ್ದರಿಂದ ತಾವೇನೂ ಮಾಡಲಾಗದು ಎಂದು ಹತಾಶೆಯಿಂದ ಪ್ರತಿಕ್ರಿಯಿಸುತ್ತಾರೆ. ಇಂತಹ ಸ್ಥಿತಿ ಬದಲಾಗಬೇಕು. ಕನ್ನಡನಾಡಿನಲ್ಲಿ ಕನ್ನಡತನಕ್ಕೆ ಪ್ರಾಮುಖ್ಯ ಸಿಗಬೇಕು.

ಕಿಕ್ಕೇರಿ ಎಂ. ಚಂದ್ರಶೇಖರ್, ಬೆಂಗಳೂರು

ಪಕ್ಷಾಂತರದ ಪಾಪ ತೊಳೆದದ್ದು ಹಣಬಲ?!

ತೆಲಂಗಾಣದ ಮುನುಗೋಡು ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷಾಂತರಗೊಂಡು ಸ್ಪರ್ಧಿಸಿದ್ದ ಅಭ್ಯರ್ಥಿ ಸೋಲು ಕಂಡಿರುವುದು ಇತರ ಪಕ್ಷಾಂತರಿಗಳಿಗೆ ಎಚ್ಚರಿಕೆಯ ಗಂಟೆ ಎಂದು ಹುರುಕಡ್ಲಿ ಶಿವಕುಮಾರ ಅವರ ಹೇಳಿರುವುದರಲ್ಲಿ (ವಾ.ವಾ., ನ. 8) ತುಸು ಪ್ರಮಾದ ಇದೆ. ಈ ಫಲಿತಾಂಶ ಪಕ್ಷಾಂತರಕ್ಕೆ ಪಾಠವೇನೋ ಸರಿ. ಆದರೆ, ಮುನುಗೋಡು ಕ್ಷೇತ್ರದಲ್ಲಿ ಆಡಳಿತ ಪಕ್ಷವು ತನ್ನ ಪ್ರತಿಷ್ಠೆಯನ್ನೇ ಪಣಕ್ಕಿಟ್ಟು ಗೆಲುವು ಸಾಧಿಸಿದ್ದು ಪ್ರಜಾಪ್ರಭುತ್ವದ ಬಲದಿಂದಲ್ಲ. ನೂರಾರು ಕೋಟಿ ರೂಪಾಯಿ ಚೆಲ್ಲಿದ್ದರ ಬಲದಿಂದ ಎಂಬ ವರದಿಗಳೂ ಇವೆ. ಹೀಗಾಗಿ, ಪಕ್ಷಾಂತರದ ಪಾಪ ತೊಳೆದದ್ದು ಮತದಾರನ ಪುಣ್ಯದ ಫಲದಿಂದೇನಲ್ಲ, ಹಣದಾಸೆಯ ಮತ್ತೊಂದು ಪಾಪದಿಂದ ಎನ್ನಬಹುದು. ಈ ಹಣವನ್ನು ಪಡೆದವರು ಅಮಾಯಕರೂ ಅಬೋಧರೂ ಏನಲ್ಲ. ಯಥಾರಾಜಾ ತಥಾಪ್ರಜಾ ಎಂಬುದು ಯಥಾಪ್ರಜಾ ತಥಾರಾಜಾ ಎಂದಾದ ವಿದ್ಯಮಾನದಲ್ಲಿ, ರಾಜಕಾರಣದ ಅಸಹ್ಯಗಳಿಂದ ಪ್ರಜಾಬಾಧ್ಯತೆಯನ್ನು ಹೊರಗಿಡುವುದು ಸಲ್ಲದು.

ಕೆ.ಪುರುಷೋತ್ತಮ ರೆಡ್ಡಿ, ಪಾವಗಡ

'ವಂದೇ ಭಾರತ್' ದರ ಸಾಮಾನ್ಯರಿಗೆ ಎಟುಕುವುದೇ?

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಬೆಂಗಳೂರಿನಿಂದ 10.30ಕ್ಕೆ ಹೊರಟು ಒಂದೂ ಮುಕ್ಕಾಲು ಗಂಟೆಯಲ್ಲಿ ತನ್ನ ಅಂತಿಮ ಗುರಿ ಮುಟ್ಟಿರುವುದು ಸಮಾಧಾನಕರ ಸಂಗತಿ. ಇದಕ್ಕೆ ಸಂಬಂಧಿಸಿದಂತೆ ನನ್ನ ಹಳೆಯ ಪ್ರಯಾಣದ ಅನುಭವವೊಂದು ಇಲ್ಲಿ ಉಲ್ಲೇಖಾರ್ಹ.

1974ರ ಯುಗಾದಿಯಂದು ಬೆಂಗಳೂರಿನ ಕಲಾಸಿಪಾಳ್ಯದ ಖಾಸಗಿ ಬಸ್ ನಿಲ್ದಾಣದಿಂದ ಅಂದೇ ಚಾಲನೆಗೆ ಬಿಟ್ಟಿದ್ದ 'ವಿನಾಯಕ' ಬಸ್ ಏರಿದೆ. ಬಸ್ ಸರಿಯಾಗಿ ಒಂದೂಮುಕ್ಕಾಲು ಗಂಟೆಯಲ್ಲಿ ಮೈಸೂರು ತಲುಪಿತು. ಅಂದಿನ ಬಸ್ ದರ ₹ 4.50 ಆಗಿತ್ತು. ಹಿಂದಿನ ದರ ₹ 4 ಇತ್ತು. 50 ಪೈಸೆ ದರ ಹೆಚ್ಚಿಸಿದ್ದಕ್ಕೆ ಪ್ರಯಾಣಿಕರೊಬ್ಬರು ನಿರ್ವಾಹಕರೊಂದಿಗೆ ಜಗಳಕ್ಕೆ ಬಿದ್ದರು. ನಾನೂ ಸೇರಿದಂತೆ ಕೆಲವರು ಅವರ ಪರವಾಗಿ ನಿಂತೆವು. ಕೊನೆಗೂ ಜಗಳ ಬಗೆಹರಿಯದಿದ್ದಾಗ ಆ ಪ್ರಯಾಣಿಕನಿಗೆ ಆತನ ಹೆಚ್ಚುವರಿ 50 ಪೈಸೆಯನ್ನು ನಾನೇ ಕೊಡಲು ಮುಂದಾದೆ. ಆಗ ಆತ ತಾರಕ ಧ್ವನಿಯಲ್ಲಿ 'ಇವತ್ತೇನೋ ನೀವು ಕೊಡ್ತೀರಿ. ದಿನಾ ನೀವೇ ಕೊಡ್ತೀರಾ' ಎಂದು ಸಿಟ್ಟಿನಿಂದ ಪ್ರಶ್ನಿಸಿದರು. ಈಗ ವಂದೇ ಭಾರತ್‌ನ ಕನಿಷ್ಠ ಪ್ರಯಾಣ ದರ ₹ 368. ಸಾಮಾನ್ಯ ಜನರು ಈ ರೈಲಿನಲ್ಲಿ ಪ್ರಯಾಣಿಸುವುದಾದರೂ ಹೇಗೆ?

ಹೊರೆಯಾಲ ದೊರೆಸ್ವಾಮಿ, ಮೈಸೂರು

ಇಡಬ್ಲ್ಯುಎಸ್: ಆದಾಯ ಮಿತಿ ತಗ್ಗಿಸಿ

ಆರ್ಥಿಕವಾಗಿ ದುರ್ಬಲರಾಗಿ ಇರುವವರಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಎತ್ತಿ ಹಿಡಿದಿದೆ. ಆದರೆ ವಾರ್ಷಿಕ ₹ 8 ಲಕ್ಷ ಆದಾಯ ಇರುವವರನ್ನೂ ಆರ್ಥಿಕವಾಗಿ ದುರ್ಬಲರೆಂದು ಈ ಕಾನೂನಿನ ಅನ್ವಯ ಪರಿಗಣಿಸಲಾಗುತ್ತದೆ. ದಿನಕ್ಕೆ ₹ 2 ಸಾವಿರಕ್ಕಿಂತಲೂ ಹೆಚ್ಚು ಆದಾಯ ಇರುವವರು ಆರ್ಥಿಕವಾಗಿ ದುರ್ಬಲರು ಎಂದಾದಲ್ಲಿ ನಿಜವಾದ ಬಡವರು ಈ ವ್ಯವಸ್ಥೆಯಲ್ಲಿ ಮೀಸಲಾತಿಯ ಪ್ರಯೋಜನವನ್ನು ಎಂದಿಗೂ ಪಡೆದುಕೊಳ್ಳಲಾರರು. ಅದರಲ್ಲೂ ಶ್ರೀಮಂತರು, ಬಲಾಢ್ಯರು, ಪ್ರಭಾವ ಉಳ್ಳವರೇ ಇದನ್ನು ಲಪಟಾಯಿಸುವುದರಲ್ಲಿ ಸಂದೇಹವೇ ಇಲ್ಲ. ಇಡಬ್ಲ್ಯುಎಸ್ ಕಾನೂನಿನ ನಿಜವಾದ ಉದ್ದೇಶ ಈಡೇರಬೇಕೆಂದರೆ ಆದಾಯದ ಮಿತಿಯನ್ನು ಈಗಿರುವ ಮಿತಿಯ ಅರ್ಧದಷ್ಟಕ್ಕೆ, ಅಂದರೆ ₹ 4 ಲಕ್ಷಕ್ಕೆ ಇಳಿಸಬೇಕು. ಇಲ್ಲದಿದ್ದರೆ ಕೊನೆಗೂ ಮೀಸಲಾತಿಯು ರಾಜಕೀಯ ಪಕ್ಷಗಳಿಗೆ ವೋಟು ಗಳಿಕೆಯ ತಂತ್ರವಾಗಿ ಪರಿಣಮಿಸುವುದೇ ಹೆಚ್ಚು.

ಆರ್. ಲಕ್ಷ್ಮೀನಾರಾಯಣ, ಬೆಂಗಳೂರು

ಒತ್ತಡ ತಂತ್ರ ಸಲ್ಲದು

ಕೇಂದ್ರ ಸರ್ಕಾರದಿಂದ ನೇಮಕಗೊಳ್ಳುವ ರಾಜ್ಯಪಾಲರು ಯಾವುದೇ ಒಂದು ಪಕ್ಷಕ್ಕೆ ಸೇರಿದವರೇ ಆಗಿದ್ದರೂ ಪಕ್ಷಾತೀತವಾಗಿ ನಡೆದುಕೊಳ್ಳಬೇಕಾದುದು ಅವರ ಧರ್ಮ. ತಮ್ಮನ್ನು ನೇಮಿಸಿದ ಸರ್ಕಾರಕ್ಕೆ ಖುಷಿ ಕೊಡುವುದಕ್ಕೆ ಆಯಾ ರಾಜ್ಯಗಳಲ್ಲಿರುವ ಬೇರೆ ಪಕ್ಷಗಳ ಸರ್ಕಾರಗಳಿಗೆ ತೊಂದರೆ ಕೊಡುವುದು ಸರಿಯಲ್ಲ. ತಮಿಳುನಾಡು ಮತ್ತು ಇತರ ಕೆಲವು ರಾಜ್ಯಗಳಲ್ಲಿ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂಬ ಆಗ್ರಹ ಕೇಳಿಬರುತ್ತಿರುವುದು ಇದಕ್ಕೆ ನಿದರ್ಶನ. ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನು ಸರ್ಕಾರವೇ ನೇಮಿಸಬೇಕಾದ ಅಗತ್ಯವಿದೆ ಎಂಬರ್ಥದಲ್ಲಿ ಹೇಳಿಕೆ ನೀಡಿರುವುದು ಆಘಾತಕಾರಿ. ಭಾರತದ ನ್ಯಾಯಾಂಗ ವ್ಯವಸ್ಥೆಯ ಮೇಲೆ ಭಾರತೀಯರಾದ ಎಲ್ಲರಿಗೂ ಗೌರವ ಇದೆ. ರಾಜ್ಯಪಾಲರ ಮೇಲೆ ಏರುವ ಒತ್ತಡ ತಂತ್ರಗಳನ್ನು ನ್ಯಾಯಮೂರ್ತಿಗಳ ಮೇಲೂ ಹೇರುವುದರಲ್ಲಿ ಸರ್ಕಾರಗಳು ಹಿಂದೆ ಬೀಳುವುದಿಲ್ಲ. ಹೀಗಾಗಿ, ಈಗಿನ ರೀತಿಯಲ್ಲೇ ಸುಪ್ರೀಂ ಕೋರ್ಟ್ ಕೊಲಿಜಿಯಂ ಮೂಲಕವೇ ನ್ಯಾಯಮೂರ್ತಿಗಳ ನೇಮಕ ಆಗುವುದು ಒಳ್ಳೆಯದು.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೂಲಸೌಕರ್ಯ ಕೊರತೆ ವಂದೇ ಭಾರತ್ ವೇಗಕ್ಕೆ ಹತ್ತಾರು ತಡೆ

ಚೆನ್ನೈ–ಬೆಂಗಳೂರು–ಮೈಸೂರು ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಪ್ರಾಯೋಗಿಕ ಸಂಚಾರ ನಡೆದಿದೆ. ಈ ಮಾರ್ಗದಲ್ಲಿ ಈಗಾಗಲೇ ಸಂಚರಿಸುತ್ತಿರುವ ಶತಾಬ್ದಿ ರೈಲಿನ ಸರಾಸರಿ ವೇಗಕ್ಕಿಂತ, ವಂದೇ ಭಾರತ್ ರೈಲಿನ ಸರಾಸರಿ ವೇಗ 2 ಕಿ.ಮೀ.ನಷ್ಟು ಮಾತ್ರ ಹೆಚ್ಚು. ಇದೇ 11ರಂದು ಈ ರೈಲನ್ನು ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆ ಮಾಡಲಿದ್ದಾರೆ. ಆದರೆ, ಶತಾಬ್ದಿಗಿಂತಲೂ ಹೆಚ್ಚಿನ ವೇಗವನ್ನು ನೀಡದ ಮತ್ತು ಪ್ರಯಾಣದ ಅವಧಿಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡದ ಈ ವಂದೇ ಭಾರತ್ ಎಕ್ಸ್‌ಪ್ರೆಸ್‌ನಿಂದ ಹೆಚ್ಚಿನ ಉಪಯೋಗವಿಲ್ಲ ಎಂಬ ಆಕ್ಷೇಪ ವ್ಯಕ್ತವಾಗುತ್ತಿದೆ. 160 ಕಿ.ಮೀ./ಪ್ರತಿ ಗಂಟೆ ವೇಗದಲ್ಲಿ ಓಡುವ ಸಾಮರ್ಥ್ಯ ಇರುವ ವಂದೇ ಭಾರತ್ ರೈಲುಗಳನ್ನು ದೇಶದ ಎಲ್ಲಾ ಮಾರ್ಗಗಳಲ್ಲೂ ಅತ್ಯಂತ ಕಡಿಮೆ ವೇಗದಲ್ಲಿ ಓಡಿಸಲಾಗುತ್ತಿದೆ. ಈ ರೈಲುಗಳನ್ನು ವೇಗವಾಗಿ ಓಡಿಸಲು ಸಾಧ್ಯವಿರುವಂತಹ ಹಳಿ, ನಿಲ್ದಾಣ ಮತ್ತು ಸಿಗ್ನಲಿಂಗ್ ವ್ಯವಸ್ಥೆಯಂತಹ ಮೂಲಸೌಕರ್ಯಗಳು ಇಲ್ಲದೆ ಇರುವುದೇ, ಇವು ವೇಗವಾಗಿ ಓಡದಿರಲು ಪ್ರಮುಖ ಕಾರಣ

ತೊಡಕಿಗೆ ಹಲವು ಮುಖಗಳು

ವಂದೇ ಭಾರತ್ ರೈಲುಗಳು 160 ಕಿ.ಮೀ./ಪ್ರತಿ ಗಂಟೆ ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿವೆ. ಅಷ್ಟು ವೇಗದಲ್ಲೂ ಆರಾಮದಾಯಕ ಪ್ರಯಾಣ ಸಾಧ್ಯವಾಗುವಂತೆ ಅವುಗಳ ಬೋಗಿಗಳನ್ನು ವಿನ್ಯಾಸ ಮಾಡಲಾಗಿದೆ. ದೇಶದಾದ್ಯಂತ ಈಗ ನಾಲ್ಕು ಮಾರ್ಗಗಳಲ್ಲಿ ಒಟ್ಟು ಎಂಟು ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ. ಈ ಎಂಟೂ ರೈಲುಗಳಲ್ಲಿ ಯಾವೊಂದರ ಸರಾಸರಿ ವೇಗವೂ 100 ಕಿ.ಮೀ./ಪ್ರತಿಗಂಟೆಯನ್ನು ಮೀರುವುದಿಲ್ಲ.

ದೆಹಲಿ–ವಾರಾಣಸಿ ಮಧ್ಯೆ ಸಂಚರಿಸುವ ವಂದೇ ಭಾರತ್ ರೈಲು ಮಾತ್ರ ಕೆಲ ನಿಲ್ದಾಣಗಳ ಮಧ್ಯೆ 130 ಕಿ.ಮೀ./ಪ್ರತಿಗಂಟೆ ವೇಗದಲ್ಲಿ ಓಡುತ್ತದೆ. ಇದರ ಸರಾಸರಿ ವೇಗ 95 ಕಿ.ಮೀ./ಪ್ರತಿ ಗಂಟೆ ಮಾತ್ರ. ಇದು ದೇಶದಲ್ಲಿ ಈಗಾಗಲೇ ಇರುವ ಸೆಮಿಹೈಸ್ಪೀಡ್ ರೈಲು, ದೆಹಲಿ–ಆಗ್ರಾ ಗತಿಮಾನ್ ಎಕ್ಸ್‌ಪ್ರೆಸ್‌ನ (160 ಕಿ.ಮೀ./ಪ್ರತಿಗಂಟೆ ಗರಿಷ್ಠ ವೇಗ) ವೇಗಕ್ಕಿಂತ ಕಡಿಮೆ.

ಸಾಮರ್ಥ್ಯವಿದ್ದರೂ ವಂದೇ ಭಾರತ್ ರೈಲುಗಳನ್ನು ಕಡಿಮೆ ವೇಗದಲ್ಲಿ ಓಡಿಸುತ್ತಿರುವುದಕ್ಕೆ ರೈಲ್ವೆ ಇಲಾಖೆಯ ತಜ್ಞರು ಹಲವು ಕಾರಣಗಳನ್ನು ಪಟ್ಟಿ ಮಾಡಿದ್ದಾರೆ. ಹೀಗೆ ಪಟ್ಟಿ ಮಾಡಲಾದ ತೊಡಕುಗಳನ್ನು ನಿವಾರಿಸದೇ ಇದ್ದರೆ, ಈ ರೈಲುಗಳನ್ನು ವೇಗವಾಗಿ ಓಡಿಸಲು ಸಾಧ್ಯವಿಲ್ಲ ಎನ್ನಲಾಗಿದೆ. ಈ ರೈಲುಗಳ ವೇಗಕ್ಕೆ ಕಡಿವಾಣ ಹಾಕುತ್ತಿರುವ ತೊಡಕುಗಳು ಈ ಮುಂದಿನಂತಿವೆ. ಒಟ್ಟಾರೆ ಮೂಲಸೌಕರ್ಯದಲ್ಲಿ ಇರುವ ಕೊರತೆಯೇ ಈ ರೈಲುಗಳ ವೇಗಕ್ಕೆ ಕಡಿವಾಣ ಎಂಬುದನ್ನು ಇವು ಸೂಚಿಸುತ್ತವೆ.

1. ರೈಲು ಮಾರ್ಗಗಳು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು, ಸಾಮಾನ್ಯ ಲೋಕೊಮೋಟಿವ್ ಎಂಜಿನ್ ರೈಲುಗಳನ್ನು ಓಡಿಸುವ ಮಾರ್ಗದಲ್ಲೇ ಓಡಿಸಬಹುದು. ಆದರೆ, ರೈಲುಮಾರ್ಗವು ನೇರವಾಗಿ ಇರಬೇಕು. ರೈಲುಮಾರ್ಗವು ನೇರವಾಗಿ ಇರದೇ ಇದ್ದರೆ ಮತ್ತು ತಿರುವುಗಳಿಂದ ಕೂಡಿದ್ದರೆ ಇವುಗಳನ್ನು ವೇಗವಾಗಿ ಓಡಿಸಲು ಸಾಧ್ಯವಿಲ್ಲ. ತಿರುವುಗಳಲ್ಲಿ ಈ ರೈಲುಗಳು ವೇಗವಾಗಿ ಓಡಿದರೆ, ಹಳಿತಪ್ಪುವ ಮತ್ತು ಉರುಳುವ ಅಪಾಯವಿರುತ್ತದೆ. ಈಗಾಗಲೇ ಇರುವ ಮಾರ್ಗಗಳಲ್ಲೇ ಇವು ಸಂಚರಿಸುತ್ತಿರುವುದರಿಂದ ಗರಿಷ್ಠ ವೇಗ ಸಾಧ್ಯವಾಗುತ್ತಿಲ್ಲ.

ರೈಲು ಮಾರ್ಗವು ಸಾಗುವ ಪ್ರದೇಶವು ಹಳ್ಳದಿಣ್ಣೆಗಳಿಂದ ಕೂಡಿದ್ದರೆ, ಮಾರ್ಗವೂ ಉಬ್ಬು–ತಗ್ಗಾಗಿರುತ್ತದೆ. ಅಂತಹ ಮಾರ್ಗದಲ್ಲಿ ಕಡಿಮೆ ವೇಗದ ರೈಲುಗಳು ಯಾವುದೇ ಅಪಾಯವಿಲ್ಲದೇ ಸಂಚರಿಸಬಹುದು. ಆದರೆ, ವೇಗದ ರೈಲುಗಳು ವೇಗವಾಗಿ ಸಂಚರಿಸಿದರೆ ಹಳಿತಪ್ಪುವ ಅಪಾಯವಿರುತ್ತದೆ. ಮೈಸೂರು–ಬೆಂಗಳೂರು–ಚೆನ್ನೈ ಮಾರ್ಗವೂ ಈ ರೀತಿಯ ತಿರುವು ಮತ್ತು ಉಬ್ಬು–ತಗ್ಗುಗಳಿಂದ ಕೂಡಿದೆ. ಹೀಗಾಗಿ ವಂದೇ ಭಾರತ್ ರೈಲನ್ನು ಗರಿಷ್ಠ ವೇಗದಲ್ಲಿ ಓಡಿಸಲು ಸಾಧ್ಯವಾಗುತ್ತಿಲ್ಲ ಎಂದು ರೈಲ್ವೆ ಅಧಿಕಾರಿಗಳು ಮಾಧ್ಯಮಗಳಿಗೆ ವಿವರಣೆ ನೀಡಿದ್ದಾರೆ.

2. ರೈಲುಮಾರ್ಗಗಳಿಗೆ ಬೇಲಿಯಿಲ್ಲ ದೇಶದಲ್ಲಿರುವ ರೈಲುಮಾರ್ಗಗಳಿಗೆ ಬೇಲಿ ವ್ಯವಸ್ಥೆ ಇಲ್ಲ. ದೆಹಲಿ–ಆಗ್ರಾ ಮಧ್ಯೆ ಸಂಚರಿಸುವ ಗತಿಮಾನ್ ರೈಲಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 90 ಕಿ.ಮೀ.ನಷ್ಟು ಅಂತರದ ಮಾರ್ಗಕ್ಕೆ ಮಾತ್ರ ಎರಡೂ ಬದಿಯಲ್ಲಿ ಬೇಲಿ ಹಾಕಲಾಗಿದೆ. ಜನರು, ಜಾನುವಾರುಗಳು ಮತ್ತು ಪ್ರಾಣಿಗಳು ಈ ಬೇಲಿಯನ್ನು ದಾಟಿ ಬರುವ ಸಾಧ್ಯತೆ ಇಲ್ಲದೇ ಇರುವ ಕಾರಣ ರೈಲು ವೇಗವಾಗಿ ಸಂಚರಿಸಲು ಸಾಧ್ಯವಾಗುತ್ತದೆ. ಆದರೆ, ವಂದೇ ಭಾರತ್ ರೈಲುಗಳು ಸಂಚರಿಸುತ್ತಿರುವ ಮಾರ್ಗಗಳಲ್ಲಿ ಇಂತಹ ಬೇಲಿಯ ವ್ಯವಸ್ಥೆ ಇಲ್ಲ.

ಮಹಿಳೆ ಬಲಿ

ಗುಜರಾತ್ ಹಾಗೂ ಮಹಾರಾಷ್ಟ್ರ ನಡುವಿನ ಮಾರ್ಗದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಡಿಕ್ಕಿಯಾಗಿ ಮಹಿಳೆಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ. ಗುಜರಾತ್‌ನ ಆಣಂದ್‌ನಲ್ಲಿ ಈ ಅವಘಡ ನಡೆದಿದೆ. ಹಳಿ ದಾಟುತ್ತಿದ್ದ ಬೀಟ್ರಿಸ್ ಆರ್ಚಿಬಾಲ್ಡ್ ಪೀಟರ್ ಎಂಬ 54 ವರ್ಷದ ಮಹಿಳೆ ಮೃತಪಟ್ಟಿದ್ದಾರೆ. ಅಹಮದಾಬಾದ್ ನಿವಾಸಿಯಾದ ಇವರು, ಆಣಂದ್‌ನಲ್ಲಿ ಸಂಬಂಧಿಕರ ಭೇಟಿಗೆ ತೆರಳಿದ್ದರು ಎಂದು ವರದಿಯಾಗಿದೆ.

ಮುಂಬೈ ಸೆಂಟ್ರಲ್ ಮತ್ತು ಗಾಂಧಿನಗರದ ಮಧ್ಯೆ ಸಂಚರಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್ ಗುಜರಾತ್‌ನ ವಿವಿಧ ಕಡೆ ದನದ ಹಿಂಡಿಗೆ, ಗೂಳಿಗೆ ಮತ್ತು ಎಮ್ಮೆಗೆ ಡಿಕ್ಕಿ ಹೊಡೆದ ಪ್ರಕರಣಗಳು ವರದಿಯಾಗಿದ್ದವು. ಆ ಮಾರ್ಗದಲ್ಲೂ ಬೇಲಿಯ ವ್ಯವಸ್ಥೆ ಇಲ್ಲ. ಈ ಕಾರಣದಿಂದಲೇ ಜಾನುವಾರುಗಳು ರೈಲು ಮಾರ್ಗದ ಮೇಲೆ ಬಂದು, ರೈಲಿಗೆ ಸಿಲುಕಿದ್ದವು. ಬೇಲಿ ಇಲ್ಲದ ಮಾರ್ಗದಲ್ಲಿ ವೇಗವಾಗಿ ಸಂಚರಿಸಿದರೆ, ತುರ್ತು ಸಂದರ್ಭದಲ್ಲಿ ರೈಲನ್ನು ನಿಲ್ಲಿಸುವುದೂ ತ್ರಾಸದಾಯಕ. ಈ ಕಾರಣದಿಂದಲೇ ಬೇಲಿ ಇಲ್ಲದೇ ಇರುವ ಮಾರ್ಗಗಳಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ವೇಗಕ್ಕೆ ನಿರ್ಬಂಧ ಹೇರಲಾಗಿದೆ.

ಎಲ್ಲಾ ಮಾರ್ಗಗಳಲ್ಲಿ ಇಂತಹ ಬೇಲಿಯ ವ್ಯವಸ್ಥೆ ಮಾಡದೇ ಇದ್ದರೆ, ವಂದೇ ಭಾರತ್ ರೈಲುಗಳನ್ನು ಹೆಚ್ಚಿನ ವೇಗದಲ್ಲಿ ಓಡಿಸಲು ಸಾಧ್ಯವಿಲ್ಲ.

3. ನಿಲ್ದಾಣಗಳಲ್ಲಿ ಹಳಿ ಬದಲಾವಣೆ ತೊಡಕು ದೇಶದ ರೈಲು ಮಾರ್ಗಗಳು ಹಾದುಹೋಗುವ ಪ್ರಮುಖ ನಿಲ್ದಾಣಗಳಲ್ಲಿ ರೈಲುಗಳು ಬಹುತೇಕ ಸಂದರ್ಭದಲ್ಲಿ ಹಳಿ ಬದಲಾವಣೆ ಮಾಡಬೇಕಾಗುತ್ತದೆ. ಬಹುತೇಕ ಸಂದರ್ಭದಲ್ಲಿ ಹಳಿ ಬದಲಾವಣೆ ಮಾಡುವಾಗ ರೈಲುಗಳ ವೇಗ 10 ಕಿ.ಮೀ./ಪ್ರತಿಗಂಟೆಗಿಂತಲೂ ಕಡಿಮೆ ಇರಬೇಕು. ವಂದೇ ಭಾರತ್ ರೈಲುಗಳೂ ಈ ನಿಲ್ದಾಣಗಳನ್ನು ಹಾದು ಹೋಗಬೇಕಿರುವ ಕಾರಣ, ಅವೂ ಸಹ ಕಡಿಮೆ ವೇಗದಲ್ಲೇ ಹಳಿ ಬದಲಾವಣೆ ಮಾಡಬೇಕಾಗುತ್ತದೆ. ಹಳಿ ಬದಲಾವಣೆ ಮಾಡದೆಯೇ ನಿಲ್ದಾಣಗಳನ್ನು ಹಾದುಹೋಗುವಂತೆ ವ್ಯವಸ್ಥೆ ಮಾಡಿದರಷ್ಟೇ, ಈ ರೈಲುಗಳು ಉತ್ತಮ ವೇಗವನ್ನು ಕಾಯ್ದುಕೊಳ್ಳಲು ಸಾಧ್ಯ. ಕಡಿಮೆ ವೇಗದ ರೈಲುಗಳನ್ನು ಹಿಂದಿಕ್ಕಿ ಹೋಗಲೂ ಸಾಧ್ಯವಿಲ್ಲದೇ ಇರುವ ಕಾರಣ ವಂದೇ ಭಾರತ್ ರೈಲುಗಳು ವೇಗವನ್ನು ಕಾಯ್ದುಕೊಳ್ಳಲು ಸಾಧ್ಯವಿಲ್ಲ.

4. ಹಳಿ ದಾಟುವ ಜನರು ರೈಲು ನಿಲ್ದಾಣಗಳಲ್ಲಿ ಜನರು ಒಂದು ಪ್ಲಾಟ್‌ಫಾರ್ಮ್‌ನಿಂದ ಮತ್ತೊಂದು ಪ್ಲಾಟ್‌ಫಾರ್ಮ್‌ಗೆ ಹೋಗಲು ಸಾಮಾನ್ಯವಾಗಿ ಮೇಲ್ಸೇತುವೆಯನ್ನು ನಿರ್ಮಿಸಲಾಗಿರುತ್ತದೆ. ಆದರೂ ಜನರು ಹಳಿಗಳನ್ನು ದಾಟಿಕೊಂಡೇ ಒಂದು ಪ್ಲಾಟ್‌ಫಾರ್ಮ್‌ನಿಂದ ಮತ್ತೊಂದು ಪ್ಲಾಟ್‌ಫಾರ್ಮ್‌ಗೆ ಹೋಗುವುದು ಸಾಮಾನ್ಯ ಎಂಬಂತಾಗಿದೆ. ಹೀಗಾಗಿಯೇ ರೈಲು ನಿಲ್ದಾಣವನ್ನು ಹಾದುಹೋಗುವಾಗ ರೈಲುಗಳ ವೇಗವನ್ನು ತಗ್ಗಿಸುವಂತೆ ಸೂಚಿಸಲಾಗುತ್ತದೆ. ವಂದೇ ಭಾರತ್ ಸೇರಿದಂತೆ ಎಲ್ಲಾ ಸೆಮಿ ಹೈಸ್ಪೀಡ್ ರೈಲುಗಳಿಗೂ ಇದು ಅನ್ವಯವಾಗುತ್ತದೆ. ಹೀಗಾಗಿಯೇ ವಂದೇ ಭಾರತ್ ರೈಲುಗಳೂ ಇಂತಹ ನಿಲ್ದಾಣವನ್ನು ಹಾದುಹೋಗುವಾಗ ವೇಗವನ್ನು ತಗ್ಗಿಸುತ್ತವೆ. ಈ ಕಾರಣದಿಂದ ಅವುಗಳು ಉತ್ತಮ ವೇಗ ಕಾಯ್ದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಅವುಗಳ ಸರಾಸರಿ ವೇಗ ಕಡಿಮೆಯಾಗುತ್ತದೆ.

ಆಧಾರ: ಪಿಟಿಐ, ರೈಲ್ವೆ ಇಲಾಖೆ, ಭಾರತೀಯ ಹೈಸ್ಪೀಡ್ ರೈಲ್ ನಿಗಮ

ಚೆನ್ನೈ–ಮೈಸೂರು ನಡುವೆ ಐದನೇ ರೈಲು

ಮುಂದಿನ ಮೂರು ವರ್ಷಗಳಲ್ಲಿ ಹೊಸ ತಲೆಮಾರಿನ 400 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳನ್ನು ಪರಿಚಯಿಸಲಾಗುತ್ತದೆ ಎಂದು ತನ್ನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಕಟಿಸಿತ್ತು. 2019ರಿಂದಲೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ದೇಶದಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಈ ಸರಣಿಯ ಮೊದಲ ರೈಲು ದೆಹಲಿ–ವಾರಾಣಸಿ ನಡುವೆ ಪ್ರಯಾಣ ಆರಂಭಿಸಿತ್ತು. ಇದೀಗ ಚೆನ್ನೈ–ಮೈಸೂರು ನಡುವೆ ಐದನೇ ರೈಲು ಓಡಾಟ ಶುರುವಾಗಲಿದೆ. ಪರೀಕ್ಷಾರ್ಥ ಸಂಚಾರ ಮುಗಿದಿದ್ದು, ಇದೇ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರು ಚೆನ್ನೈ–ಮೈಸೂರು ಮಾರ್ಗದ ವಂದೇ ಭಾರತ್ ರೈಲಿಗೆ ಅಧಿಕೃತ ಚಾಲನೆ ನೀಡಲಿದ್ದಾರೆ

ವಂದೇ ಭಾರತ್ ರೈಲು ಮಾರ್ಗ



ದೆಹಲಿ–ಶ್ರೀ ಮಾತಾ ವೈಷ್ಣೋದೇವಿ ಕಟ್ರಾ
ಅಂತರ: 655 ಕಿ.ಮೀ
• ಎರಡನೇ ವಂದೇ ಭಾರತ್ ರೈಲು ದೆಹಲಿ ಹಾಗೂ ಜಮ್ಮು ಕಾಶ್ಮೀರದ ನಡುವೆ ಓಡಾಡುತ್ತಿದೆ. ದೆಹಲಿ–ಶ್ರೀ ಮಾತಾ ವೈಷ್ಣೋದೇವಿ ಕಟ್ರಾ ನಡುವಿನ ಈ ಮಾರ್ಗವು 2019ರ ಅಕ್ಟೋಬರ್ 3ರಂದು ಆರಂಭವಾಗಿತ್ತು

ದೆಹಲಿ–ಅಂಬ್ ಅಂದೌರಾ
ಅಂತರ: 412 ಕಿ.ಮೀ.
• ವಂದೇ ಭಾರತ್ ಸರಣಿಯ ನಾಲ್ಕನೇ ರೈಲು ದೆಹಲಿ ಹಾಗೂ ಹಿಮಾಚಲ ಪ್ರದೇಶವನ್ನು ಸಂಪರ್ಕಿಸುತ್ತದೆ. ದೆಹಲಿ–ಅಂಬ್ ಅಂದೌರಾ ಮಾರ್ಗದ ರೈಲು ಕಾರ್ಯಾಚರಣೆಯು ಇದೇ ಅಕ್ಟೋಬರ್ 13ರಂದು ಆರಂಭವಾಗಿತ್ತು

ಮುಂಬೈ ಸೆಂಟ್ರಲ್–ಗಾಂಧಿನಗರ (ಗುಜರಾತ್)
ಅಂತರ: 522 ಕಿ.ಮೀ
• ಮಹಾರಾಷ್ಟ್ರ ಹಾಗೂ ಗುಜರಾತ್ ಸಂಪರ್ಕಿಸುವ ಮೂರನೇ ರೈಲನ್ನು 2022ರ ಸೆಪ್ಟೆಂಬರ್ 30ರಂದು ಶುರು ಮಾಡಲಾಯಿತು

ದೆಹಲಿ–ವಾರಾಣಸಿ (ಉತ್ತರ ಪ್ರದೇಶ)
ಅಂತರ: 759 ಕಿ.ಮೀ.
• ದೆಹಲಿ ಹಾಗೂ ಉತ್ತರ ಪ್ರದೇಶದ ವಾರಾಣಸಿ ನಡುವೆ 2019ರ ಫೆಬ್ರುವರಿ 15ರಂದು ಮೊದಲ ರೈಲು ಸಂಚಾರ ಆರಂಭವಾಗಿತ್ತು. ಒಂದು ರೈಲು ದೆಹಲಿಯಿಂದ, ಮತ್ತೊಂದು ವಾರಾಣಸಿಯಿಂದ ಸಂಚಾರ ಆರಂಭಿಸುತ್ತದೆ

ಚೆನ್ನೈ–ಮೈಸೂರು
ಅಂತರ: 504 ಕಿ.ಮೀ
• ವಂದೇ ಭಾರತ್ ಸರಣಿಯ ಐದನೇ ರೈಲು ದಕ್ಷಿಣ ಭಾರತದಲ್ಲಿ ಸಂಚಾರ ಆರಂಭಿಸಲಿದೆ. ಇದರ ಪರೀಕ್ಷಾರ್ಥ ಓಡಾಟ ಇತ್ತೀಚೆಗೆ ಯಶಸ್ವಿಯಾಗಿದೆ

ಸರಾಸರಿ ವೇಗ (ಕಿ.ಮೀ/ಗಂಟೆ)

ಮಾರ್ಗ	ವೇಗ
ದೆಹಲಿ–ವಾರಾಣಸಿ	95
ದೆಹಲಿ–ಕಟ್ರಾ	82
ದೆಹಲಿ–ಅಂಬ್ ಅಂದೌರಾ	76
ಮುಂಬೈ ಸೆಂಟ್ರಲ್–ಗಾಂಧಿನಗರ	84
ಚೆನ್ನೈ–ಮೈಸೂರು	75

ಪ್ರಜಾವಾಣಿ ಗ್ರಾಫಿಕ್ಸ್ | ಮಂಜುನಾಥ ಹುಲಕೊಪ್ಪದ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 54%
ಇಲ್ಲ 46%

ಕಾಂಗ್ರೆಸ್ ಶಾಸಕ ಸತೀಶ ಜಾರಕಿಹೊಳಿ ಅವರು ಹಿಂದೂ ಎಂಬ ಪದಕ್ಕೆ ಪರ್ಷಿಯನ್ ಭಾಷೆಯಲ್ಲಿ ಕೆಟ್ಟ ಅರ್ಥವಿದೆ ಎಂದು ಹೇಳಿರುವುದು ಸರಿಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 270

ಶಿವನಿಗೆ ಆರತಿ

ಮದುಮಗನಾದ ಶಂಕರ ತನ್ನ ಗಣಗಳು ಮತ್ತು ದೇವತೆಗಳೊಂದಿಗೆ ಹಿಮವಂತನ ಅರಮನೆಗೆ ಬರುತ್ತಾನೆ. ಆಗ ಮೇನಾದೇವಿ ಋಷಿಪತ್ನಿಯರು ಮತ್ತು ಇತರೆ ಸುಮಂಗಲೆಯರೊಡನೆ ಶಂಕರನಿಗೆ ಆರತಿಯನ್ನೆತ್ತಲು ಬರುತ್ತಾಳೆ. ವಿಶ್ವಸುಂದರನಾದ ಅಳಿಯನನ್ನು ವಿನಾ ಕಾರಣ ಕುರೂಪಿ ಎಂದು ನಿಂದಿಸಿ ಅವಮಾನಿಸಿದೆನಲ್ಲಾ ಎಂದು ತನ್ನ ಬುದ್ಧಿಯನ್ನು ಅಳಿದುಕೊಳ್ಳುತ್ತಾಳೆ. ಯಾರಿಗೂ ಸಿಗದ ಅಪರೂಪದ ಮುತ್ತಾದ ಶಿವನನ್ನು ಗಾಜೆಂದು ಹೀಯಾಳಿಸಿದ ತನ್ನ ಮಂಕುತನಕ್ಕೆ ತಾನೇ ಬೈದುಕೊಳ್ಳುತ್ತಾಳೆ. ಮಗಳು ಪಾರ್ವತಿ, ನಾರದ ಮತ್ತಿತರ ಮುನಿಗಳು, ಸಿದ್ಧಪುರುಷರು, ವಿಷ್ಣು ಬ್ರಹ್ಮ ಮೊದಲಾದ ದೇವತೆಗಳು ಎಷ್ಟು ಹೇಳಿದರೂ, ಕೇಳದೆ ಕೆಟ್ಟ ಹಠ ಹಿಡಿದು ಮದುವೆ ಮುರಿಯಲು ನೋಡಿದ ತನ್ನ ಕುಕೃತ್ಯಗಳನ್ನೆಲ್ಲಾ ನೆನೆದು ನೊಂದುಕೊಳ್ಳುತ್ತಾಳೆ.

ನಾನು ಎಷ್ಟೆಲ್ಲಾ ಅವಮಾನಿಸಿದರೂ ನಗುನಗುತ್ತಾ ಮನೆಗೆ ಬಂದ ಶಿವನ ಔದಾರ್ಯವನ್ನು ಮೇನಾದೇವಿ ಮನಸಾರೆ ಮೆಚ್ಚಿಕೊಳ್ಳುತ್ತಾಳೆ. ಸುಂದರವಾದ ಸಂಪಿಗೆಹೂವಿನ ಬಣ್ಣದ ಶರೀರಕಾಂತಿಯಿಂದ ಬೆಳಗುತ್ತಿದ್ದ ಶಿವನಿಗೆ ಒಂದೇ ಮುಖದಲ್ಲಿ ಮೂರು ಕಣ್ಣುಗಳಿದ್ದರೂ, ರೂಪವಂತನಾಗಿ ಶೋಭಿಸುತ್ತಿದ್ದ. ರತ್ನಾಭರಣಗಳಿಂದ ಅಲಂಕೃತನಾಗಿ ಮಂದಹಾಸ ಬೀರುತ್ತಿದ್ದ ಶಿವನ ಮುಖಾರವಿಂದಕ್ಕೆ ಯಾವ ಮನ್ಮಥರ ರೂಪವೂ ಸರಿಸಾಟಿಯಾಗುತ್ತಿರಲಿಲ್ಲ

ಶಿವನ ಕಂಠವನ್ನು ಕಾಳಿಂಗನ ಬದಲು ಮಾಲತೀಪುಷ್ಪದ ಹಾರ ಧರಿಸಿದ್ದರೆ, ಶಿರಸ್ಸಿನಲ್ಲಿ ಚಂದ್ರರೇಖೆಯ ಬದಲು, ರತ್ನಖಚಿತವಾದ ಕಿರೀಟ ರಾರಾಜಿಸುತ್ತಿತ್ತು. ಸುಂದರವಾದ ಕಂಠಿಹಾರ ಅವನ ವಿಶಾಲ ಎದೆ ತುಂಬಾ ಹರಡಿಕೊಂಡಿತ್ತು. ಮನೋಹರವಾದ ಕಡಗ ಮತ್ತು ಭುಜಕೀರ್ತಿಗಳು ಶಿವನ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತಿತ್ತು. ಅಗ್ನಿಯಂತೆ ಪ್ರಜ್ವಲಿಸುವಂಥ ಅತಿಸೂಕ್ಷ್ಮವೂ ಅತಿಸುಂದರವೂ ಆದ ಅಮೂಲ್ಯವಾದ ಬಟ್ಟೆಗಳನ್ನು ಧರಿಸಿ ಪ್ರಕಾಶಮಾನವಾಗಿ ಬೆಳಗುತ್ತಿದ್ದ.

ಚಂದನ ಅಗರು ಕಸ್ತೂರಿಗಳಿಂದ ಮಿಶ್ರಿತವಾದ ಕುಂಕುಮವನ್ನು ಹಣೆಗೆ ಇಟ್ಟುಕೊಂಡಿದ್ದರೆ, ಕಾಡಿಗೆಯನ್ನು ಕಣ್ಣಿಗೆ ಹಚ್ಚಿಕೊಂಡಿದ್ದ. ಕೈಯಲ್ಲಿ ರತ್ನಕನ್ನಡಿಯನ್ನು ಹಿಡಿದು, ಅತ್ಯಂತ ಪ್ರಭೆಯಿಂದ ಮನೋಹರವಾಗಿ ಕಂಗೊಳಿಸುತ್ತಿದ್ದ. ಕೋಟಿ ಮನ್ಮಥರಿಗಿಂತಲೂ ಸುಂದರವಾದ ಶರೀರಕಾಂತಿಯುಳ್ಳವನಾಗಿದ್ದ. ಸರ್ವಾಂಗಸುಂದರನಾಗಿದ್ದ ಶಿವ ಆಕರ್ಷಕನಾಗಿ ಕಾಣಿಸುತ್ತಿದ್ದ.

ಹೀಗೆ ಬಹುಸೌಂದರ್ಯದಿಂದ ಬೆಳಗುತ್ತಾ ತನ್ನೆದುರಿನಲ್ಲಿಯೇ ನಿಂತಿರುವ ಮಹಾದೇವನನ್ನು ನೋಡಿದ ಮೇನಾದೇವಿ ತನ್ನ ಹಿಂದಿನ ಶೋಕವನ್ನು ಮರೆತು ಸಂತೋಷದಿಂದ ಸಂಭ್ರಮಿಸಿದಳು. ಇಂಥ ಅಳಿಯನನ್ನು ಪಡೆದ ತಾನು ಕೃತಾರ್ಥಳಾದರೆ, ದೇವಸೇವಿತ ಶಿವನನ್ನು ಪಡೆದ ತನ್ನ ಕುಲ ಪಾವನವಾಯಿತು ಎಂದು ಹರ್ಷದಿಂದ ಹಿಗ್ಗಿದಳು.

ಮಹೇಶ್ವರನ ಸೌಂದರ್ಯವನ್ನು ವರ್ಣಿಸಲು ಸಾಧ್ಯವಿಲ್ಲ ಎಂದ ಪಾರ್ವತಿಯ ಮಾತುಗಳು ಮೇನಾದೇವಿಗೆ ನೆನಪಾಗುತ್ತದೆ. ಇಂಥ ಸುಂದರನಾದ ಶಿವನನ್ನು ಪಡೆಯಲು ಗಿರಿಜೆ ತುಂಬಾ ಪುಣ್ಯ ಮಾಡಿದ್ದಳು ಎಂಬ ಸಖಿಯರ ಮಾತು ನೂರಕ್ಕೆ ನೂರು ಸತ್ಯ ಅನ್ನಿಸುತ್ತದೆ.

ದೇವೋತ್ತಮನೂ ಸರ್ವೋತ್ತಮನೂ ಪುರುಷೋತ್ತಮನೂ ಆದ ಶಿವನನ್ನು ಗಂಡನಾಗಿ ಪಡೆದ ಮಗಳು ಪಾರ್ವತಿ ನಿಜಕ್ಕೂ ಧನ್ಯಳು. ವಿನಾ ಕಾರಣ ತಾನೇ ತಪ್ಪಾಗಿ ಭಾವಿಸಿದೆ ಎಂದು ಮತ್ತೆ ಮತ್ತೆ ಪಶ್ಚಾತ್ತಾಪಡುತ್ತಾಳೆ. ನಂತರ ಹಿಂದಿನ ತನ್ನ ನೋವನ್ನೆಲ್ಲಾ ಮರೆತು, ಮೇನಾದೇವಿ ಸಂತೋಷದಿಂದ ಶಿವನನ್ನು ಮನಸಾರೆ ಹರಸುತ್ತಾ ಆರತಿ ಬೆಳಗಿ ಸ್ವಾಗತಿಸಿದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಜಗಮಗಿಸುವ ದೀಪಗಳಿಂದ ಅಲಂಕರಿಸಲಾಗಿದ್ದ ದೋಣಿಗಳು ಒಂದರ ಹಿಂದೊಂದು ಹಾವಿನ ರೀತಿ ಸಾಗುವ ಮನಮೋಹಕ ದೃಶ್ಯವು ಸೋಮವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಓಡಾಡುತ್ತಿದೆ. ‘ಇದು ಹೈದರಾಬಾದ್‌ನ ಶ್ರೀ ಮಹಾಕಾಳೇಶ್ವರ ದೇವಸ್ಥಾನದ ವೈಭವ’ ಎಂಬುದಾಗಿ ಕೆಲವರು ಟ್ವೀಟ್ ಮಾಡಿದ್ದಾರೆ. ಆದರೆ ಇದು ಕೇರಳದ ದೀಪೋತ್ಸವದ ದೃಶ್ಯ ಎಂದು ಭಾವನಾ ಸೋಮಯ್ಯ ಎಂಬುವರು ಟ್ವೀಟ್ ಮಾಡಿದ್ದಾರೆ. ‘ಕೇರಳದಲ್ಲಿ ದೀಪಾವಳಿ ಮುಂದುವರಿದಿದ್ದು, ದೀಪಾಲಂಕೃತ 240 ದೋಣಿಗಳು ನದಿತೀರದಲ್ಲಿ ಸಾಗಿದವು’ ಎಂದು ಅವರು ವಿವರಣೆ ನೀಡಿದ್ದಾರೆ. ಆದರೆ ಇವೆಲ್ಲವೂ ತಪ್ಪು ಮಾಹಿತಿ.

ಈ ಸುಂದರ ದೃಶ್ಯವು ಹೈದರಾಬಾದ್‌ನದ್ದೂ ಅಲ್ಲ, ಕೇರಳದ್ದೂ ಅಲ್ಲ. ಅಸಲಿಗೆ ಭಾರತದ್ದೇ ಅಲ್ಲ ಎಂದು ‘ಇಂಡಿಯಾಟುಡೇ’ ವರದಿ ಮಾಡಿದೆ. ಚೀನಾದ ಗುವಾಂಗ್‌ಕ್ಷಿ ಪ್ರಾಂತ್ಯದಲ್ಲಿ ಮೇ 19ರಂದು ನಡೆದ ‘ಗೋಲ್ಡನ್ ಡ್ರ್ಯಾಗನ್’ ಕಾರ್ಯಕ್ರಮದಲ್ಲಿ ಚಿನ್ನದ ಬಣ್ಣದ ದೀಪಗಳಿಂದ ಅಲಂಕರಿಸಲಾಗಿದ್ದ 80 ದೋಣಿಗಳು ಯುಲಾಂಗ್ ನದಿಯಲ್ಲಿ ಸಾಗಿದ್ದವು. ಚೀನಾ ಪ್ರವಾಸೋದ್ಯಮ ದಿನದ ಅಂಗವಾಗಿ 70 ಮೀಟರ್ ಉದ್ದದ ದೋಣಿ ಸರಣಿಯನ್ನು ರಚಿಸಿ, ಪ್ರವಾಸಿಗರನ್ನು ಸೆಳೆಯಲು ಯತ್ನಿಸಲಾಗಿತ್ತು ಎಂದು ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಭೇದಾತೀತವಾದ ಸ್ಥಿತಿ

ಭೋಜನದಿ ಪರಮಭೋಜನ ಪರಬ್ರಹ್ಮರಸ |
ಯಾಚಿಸಲ್ಕೇನಿರ್ಪುದದನುಂಡ ಬಳಿಕ ? ||
ತ್ಯಾಜಕ ತ್ಯಾಗ ಸಂತ್ಯಾಜ್ಯ ಭೇದಗಳಿರದೆ |
ರಾಜ ನೀಂ ಜಗಕೆಲ್ಲ – ಮಂಕುತಿಮ್ಮ || 752 ||

ಪದ-ಅರ್ಥ: ಪರಮ ಭೋಜನ = ಶ್ರೇಷ್ಠ ಭೋಜನ, ಯಾಚಿಸಲ್ಕೇನಿರ್ಪುದದನುಂಡ = ಯಾಚಿಸಲ್ಕೆ (ಯಾಚಿಸಲು) + ಏನಿರ್ಪುದು (ಏನಿದೆ) + ಅದನು- + ಉಂಡ, ತ್ಯಾಜಕ = ತ್ಯಾಗಮಾಡುವವ, ತ್ಯಾಗ = - ತ್ಯಾಗದ ಕ್ರಿಯೆ, ಸಂತ್ಯಾಜ್ಯ = ತ್ಯಾಗ ಮಾಡಿದ್ದು, ಭೇದಗಳಿರದೆ = ಭೇದಗಳು + ಇರದೆ.

ವಾಚ್ಯಾರ್ಥ: ಎಲ್ಲ ಭೋಜನಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು ಬ್ರಹ್ಮವಸ್ತುವಿನ ಅರಿವಿನಿಂದಾಗುವ ರಸದೌತಣ. ಅದನ್ನೇ ಉಂಡಮೇಲೆ ಮತ್ತೆ ಬೇಡಲು ಏನಿದೆ? ಆಗ ತ್ಯಾಗಮಾಡುವವ, ತ್ಯಾಗದ ಕ್ರಿಯೆ ಮತ್ತು ತ್ಯಾಗ ಮಾಡಿದ ವಸ್ತುಗಳೊಳಗೆ ಯಾವ ಭೇದವೂ ಉಳಿಯದು. ಹಾಗಾದಾಗ ಜಗತ್ತಿಗೆ ನೀನೇ ರಾಜ.

ವಿವರಣೆ: ಭಗವಾನ್ ಬುದ್ಧ, ರಾಜಕುಮಾರನಾಗಿದ್ದವನು. ಅವನು ಅಪೇಕ್ಷಿಸಿದ್ದು ಕ್ಷಣದಲ್ಲೇ ದೊರೆಯುತ್ತಿತ್ತು. ಸಕಲ ಸೌಭಾಗ್ಯ ಸುತ್ತಮುತ್ತ ತುಂಬಿಕೊAಡಿತ್ತು. ಸುಂದರಳಾದ ಪತ್ನಿ, ಪುಟ್ಟ ಮಗು, ಬದುಕು ತುಂಬಿತ್ತು. ಹೀಗೆ ಎಲ್ಲವೂ ಸಮೃದ್ಧವಾಗಿ ಹರಡಿಕೊಂಡಿದ್ದಾಗ ಆತ ಏನನ್ನು ಹುಡುಕಿಕೊಂಡು ರಾಜ ವೈಭವವನ್ನು ಬಿಟ್ಟುಹೋದ? ಇಲ್ಲಿ ದೊರೆಯದ್ದು ಮತ್ತೆಲ್ಲಾದರೂ ದೊರಕೀತೆಂಬ ನಂಬಿಕೆಯೆ? ಮಹಾವೀರ ಸುಂದರಾಂಗ, ರಾಜಕುಮಾರ. ಅವನು ನೋಡಿದ್ದನ್ನು ತಂದೊಪ್ಪಿಸುವ ಶ್ರದ್ಧೇಯ ಪರಿವಾರ. ಭೋಗಗಳಿಗೆ ಕೊರತೆಯೇ? ಯಾವ ಶಕ್ತಿ, ಯಾವ ವಿಶೇಷ ಬಯಕೆ, ಅವನನ್ನು ರಾಜಸಿಂಹಾಸನದಿಂದ ದೂರಕ್ಕೆಳೆದು ದಿಗಂಬರನನ್ನಾಗಿ ನಿಲ್ಲಿಸಿತು?

ಕೃಷ್ಣನೂ ರಾಜಕುಮಾರ. ಅಸಾಮಾನ್ಯ ದೇಹ ಶಕ್ತಿ, ಬುದ್ಧಿ ಶಕ್ತಿ, ಯೋಜಕ ಶಕ್ತಿಯ ಸಂಗಮ ಆತ. ಅನೇಕ ಚಕ್ರವರ್ತಿಗಳ ಕಿರೀಟಗಳು ಆತನ ಪದತಲದಲ್ಲಿ ಇದ್ದರೂ ಆತ ಎಂದಿಗೂ ರಾಜನಾಗಲಿಲ್ಲ. ತನಗಾಗಿ ಏನನ್ನೂ ಬಯಸಲಿಲ್ಲ. ತನ್ನ ಸ್ನೇಹಿತ, ಶಿಷ್ಯ ಅರ್ಜುನನ ಬಂಡಿಯ ಬೋವನಾಗಿ ಕುದುರೆಗಳನ್ನು ತೊಳೆದು ಕಟ್ಟಿದ. ಚಾಟಿ ಬೀಸುತ್ತಲೇ ಭಗವದ್ಗೀತೆ ಹೇಳಿದ. ಕಾಲದ ದೀರ್ಘವಾದ ದಾರಿಯಲ್ಲಿ ಇಂತಹ ಅನೇಕ ಚಿತ್ರಗಳು ಹಾದುಬರುತ್ತವೆ. ಹೊರಗಡೆ ಎಲ್ಲವೂ ಸಿದ್ಧವಿದ್ದಾಗ ಅವರ ಅನ್ವೇಷಣೆ ಏನಾಗಿತ್ತು? ಬಹುಶ: ಅವರೆಲ್ಲ ಒಂದು ವಿಶೇಷವನ್ನು ಗಮನಿಸಿದರು. ದೇಹ ಜಗತ್ತಿನ ಅನೇಕ ವಸ್ತುಗಳ ಮೇಲೆ ಅವಲಂಬಿತವಾದದ್ದು. ಜೀವ, ದೇಹದ ಮೇಲೆ ಅವಲಂಬಿಸಿದ್ದು. ಅದು ಸ್ವತಂತ್ರ ಅಸ್ತಿತ್ವ ಉಳ್ಳದ್ದಲ್ಲ. ಈ ಜೀವಭಾವ, ದೇಹಭಾವ ಅಡಗಿದಾಗ ಅಲ್ಲಿ ತುಂಬಿ ನಿಲ್ಲುವುದು ಪರವಸ್ತು. ಅದು ಯಾವುದರ ಮೇಲೂ ಅವಲಂಬಿತವಾದದ್ದಲ್ಲ. ಆ ಅವಸ್ಥೆಯನ್ನು ಹೊಂದಿದವನು ಏನನ್ನು ಬೇರೆ ಅಪೇಕ್ಷಿಸಿಯಾನು? ಆಗ ತ್ಯಾಗ, ತ್ಯಾಗಿ ಮತ್ತು ತ್ಯಾಗದ ವಸ್ತುವಿನ ಚಿಂತನೆಯೇ ಅಪ್ರಸ್ತುತವಾಗುತ್ತದೆ. ಯಾಕೆಂದರೆ ಆ ನಿರಾಭಾರಿಗೆ ಎಲ್ಲವೂ ಒಂದೇ ವಸ್ತು, ಅದೇ ಪರವಸ್ತು. ಭೇದಗಳೆಲ್ಲ ಅಳಿದು ಎಲ್ಲವೂ ಒಂದೇ ಶಕ್ತಿಯ ರೂಪಾಂತರಗಳಂತೆ ಕಂಡಾಗ ಅವನೇ ಪ್ರಪಂಚಕ್ಕೆ ರಾಜನಿದ್ದಂತೆ. ಕೊಡುವವನೂ ಅವನೇ, ಪಡೆಯುವವನೂ ಅವನೇ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ನವೆಂಬರ್ 9, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಪ್ರತಿಪದ್ ಗಂ. 17-18 ನಕ್ಷತ್ರ: ಕೃತ್ತಿಕಾ ಗಂ. 27-09 ಯೋಗ: ವರಿಯಾನ್ ಗಂ. 21-17, ಕರಣ: ಕೌಲವ ಗಂ. 17-18, ತುಲಾ ಮಾಸದ 22 ನೇ ದಿನ.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-31 ಸೂರ್ಯಾಸ್ತ: 05-58
ಮುಸ್ಲಿಂ ದಿನಾಂಕ: 13 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ: 7, 8

ಮೇಷ: ವಿದ್ಯಾರ್ಥಿಗಳು ಸರಾಗವಾಗಿ ತಮ್ಮ ಅಭ್ಯಾಸವನ್ನು ಮುಂದುವರಿಸುವುದರಿಂದ ಜಯ ಕಾಣುವರು. ದವಸ-ಧಾನ್ಯಗಳ ವ್ಯಾಪಾರಸ್ಥರು ಅವುಗಳನ್ನು ಶೇಖರಣೆ ಮಾಡಿದ್ದಲ್ಲಿ ಅಧಿಕ ಲಾಭ ಉಂಟಾಗುವ ಸಂಭವ ಇದೆ.

ವೃಷಭ: ನಿಮ್ಮ ಹಲವು ದಿನಗಳ ಕನಸು ಸ್ನೇಹಿತರ ಸಹಾಯದಿಂದ ನೆರವೇರುವುದು. ರಾಜಕೀಯ ರಂಗದಲ್ಲಿ ನಿಮ್ಮ ಮುಂದಾಳತ್ವ ಹೆಸರು ಮಾಡುವುದು. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ.

ಮಿಥುನ: ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕವಾಗಬೇಕಾದ ಅವಶ್ಯಕತೆ ಇಲ್ಲ. ಮನೆಮದ್ದುಗಳಿಂದ ಸರಿಹೋಗುತ್ತದೆ. ಸಂಜೆ ಮನೆಗೆ ಒಬ್ಬ ಮುಖ್ಯ ಅತಿಥಿ ಬರುವ ಸಾಧ್ಯತೆ ಇದ್ದು, ಶುಭ ಸಮಾಚಾರ ಕೇಳುವಿರಿ.

ಕರ್ಕಾಟಕ: ನಿಮ್ಮ ತೀಕ್ಷ್ಣ ಮಾತುಗಳಿಂದ ಇನ್ನೊಬ್ಬರ ಮನಸ್ಸಿಗೆ ನೋವಾಗುವ ಸಂದರ್ಭ ಬರಲಿದೆ. ಆದ್ದರಿಂದ ಮಾತಿನಲ್ಲಿ ಹಿಡಿತವಿರಲಿ. ಭವಿಷ್ಯದ ಯೋಜನೆಗಳಿಗೆ ಹೆಚ್ಚು ಗಮನ ಕೊಡುವಿರಿ. ಸಾಲದ ಹಣ ಹಿಂತಿರುಗಿ ಬರುವುದು.

ಸಿಂಹ: ನಿಮ್ಮೊಡನೆ ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಇಲೆಕ್ಟ್ರಿಕಲ್ ಕಂಟ್ರಾಕ್ಟರುಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ದಾಂಪತ್ಯದಲ್ಲಿ ಯಾವುದೇ ರೀತಿಯ ಬಿರುಕು ಬರದಂತೆ ನೋಡಿಕೊಳ್ಳಿ.

ಕನ್ಯಾ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದು ಬಹಳ ಸಮಂಜಸವಾಗಿ ಕಾಣುವುದಿಲ್ಲ. ನಿಮ್ಮ ಮಾತಾ-ಪಿತೃಗಳ ಆಶೀರ್ವಾದದಿಂದ ಕೆಲಸ ಕಾರ್ಯಗಳಲ್ಲಿ ವಿಜಯ ಪಡೆಯುವಿರಿ.

ತುಲಾ: ನಿಮ್ಮ ರಚನಾತ್ಮಕ ಕಾರ್ಯಕ್ರಮಗಳ ಕುರಿತು ದೂರದರ್ಶನ ಮಾಧ್ಯಮದವರಿಂದ ಮೆಚ್ಚುಗೆಯ ಮಾತು ಕೇಳಲಿದ್ದೀರಿ. ನಿಮ್ಮ ಯೋಜನೆಗಳು ಅರ್ಧದಲ್ಲಿಯೇ ನಿಲ್ಲುವ ಲಕ್ಷಣಗಳಿವೆ. ಬಡಗಿ ಕೆಲಸ ಮಾಡುವವರಿಗೆ ಸುಯೋಗ.

ವೃಶ್ಚಿಕ: ಸಿವಿಲ್ ಎಂಜಿನಿಯರ್‌ಗೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗ ದೊರೆಯುವುದು. ಉದ್ಯೋಗ ನಿಮಿತ್ತವಾಗಿ ಪ್ರಯಾಣ ಸಂಭವ. ಹಸಿರು ಬಣ್ಣ ಅದೃಷ್ಟ ತರುವುದು. ಬ್ಯಾಂಕಿನ ಸಾಲಗಳು ತೀರಿ ಮನೆಯಲ್ಲಿ ನೆಮ್ಮದಿ.

ಧನು: ಆರೋಗ್ಯದ ವಿಷಯದಲ್ಲಿ ನಿಮ್ಮ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ಸಿಟ್ಟಿನಿಂದ ಹೊರಬರಲು ಶನೈಶ್ಚರನ ಪ್ರಾರ್ಥನೆ ಮಾಡಿ.

ಮಕರ: ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ. ನೀವು ಕೆಲಸ ಮಾಡುತ್ತಿರುವ ಜಾಗದಲ್ಲಿ ತೊಂದರೆ ಕಾಣಿಸಿಕೊಳ್ಳಲಿದೆ, ಬಗೆಹರಿಸಿಕೊಳ್ಳಿರಿ. ದೂರದ ಸಂಚಾರ ತೋರಿಬಂದರೂ ಮುಂದೂಡಿ.

ಕುಂಭ: ಕೋರ್ಟ್ ಕಚೇರಿ ದೂರುಗಳಂತಹ ಗೊಡವೆಗಳಿಗೆ ಇಂದು ಹೆಚ್ಚು ಪ್ರಾಮುಖ್ಯತೆ ಕೊಡುವುದು ಸರಿಯಲ್ಲ. ಸ್ವಾದಿಷ್ಟ ಭೋಜನ ಈ ದಿನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು. ವೃತ್ತಿರಂಗದಲ್ಲಿ ಸ್ಥಾನ ಬದಲಾವಣೆಯ ಸಾಧ್ಯತೆ.

ಮೀನ: ವಾಹನ ಚಾಲನೆಯಲ್ಲಿ ಅಥವಾ ಕಬ್ಬಿಣ ಕೆಲಸ ಮಾಡುವವರು ಕಾಳಜಿ ವಹಿಸಿ. ವಿದ್ಯಾರ್ಥಿಗಳು ಹೆಚ್ಚಿನ ಅಭ್ಯಾಸ ನಡೆಸುವುದು ಅಗತ್ಯವಿದೆ. ನೃತ್ಯ ಮತ್ತು ಅಭಿನಯ ಕಲಿಯಲು ಆಸಕ್ತಿ ಉಂಟಾಗುವುದ, ಹೆಸರು ಸಂಪಾದಿಸಬಹುದು.

ಪದಬಂಧ 5133
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಗಾಯಗಳು ಮಾಯಲೆಂದು ಲೇಪಿಸುವ ಔಷಧ (3)
4.ತೆಂಗಿನ ಕಾಯಿನ ಒಣಗಿದ ತಿರುಳು (3)
5.ರತ್ನಖಚಿತವಾದ ಆಭರಣ (4)
6.ಮೋಸಗಾರಿಕೆ ಅಥವಾ ವಂಚಕತನ (4)
7.ಗಣಿಯ ಧಣಿ ಕಲಿಸಿರುವ ಲೆಕ್ಕಶಾಸ್ತ್ರ (3)
9.ಉತ್ತಮ ಜಾತಿಯ ಜೇನುತುಪ್ಪ (3)
13.ಮರದ ಬೊಂಬೆ ಕೆತ್ತನೆ ಕೆಲಸ ಮಾಡುವವನು (4)
14.ಉಗ್ರವಾದ ಹೊಡೆದಾಟ (4)
15.ಮಂಗಳದ್ರವ್ಯವಾದ ಕೇಸರಿಬಣ್ಣದ ಪುಡಿ (3)
16.ಪ್ರವಾಸದ ವೇಳೆಯಲ್ಲಿ ಬಂದಿರುವ ನೆರೆ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಭಿಪ್ರಾಯವನ್ನು ಊಹಿಸಿ ತಿಳಿಯುವವನು (4)
2.ಬರೀ ಮಣಿಯಲ್ಲ! ಕಿರೀಟರತ್ನವಿದು (5)
3.ಹಿತವಲ್ಲದ್ದು ಇದು (3)
5.ಮಂದಿಯ ಮನಸ್ಸು (4)
8.ತಡವಾಗಿ ಬಿತ್ತಿರುವ ಅಲಸಂದೆ (4)
10.ಯುದ್ಧದ ಕೇಸರಿ (5)
11.ಹಣಕ್ಕಾಗಿ ನಡೆದ ಗೊಂದಲ (4)
12.ಗುಣವಂತ ಇಲ್ಲಿದ್ದಾನೆ (3)



5132ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವ್ಯತ್ಯಾಸ 3.ಸಂದರ್ಭ 5.ಡಮರುಗ 7.ವಿಭಜನೆ 9.ರಜನಿ 11.ಆರ್ಯೆ 12.ಲಡಿ 13.ಸವತಿ 15.ಹಸುಗೂಸು 19.ಮದಗಜ 20.ವರ್ಣನೆ 21.ಲಿಲಾವು

ಮೇಲಿಂದ ಕೆಳಕ್ಕೆ:
1.ವ್ಯಸನಿ 2.ಸಡಗರ 4.ದನುಜ 6.ಗವಿ 8.ನೆಗಡಿ 10.ನಿವಾಸ 11.ಆರೋಹ 14.ತಿಲಾಂಜಲಿ 16.ಸುಪರ್ಣ 17.ಸುಮ 18.ಹಗೇವು

ಸುಡೊಕು 5519

						5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5518 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಹಿಗ್ಗಿದ ಪೇಟಿಎಂ ನಷ್ಟ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಪೇಟಿಎಂ ನಷ್ಟ ಹೆಚ್ಚಳ ಕಂಡಿದ್ದು, ₹ 593 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 481 ಕೋಟಿ ನಷ್ಟ ಕಂಡಿತ್ತು. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಶೇ 76ರಷ್ಟು ಹೆಚ್ಚಾಗಿದ್ದು ₹ 1,914 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 1,086 ಕೋಟಿ ವರಮಾನ ಗಳಿಸಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530
ಸೋಯಾ (ರಿಫೈನ್ಡ್)	₹1410
ಸೂರ್ಯಕಾಂತಿ (ರಿಫೈನ್ಡ್)	₹1620
ಪಾಮೋಲಿನ್	₹1025

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2500
ಮಧ್ಯಮ	₹1500-2000
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹138.50
ಗುಡ್ ಲಾಟ್	₹131.50

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ

ಶೇಂಗಾ

08-11-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1560)
ಒಂದು ವಾರದ ಡೆಲಿವರಿ	1535 (1555)
ಸೋಯಾ ಕಚ್ಚಾ	1350 (1360)
ಪಾಮ್ ವಾರದ ಡೆಲಿವರಿ	1023 (1033)
ಸೂರ್ಯಕಾಂತಿ ಎಣ್ಣೆ ಕಚ್ಚಾ	-

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,550 (50,800)
ಬೆಳ್ಳಿ ಕೆ.ಜಿ 60,400 (60,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೈಲ ಕಂಪನಿಗಳಿಗೆ ತ್ರೈಮಾಸಿಕದಲ್ಲಿ ₹ 2,748 ಕೋಟಿ ನಷ್ಟ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಒಟ್ಟು ₹ 2,748 ಕೋಟಿ ನಷ್ಟ ಅನುಭವಿಸಿವೆ.

ಷೇರುಪೇಟೆಗೆ ಕಂಪನಿಗಳು ಸಲ್ಲಿಸಿರುವ ಮಾಹಿತಿ ಪ್ರಕಾರ, ಪೆಟ್ರೋಲ್, ಡೀಸೆಲ್ ಮತ್ತು ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಮಾರಾಟದಿಂದ ಲಾಭ ಆಗುತ್ತಿಲ್ಲದಿರುವುದು ಇದಕ್ಕೆ ಕಾರಣ.

ಅಡುಗೆ ಅನಿಲವನ್ನು ಎರಡು ವರ್ಷಗಳಿಂದ ಮಾರುಕಟ್ಟೆ ಬೆಲೆಗಿಂತ ಕಡಿಮೆಗೆ ಮಾರಾಟ ಮಾಡಿದ್ದರಿಂದಾಗಿ ಕಂಪನಿಗಳು ಅನುಭವಿಸಿದ ನಷ್ಟವನ್ನು ಸರಿದೂಗಿಸಿಕೊಳ್ಳಲು ಕೇಂದ್ರ ಸರ್ಕಾರವು ₹ 22 ಸಾವಿರ ಕೋಟಿ ಪರಿಹಾರ ಬಿಡುಗಡೆ ಮಾಡಿತು. ಈ ಮೊತ್ತ ಇಲ್ಲದಿದ್ದರೆ ನಷ್ಟವು ಇನ್ನೂ ಹೆಚ್ಚಿರುತ್ತಿತ್ತು.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಅಂತರ-ರಾಷ್ಟ್ರೀಯ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ದರ ಪರಿಷ್ಕರಿಸಬೇಕು. ಆದರೆ ದೇಶಿ ಮಾರುಕಟ್ಟೆಯಲ್ಲಿ ಏಳು ತಿಂಗಳಿಂದ ದರ ಸ್ಥಿರವಾಗಿದೆ.

ಇಂಡಿಯನ್ ಆಯಿಲ್ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 272 ಕೋಟಿ ನಷ್ಟ ಕಂಡಿದೆ. ಹಿಂದುಸ್ಥಾನ್ ಪೆಟ್ರೋಲಿಯಂ ಕಂಪನಿಯು ₹ 2,172 ಕೋಟಿ ನಷ್ಟ ಅನುಭವಿಸಿದೆ. ಭಾರತ್ ಪೆಟ್ರೋಲಿಯಂ ಕಂಪನಿಯು ₹ 304 ಕೋಟಿ ನಷ್ಟ ದಾಖಲಿಸಿದೆ.

ಏಪ್ರಿಲ್ 1ರಿಂದ ಸೆಪ್ಟೆಂಬರ್ ಅಂತ್ಯದವರೆಗಿನ ಆರು ತಿಂಗಳ ಅವಧಿಯಲ್ಲಿ ಈ ಮೂರು ಕಂಪನಿಗಳು ಅನುಭವಿಸಿರುವ ನಷ್ಟದ ಒಟ್ಟು ಮೊತ್ತ ₹ 21,201 ಕೋಟಿ. ಇದು ಆರು ತಿಂಗಳ ಅವಧಿಯಲ್ಲಿ ಈ ಮೂರು ಕಂಪನಿಗಳು ಅನುಭವಿಸಿರುವ ಗರಿಷ್ಠ ನಷ್ಟ.

ಕೊಬ್ಬರಿ ಧಾರಣೆ

ಅರಸೀಕೆರೆ	₹12000-12990
ತುರುವೇಕೆರೆ	₹12700-12700
ತುಮಕೂರು (ಇತರೆ)	₹5600-6800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹ 433-660
ದ್ವಿತಳಿ (ಬಿ.ವಿ)	₹ 401-842

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು	480
ಬಂಟ್ವಾಳ	
ಕೋಕ	12500-25000
ಹಳತು	48000-55500
ಕಾರ್ಕಳ	
ಹಳತು	40000-55500
ಪುತ್ತೂರು	
ಹೊಸತು	32000-38000
ಭದ್ರಾವತಿ	
ರಾಶಿ	44752-47539
ಚನ್ನಗಿರಿ	
ರಾಶಿ	43799-47000
ಚಿತ್ರದುರ್ಗ	
ಅಪಿ	45419-45859
ಬೆಟ್ಟೆ	36129-36579
ಕೆಂಪುಗೋಟು	29000-29400
ರಾಶಿ	44939-45369
ಶಿವಮೊಗ್ಗ	
ಹೊಸತು	44809-46899
ರಾಶಿ	44599-47509
ಸರಕು	60006-77700
ಸಿದ್ದಾಪುರ	
ಬಿಳಿಗೋಟು	27099-3429
ಕೋಕ	26819-32899
ಚಾಲಿ	37299-41099
ಕೆಂಪುಗೋಟು	32609-35900
ರಾಶಿ	43609-46299
ತಟ್ಟಿಬೆಟ್ಟೆ	38249-44049
ಶಿರಸಿ	
ಬೆಟ್ಟೆ	38899-45618
ಬಿಳಿಗೋಟು	22099-36726
ಚಾಲಿ	37539-43239
ರಾಶಿ	36899-47199
ಸಾಗರ	
ಬಿಳಿಗೋಟು	27786-30299
ಚಾಲಿ	35453-37099
ಕೋಕ	28989-29799
ಕೆಂಪುಗೋಟು	31786-31786
ರಾಶಿ	44009-46609
ಸಿಪ್ಪೆಗೋಟು	10100-20229

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
	14500	14000	14200	175.55 ಸೆಂಟ್ಸ್
ಎಪಿ	7280	7300	7300	
ಆರ್‌ಪಿ	8500	8000	8800	ಲಂಡನ್
ಆರ್‌ಸಿ	4600	4000	4300	1851 ಡಾಲರ್ಸ್

ವೈಕುಂಠ ಸಮಾರಾಧನೆ

ಶ್ರೀ ಕೆ.ಹೆಚ್. ಹುಚ್ಚೇಗೌಡ (ಕೋಡಿಹಳ್ಳಿ)

ಖಾದಿ ಬೋರ್ಡ್ ಮಾಜಿ ಅಧ್ಯಕ್ಷರು ಹಾಗೂ ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರು, ರಾಜ್ಯ ಜನತಾ ಬಜಾರ್ ನೌಕರರ ಸಂಘದ ಮಾಜಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮೀಣ ನೀರು ಸರಬರಾಜು ಮಂಡಳಿಯ ನೌಕರರ ಸಂಘದ ಅಧ್ಯಕ್ಷರಾಗಿದ್ದರು.

ಇವರು ದಿನಾಂಕ: 29.10.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ತತ್ಸಂಬಂಧ ಉತ್ತರ ಕ್ರಿಯಾದಿಯನ್ನು ದಿನಾಂಕ: 10-11-2022ನೇ ಗುರುವಾರ ಮಧ್ಯಾಹ್ನ 12.00ಕ್ಕೆ ಹೊಳೆನರಸೀಪುರ ತಾ||., ಕುಂಚೇವು ಕೋಡಿಹಳ್ಳಿ ಗ್ರಾಮದ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಬಯಸಬೇಕೆಂದು ಕೋರುವ

ದುಃಖತಪ್ತರು: ಕುಟುಂಬ ವರ್ಗ ಹಾಗೂ ಪುಟ್ಟಸ್ವಾಮಿಗೌಡ ಮತ್ತು ಚಂದ್ರರೆಡ್ಡಿ
ಮೊ: 9845464315, 9008353561

In Loving Memory

ಶ್ರೀ ಪಿ.ರಾಮು
ಮಾವಳ್ಳಿ ರಾಮಣ್ಣ
(Retd. BDA Class-I Contractor)
ಜನನ: 09.11.1941 - ಮರಣ :21.04.2021
81ನೇ ವರ್ಷದ ಜನ್ಮದಿನದ ಸ್ಮರಣೆಯಲ್ಲಿರುವ
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ಗೆ ದಾಖಲೆಯ ಲಾಭ

ನವದೆಹಲಿ (ಪಿಟಿಐ): ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದಾಖಲೆಯ ₹ 294 ಕೋಟಿ ಲಾಭ ಗಳಿಸಿದೆ. ಸಾಲ ವಿತರಣೆ ಹೆಚ್ಚಾಗಿದ್ದು ಹಾಗೂ ವಸೂಲಾಗದ ಸಾಲ (ಎನ್‌ಪಿಎ) ಪ್ರಮಾಣ ತಗ್ಗಿದ್ದು ಲಾಭ ಏರಿಕೆಗೆ ಕಾರಣ ಎಂದು ಬ್ಯಾಂಕ್ ತಿಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 274 ಕೋಟಿ ನಷ್ಟ ಕಂಡಿತ್ತು. ಈ ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಲಾಭವು ಶೇ 45ರಷ್ಟು ಹೆಚ್ಚಾಗಿದೆ.

ಬೆಂಗಳೂರಿನಲ್ಲಿ ಪ್ರಧಾನ ಕಚೇರಿಯನ್ನು ಹೊಂದಿರುವ ಈ ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ₹ 929 ಕೋಟಿಗೆ ಇಳಿಕೆಯಾಗಿದೆ. ಇದು ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ಹೊತ್ತಿನಲ್ಲಿ ₹ 1,713 ಕೋಟಿ ಆಗಿತ್ತು. ನಿವ್ವಳ ಎನ್‌ಪಿಎ ಪ್ರಮಾಣವು ಶೇ 0.04ಕ್ಕೆ ಇಳಿಕೆಯಾಗಿದೆ. ವಸೂಲಾಗದ ಸಾಲದ ಪೈಕಿ ₹ 157 ಕೋಟಿ ಮೊತ್ತದ ಸಾಲವನ್ನು ರೈಟ್ ಆಫ್ ಮಾಡಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಗನ್ನಾಥ ಕಟ್ಟಿ, ಕುಸನೂರು, ಹಾವೇರಿ

- **ಪ್ರಶ್ನೆ:** ನಾನು ಸ್ವಂತ ಉದ್ಯೋಗ ನಡೆಸುತ್ತಿದ್ದು, ಹಿರಿಯ ನಾಗರಿಕನೂ ಹೌದು. ನನ್ನ ವಯಸ್ಸು 64 ವರ್ಷ. ನನಗೆ ತೆರಿಗೆ ಇಲಾಖೆಯಿಂದ ಬಂದ ನೋಟಿಸ್ ಪ್ರಕಾರ ನಾಲ್ಕು ವರ್ಷಗಳಿಂದ ಬಾಕಿ ಇದ್ದ ₹ 20,000 ವೃತ್ತಿ ತೆರಿಗೆಯನ್ನು (ಅವಧಿ 2018-2022) ಪಾವತಿಸಿದ್ದೇನೆ. ಇದಾದ ನಂತರ, ಹಿರಿಯ ನಾಗರಿಕರಿಗೆ ವೃತ್ತಿ ತೆರಿಗೆ ವಿನಾಯಿತಿ ಇದೆ ಎಂದು ತಿಳಿಯಿತು. ಈಗ ನಾನು ಪಾವತಿಸಿದ ವೃತ್ತಿ ತೆರಿಗೆಯನ್ನು ಮರಳಿ ಪಡೆಯಬಹುದೇ?

ಉತ್ತರ: ನೀವು ಸ್ವಂತ ಉದ್ಯೋಗ ಕೈಗೊಂಡಿದ್ದೀರಿ ಹಾಗೂ ಹಿರಿಯ ನಾಗರಿಕರಾಗಿದ್ದೀರಿ. ನಮ್ಮ ರಾಜ್ಯದ 2018-19ನೇ ಸಾಲಿನ ಬಜೆಟ್ ಘೋಷಣೆಯ ಅನ್ವಯ ವೃತ್ತಿ ತೆರಿಗೆ ಕಾಯ್ದೆಯ ಸೆಕ್ಷನ್ 3ನ್ನು ಸೂಕ್ತ ತಿದ್ದುಪಡಿ ಮಾಡುವ ಮೂಲಕ ಹಿರಿಯ ನಾಗರಿಕರಿಗೆ ತೆರಿಗೆ ವಿನಾಯಿತಿ ನೀಡಲಾಯಿತು. ಹೀಗಾಗಿ ಆ ಸಂದರ್ಭದಿಂದ ಮುಂದಕ್ಕೆ, 2018-19ನೇ ಆರ್ಥಿಕ ವರ್ಷದಿಂದ ಅನ್ವಯ ಆಗುವಂತೆ ವಿನಾಯಿತಿ ನಿಯಮ ಜಾರಿಯಲ್ಲಿ ಇದೆ.

ಅದೇ ರೀತಿ ಕಾಯ್ದೆಯ ಸೆಕ್ಷನ್ 22, ವೃತ್ತಿ ತೆರಿಗೆಯ ಮರುಪಾವತಿಗೆ ಸಂಬಂಧಿಸಿದ್ದಾಗಿರುತ್ತದೆ. ಇದರ ಪ್ರಕಾರ, ಯಾವುದೇ ವ್ಯಕ್ತಿ ಲೆಕ್ಕಕ್ಕಿಂತ ಅಧಿಕ ತೆರಿಗೆ, ಬಡ್ಡಿ, ಶುಲ್ಕ ಇತ್ಯಾದಿ ಪಾವತಿಸಿದ್ದರೆ ಅಂತಹ ಮೊತ್ತವನ್ನು ತೆರಿಗೆದಾರರು ಸಂಬಂಧಪಟ್ಟ ಇಲಾಖೆಗೆ ಸೂಕ್ತ ಅರ್ಜಿ ಸಲ್ಲಿಸುವ ಮೂಲಕ ಮರಳಿ ಪಡೆಯುವ ಅವಕಾಶ ಇರುತ್ತದೆ. ಇದಕ್ಕೆ ಅಗತ್ಯವಾದ ದಾಖಲೆ, ಪೂರಕ ಮಾಹಿತಿ, ತೆರಿಗೆ ಸಲ್ಲಿಕೆ ವಿವರ ಇತ್ಯಾದಿಗಳನ್ನು ನೀವು ಕ್ರಮಬದ್ಧವಾಗಿ ಸಲ್ಲಿಸಿದ್ದು ಇಲಾಖೆಗೆ ಇನ್ಯಾವುದೇ ರೀತಿಯ ಹಳೆಯ ಬಾಕಿಗಳು ನಿಮ್ಮಿಂದ ಬರಬೇಕಾಗಿಲ್ಲ ಎನ್ನುವುದು ಖಚಿತವಾಗಬೇಕು.

ನೀವು ಈಗಾಗಲೇ ಬಂದಿರುವ ನೋಟಿಸ್ ಪ್ರಕಾರ ತೆರಿಗೆ ಕಟ್ಟಿರುತ್ತೀರಿ. ಹೀಗಾಗಿ ಕಾನೂನಿನ ಪ್ರಕಾರ ನಿಮ್ಮ ವಯೋಮಾನಕ್ಕೆ ಸಂಬಂಧಿಸಿದಂತೆ ಇರುವ ವಿನಾಯಿತಿ ನಿಮಗೆ ಸಿಗಬೇಕು. ಇದಕ್ಕಾಗಿ ನೀವು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಖುದ್ದಾಗಿ ಭೇಟಿಯಾಗಿ ಮುಂದಿನ ಪರಿಹಾರೋಪಾಯ ಕಂಡುಕೊಳ್ಳುವುದು ಸೂಕ್ತ.

ಹೆಸರು ಬೇಡ, ಬೆಂಗಳೂರು

- **ಪ್ರಶ್ನೆ:** ನಾನು ಕಳೆದ ಕೆಲವು ವರ್ಷಗಳಿಂದ ಹೂಡಿಕೆ ಮಾಡುತ್ತಿದ್ದೇನೆ. ಹೂಡಿಕೆಯ ವಿಚಾರ ಬಂದಾಗ ನಮಗೆ ಅನೇಕ ಉತ್ಪನ್ನಗಳನ್ನು ಹೇಳಲಾಗುತ್ತದೆ. ಉದಾಹರಣೆಗೆ ಇನ್ಶೂರೆನ್ಸ್, ಚಿನ್ನ ಹಾಗೂ ಸರ್ಕಾರಿ ಬಾಂಡ್, ಎನ್‌ಪಿಎಸ್, ಎಸ್‌ಐಪಿ, ಷೇರು, ಎಫ್‌ಡಿ, ಜಮೀನು ಇತ್ಯಾದಿ. ಯಾವ ಮಾನದಂಡ ಇಟ್ಟು ಹೂಡಿಕೆ ನಿರ್ಧಾರ ಕೈಗೊಳ್ಳಬೇಕೆಂಬ ಸರಿಯಾದ ಮಾಹಿತಿ ನನಗಿಲ್ಲ. ಈ ಹೂಡಿಕೆ ಉತ್ಪನ್ನಗಳು ಎಲ್ಲ ಕಾಲಗಳಿಗೂ ಸೂಕ್ತವೇ? ಇವುಗಳನ್ನು ಸರಿಯಾಗಿ ಹೇಗೆ ಆಯ್ಕೆ ಮಾಡಬೇಕು?

ಉತ್ತರ: ಯಾವುದೇ ಸಂದರ್ಭದಲ್ಲಿ ಹೂಡಿಕೆಯ ವಿಚಾರ ಬಂದಾಗ ನಾವು ಮೊದಲು ತಿಳಿದುಕೊಳ್ಳಬೇಕಾದ ವಿಚಾರಗಳು ಕೆಲವು ಇವೆ. ನಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಂಡು ಆಗಿದೆಯೇ, ನಮ್ಮ ದೈನಂದಿನ ಜೀವನಕ್ಕೆ ಧಕ್ಕೆಯಾಗದ ರೀತಿಯಲ್ಲಿ ಮೂಲಭೂತ ಆರ್ಥಿಕ ಅಗತ್ಯಗಳನ್ನು ಈಡೇರಿಸಿಕೊಂಡು ಆಗಿದೆಯೇ ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ನಂತರದಲ್ಲಿ, ಹೆಚ್ಚುವರಿ ಹೂಡಿಕೆಯ ಬಗ್ಗೆ ಆಲೋಚಿಸಬೇಕು. ಪ್ರತಿ ವ್ಯಕ್ತಿಯ ಹಣಕಾಸು ನಿರ್ವಹಣೆ ಭಿನ್ನವಾಗಿರುತ್ತದೆ. ಹಾಗೆಯೇ, ಪ್ರತಿ ವ್ಯಕ್ತಿಯ ಹೂಡಿಕೆ ವಿಧಾನ, ಹೂಡಿಕೆ ಉತ್ಪನ್ನ ಭಿನ್ನವಾಗಿಯೇ ಇರುತ್ತದೆ. ನಮಗೆ ಸಿಗುವ ಆದಾಯವನ್ನು ಪ್ರತಿನಿತ್ಯದ ಅಗತ್ಯಗಳ ಪೂರೈಕೆಗಾಗಿ ಒಂದಿಷ್ಟು, ಉಳಿತಾಯಕ್ಕಾಗಿ ಒಂದಿಷ್ಟು ಹಾಗೂ ಹೂಡಿಕೆಗಾಗಿ ಒಂದಿಷ್ಟು ಎಂದು ವಿಭಾಗ ಮಾಡಿಕೊಳ್ಳಬೇಕು.

ವೈಯಕ್ತಿಕ ಖರ್ಚುವೆಚ್ಚಗಳು, ಆಪತ್ತಿನ ಕಾಲಕ್ಕೆಂದು ವಿಮೆ, ವ್ಯಕ್ತಿಯ ಬಳಿ ಅದಾಗಲೇ ಇರುವ ಆಸ್ತಿ, ಆತ ಮೇಲಿರುವ ಸಾಲದ ಹೊರೆ, ನಿವೃತ್ತಿ ನಂತರದ ಬದುಕಿಗೆ ಅಗತ್ಯವಿರುವ ಮೊತ್ತ, ಮಕ್ಕಳ ಶಿಕ್ಷಣ, ಆರೋಗ್ಯ ಸ್ಥಿತಿ... ಇಂತಹ ಹತ್ತು ಹಲವು ಸಂಗತಿಗಳು ಹೂಡಿಕೆ ನಿರ್ಧಾರದ ಮೇಲೆ ಪ್ರಭಾವ ಬೀರುತ್ತವೆ.

ಎಲ್ಲ ಹೂಡಿಕೆಗಳು ಬೇರೆ ಬೇರೆ ರೀತಿಯ ಲಾಭವನ್ನು ಬೇರೆ ಬೇರೆ ಅವಧಿಯಲ್ಲಿ ಕೊಡುತ್ತವೆ ಎಂಬುದು ನಮಗೆ ತಿಳಿದಿರುವ ಸಾಮಾನ್ಯ ವಿಚಾರ. ಇದು ಆರ್ಥಿಕತೆಯ ಒಂದು ನಿಯಮವೂ ಹೌದು. ಒಂದೊಂದು ಅವಧಿಯಲ್ಲಿ ಒಂದೊಂದು ಉತ್ಪನ್ನ ಅಥವಾ ಸೇವೆಗೆ ಅತಿಯಾದ ಬೇಡಿಕೆ ಇರುತ್ತದೆ. ಇದರಿಂದಾಗಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ಏರಿಳಿತಗಳು ಸಹಜ. ಇಂತಹ ಏರಿಳಿತಗಳೇ ಹೂಡಿಕೆಯಿಂದ ಬರುವ ಲಾಭದ ಮೇಲೆಯೂ ಪರಿಣಾಮ ಬೀರುತ್ತವೆ.

1. ಹೂಡಿಕೆ ಮಾಡುವ ಮುನ್ನ ಈ ಮೂರು ಅಂಶಗಳನ್ನು ಕ್ರಮಾಗತವಾಗಿ ಮೊದಲು ಸ್ಪಷ್ಟಪಡಿಸಿಕೊಳ್ಳಿ: ಸುರಕ್ಷತೆ, ಆದಾಯ ಮತ್ತು ಬಂಡವಾಳದ ಬೆಳವಣಿಗೆ. ಪ್ರತಿ ಹೂಡಿಕೆದಾರರು ಈ ಮೂರು ಅಂಶಗಳನ್ನು ಪರಿಗಣಿಸಿ ನಿರ್ಧಾರ ಕೈಗೊಳ್ಳಬೇಕು.
2. ಎರಡನೆಯ ಹಂತವಾಗಿ, ನಿಮ್ಮಲ್ಲಿರುವ ಹೆಚ್ಚುವರಿ ಹಣದ ಮೊತ್ತ ಎಷ್ಟು ಎಂಬುದನ್ನು ಕಂಡುಕೊಳ್ಳಿ. ಈ ಮೊತ್ತವನ್ನು ನಿಮ್ಮ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಂಡು, ವರ್ಷಕ್ಕೊಮ್ಮೆ ನಿರ್ಧರಿಸಬಹುದು.
3. ಎಲ್ಲ ಹೂಡಿಕೆಗಳು ಸ್ವಲ್ಪ ಮಟ್ಟಿಗೆ ಅಪಾಯ ಒಳಗೊಂಡಿರುತ್ತವೆ. ಉದಾಹರಣೆಗೆ, ಚಿನ್ನ, ಷೇರುಗಳು, ಬಾಂಡ್‌ಗಳು ಅಥವಾ ಮ್ಯೂಚುವಲ್ ಫಂಡ್ ಇತ್ಯಾದಿಗಳನ್ನು ಖರೀದಿಸಲು ನೀವು ಉದ್ದೇಶಿಸಿದ್ದರೆ - ನಿಮ್ಮ ಒಂದಷ್ಟು ಮೊತ್ತ ನಷ್ಟಕ್ಕೆ ಗುರಿಯಾಗಬಹುದು ಎನ್ನುವ ಅರಿವು ಇರಲಿ.
4. ಹಠಾತ್ ನಿರುದ್ಯೋಗದಂತಹ ತುರ್ತು ಪರಿಸ್ಥಿತಿಯನ್ನು ಸರಿದೂಗಿಸಲು ಸಾಕಷ್ಟು ಹಣವನ್ನು ಉಳಿತಾಯದ ಉತ್ಪನ್ನಗಳಲ್ಲಿ ಇರಿಸಿಕೊಳ್ಳಿ. ನಿಮ್ಮ ತಿಂಗಳ ಆದಾಯದ ಮೂರು ಅಥವಾ ಆರು ಪಟ್ಟು ಮೊತ್ತವು ಈ ರೀತಿ ಉಳಿತಾಯದ ಉತ್ಪನ್ನಗಳಲ್ಲಿ ಇರಬೇಕು.
5. ಹೂಡಿಕೆದಾರರು ತಮ್ಮ ಹೂಡಿಕೆಗಳನ್ನು ಸಮಯೋಚಿತ ರೀತಿಯಲ್ಲಿ ವಿಮರ್ಶಿಸಿ, ಮರುಹೊಂದಾಣಿಕೆ ಮಾಡುತ್ತ ಇರಬೇಕು. ಇದು ಹಳೆಯ ತಪ್ಪು ನಿರ್ಧಾರಗಳನ್ನು ಪರಿಹರಿಸುವಲ್ಲಿ ನೆರವಾಗುತ್ತದೆ.

ಯಾವುದೇ ಹೂಡಿಕೆಯ ನಿರ್ಧಾರ ಕೈಗೊಳ್ಳುವ ಮುನ್ನ ಈ ಅಂಶಗಳನ್ನು ಪರಿಗಣಿಸಿ. ಅಗತ್ಯಬಿದ್ದ ಸಂದರ್ಭದಲ್ಲಿ ನಿಮ್ಮ ಹೂಡಿಕೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001 ಇ-ಮೇಲ್: businessdesk@prajavani.co.in

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಐರನರ್ಸ್ ಬೇಕಾಗಿದ್ದಾರೆ, ಭಾರತದ ಅತಿ ದೊಡ್ಡ ಲಾಂಡ್ರಿ ಫೆಸಿಲಿಟಿಯಾದ ಲಾಂಡ್ರಿಮೇಟ್ ಗೆ ಅರ್ಹತೆ: ಲಾಂಡ್ರಿ , ಗಾರ್ಮೆಂಟ್, ಹೋಟೆಲ್ ಇಂಡಸ್ಟ್ರಿಗಳಲ್ಲಿ 3 ರಿಂದ 6 ವರ್ಷಗಳ ಇಸ್ತ್ರಿ ಮಾಡುವ ಅನುಭವ ಇರುವವರು ಆಕರ್ಷಕ ಸಂಬಳದೊಂದಿಗೆ, ನೇರ ಕಂಪನಿ ವೇತನ, ESIC, PF, ಮೆಡಿಕಲ್ ಇನ್ಶೂರೆನ್ಸ್ & ಆಕ್ಸಿಡೆಂಟಲ್ ಕವರೇಜ್, ಗ್ರಾಜುಟಿ ನಂತಹ ಹೆಚ್ಚುವರಿ ಸೌಲಭ್ಯಗಳು. ಕೂಡಲೇ ಸಂಪರ್ಕಿಸಿ: 78628 21212 / 80109 45007 email: careers@laundrymate.in ಸ್ಥಳ : ದೊಡ್ಡಬಳ್ಳಾಪುರ ಇಂಡಸ್ಟ್ರಿಯಲ್ ಏರಿಯಾ.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

TOYOTA, ಬ್ರಿಟಾನಿಯಾ, ಟಾಟಾಮೋಟಾರ್ಸ್, ಬಿಗ್‌ಬಜಾರ್ಸ್ ಗಳಿಗೆ 5th,10th,PUC, Degree,ITI, Diplomoದವರು ನೇರನೇಮಕಾತಿಯಿದೆ. 18,000-54,000/-ವಸತಿಯೂಟವಿದೆ. 9964634469

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಕರ್ನಾಕದಾದ್ಯಂತ ವಿವಿಧ ಜಿಲ್ಲೆಗಳ ಡಿಗ್ರೀ ಕಾಲೇಜುಗಳಿಗೆ 150 ಜನ ಟೀಚರ್ ಬೇಕಾಗಿದ್ದಾರೆ. ವಿದ್ಯಾಹರ್ತೆ ಡಿಗ್ರಿ. ಸಂಬಳ: 15000 to 18000. ಸಂಪರ್ಕಿಸಿ 7795228431

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ. 10,000-15,000. 8951315839, 9880545002

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಚಾಮರಾಜಪೇಟೆ ಊಟ ರೂಮಿನೊಂದಿಗೆ 5/12 ದಿನಗಳು. 30.11.2022 ನವಗ್ರಹ ದರ್ಶನದೊಂದಿಗೆ 18 ಕ್ಷೇತ್ರಗಳು. ತಂಜಾವೂರು ಕುಂಭಕೋಣಂ ಚಿದಂಬರಂ ವೆಲಾಂಗಣಿ ಇತ್ಯಾದಿ 6500. 24.01.2023 ಗುಜರಾತ್,ಮಧ್ಯಪ್ರದೇಶ 01.04.2023 ಕಾಶಿ,ಅಯೋಧ್ಯ ಇತ್ಯಾದಿ. 22.04.2023 ವೈಷ್ಣೋದೇವಿ ಇತ್ಯಾದಿ. 9448390735 9449721678 9731159966

20.11.2022 5ದಿನಗಳು ರಾಮೇಶ್ವರಂ,ಕನ್ಯಾಕುಮಾರಿ ಪ್ರವಾಸ.,16.12.2022 17ದಿನಗಳು ಗುಜರಾತ್ ಭಾವನಗರ,ಅಷ್ಟಜ್ಯೋತಿರ್ಲಿಂಗ., 24.12.2022 10ದಿನಗಳು ಉಜ್ಜೈನಿ,ಓಂಕಾರೇಶ್ವರ ಮಹಾರಾಷ್ಟ್ರಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9945445809, 9902433500, 6363416487

ಕಾರ್ತಿಕಮಾಸದ ವಿಶೇಷ ಪ್ರವಾಸ: 18.11.2022 ರಿಂದ 16 ದಿನಗಳ ಅಷ್ಟಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ,ಮೌಂಟ್‌ಅಬು ಇತ್ಯಾದಿ. ಊಟ ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289

ಶ್ರೀರಾಜರಾಜೇಶ್ವರಿ ಟೂರ್ಸ್ 9739618243 9743895346. 01.12.2022 7ದಿನ ಕೇರಳ ಪ್ರವಾಸ. 02.01.2023 6ದಿನ ಭುವನೇಶ್ವರ್ ಪುರಿಜಗನ್ನಾಥ್ ಕೊನಾರ್ಕ್ 3 ಶಕ್ತಿಪೀಠಗಳು.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್.14/11/22 ಗುಜರಾತ್, ದ್ವಾರಕಾ, ಸೋಮನಾಥ್, ನಾಗನಾಥ, ಮಾತೃಗಯ.1/12/22 ಕೇರಳ, ಗುರುವಾಯೂರ್, ಕೊಚ್ಚಿನ್, ತಿರುವನಂತಪುರ.9591017782 ,9964527782

ವ್ಯಾಪಾರ

Business Offers

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ

BOOK YOUR REAL ESTATE
AD IN DECCAN HERALD ALL KARNATAKA
PRAJAVANI ALL KARNATAKA
@ 750/-* Per Sqcm
Single Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ಋತುರಾಜ್ ಅವಸ್ಥಿ ಕಾನೂನು ಆಯೋಗದ ಅಧ್ಯಕ್ಷ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನಿವೃತ್ತ ಮುಖ್ಯನ್ಯಾಯಮೂರ್ತಿ ಋತುರಾಜ್ ಅವಸ್ಥಿ ಅವರನ್ನು ಅಧ್ಯಕ್ಷರನ್ನಾಗಿ ನೇಮಕಗೊಳಿಸುವ ಮೂಲಕ ಕೇಂದ್ರ ಸರ್ಕಾರವು ಕಾನೂನು ಆಯೋಗವನ್ನು ರಚಿಸಿದೆ.

ಕಾನೂನು ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಬಿ.ಎಸ್.ಚೌಹಾಣ್ ಅವರು 2018 ಸೆಪ್ಟೆಂಬರ್ 1ರಂದು ನಿವೃತ್ತರಾದ ಬಳಿಕ ಈ ಹುದ್ದೆಯು ಖಾಲಿ ಇತ್ತು. ಕಳೆದ ನಾಲ್ಕು ವರ್ಷಗಳಿಂದ ಕಾನೂನು ಆಯೋಗವು ನಿಷ್ಕ್ರಿಯವಾಗಿತ್ತು.

ಕೇರಳ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಟಿ. ಶಂಕರನ್, ಪ್ರೊ. ಆನಂದ್ ಪಲಿವಾಲ್, ಪ್ರೊ. ಡಿ.ಪಿ. ವರ್ಮಾ, ಪ್ರೊ. ರಕಾ ಆರ್ಯ ಮತ್ತು ಎಂ. ಕರುಣಾನಿತಿ ಅವರನ್ನು ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಅತ್ಯಾಚಾರ: 4 ತಿಂಗಳ ಬಳಿಕ ಎಫ್‌ಐಆರ್

ಪಿಲಿಭಿತ್, ಉತ್ತರಪ್ರದೇಶ (ಪಿಟಿಐ): ಗರ್ಭಿಣಿಯೊಬ್ಬರು ಪತಿಗೆ ಮಧ್ಯಾಹ್ನದ ಊಟ ನೀಡಿ ಮನೆಗೆ ಹಿಂದಿರುಗುತ್ತಿದ್ದ ವೇಳೆ ಆಕೆಯ ಮೇಲೆ ಇಬ್ಬರು ವ್ಯಕ್ತಿಗಳು ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ.

ಘಟನೆ ನಡೆದು ನಾಲ್ಕು ತಿಂಗಳ ನಂತರ ಕೋರ್ಟ್ ಆದೇಶದ ಮೇರೆಗೆ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಕುರುಹಿನಶೆಟ್ಟಿ ಬ್ಯಾಂಕ್: ₹ 100 ಕೋಟಿ ವಂಚನೆ

ಅಧ್ಯಕ್ಷ, ಉಪಾಧ್ಯಕ್ಷರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಠೇವಣಿದಾರರಿಂದ ಸುಮಾರು ₹ 100 ಕೋಟಿ ಸಂಗ್ರಹಿಸಿ ವಂಚಿಸಿರುವ ಆರೋಪದಡಿ ಕುರುಹಿನ ಶೆಟ್ಟಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸೇರಿ ಐವರನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಧ್ಯಕ್ಷ ಬಿ.ಎಲ್. ಶ್ರೀನಿವಾಸ್ (64), ಉಪಾಧ್ಯಕ್ಷ ಬಿ. ಈಶ್ವರ್ (71), ಸಾಲಗಾರರಾದ ದಯಾನಂದ ಹೆಗ್ಡೆ (50), ವಿ. ನಾಗೇನಹಳ್ಳಿಯ ಪಿ. ಚಂದ್ರಶೇಖರ್ (55) ಹಾಗೂ ಸುರಭಿ ಚಿಟ್ಸ್ ಸಂಸ್ಥೆಯ ಬಿ.ಟಿ. ಮೋಹನ್ (75) ಬಂಧಿತರು.

'2011ರಲ್ಲಿ ಸ್ಥಾಪನೆಯಾದ ಬ್ಯಾಂಕ್, ಚಾಮರಾಜಪೇಟೆ 5ನೇ ಮುಖ್ಯರಸ್ತೆಯಲ್ಲಿ ಪ್ರಧಾನ ಕಚೇರಿ ಹೊಂದಿದೆ. ಹಲವೆಡೆ ಶಾಖೆಗಳೂ ಇವೆ. 2011ರಿಂದ 2022ರವರೆಗೆ ನಡೆದಿದೆ ಎನ್ನಲಾದ ಸುಮಾರು ₹100 ಕೋಟಿ ಅಕ್ರಮದ ಬಗ್ಗೆ ಕೆಲ ಠೇವಣಿದಾರರು ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದ್ದು, ಸದ್ಯ ಐವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

2011ರಿಂದ ಅಧಿಕಾರ ಚಲಾವಣೆ: 'ಮಲ್ಲೇಶ್ವರದ ಬ್ರಿಗೇಡ್ ಗೇಟ್‌ವೇ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ ಬಿ.ಎಲ್. ಶ್ರೀನಿವಾಸ್, ಬ್ಯಾಂಕ್ ಸ್ಥಾಪನೆಯಾದ 2011ರಿಂದಲೇ ಅಧ್ಯಕ್ಷರಾಗಿ ಅಧಿಕಾರ ಚಲಾಯಿಸುತ್ತಿದ್ದರು. ಇದೇ ಅವಧಿಯಲ್ಲಿ ಠೇವಣಿದಾರರಿಂದ ಹಣ ಸಂಗ್ರಹಿಸಿ ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಶಾಂತಿನಗರ ಬಸಪ್ಪ ರಸ್ತೆಯ ನಿವಾಸಿ ಬಿ. ಈಶ್ವರ್, 10 ವರ್ಷಗಳಿಂದ ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು. ಅವರು ಸಹ ಅಕ್ರಮಕ್ಕೆ ಸಹಕರಿಸಿದ್ದರು. ಉಳಿದಂತೆ ಮರಿಯಣ್ಣನಪಾಳ್ಯ ಕಾವೇರಿ ಲೇಔಟ್‌ನ ದಯಾನಂದ ಹೆಗ್ಡೆ, ಆರ್.ಟಿ. ನಗರ ವಿ. ನಾಗೇನಹಳ್ಳಿಯ ಪಿ. ಚಂದ್ರಶೇಖರ್ ಹಾಗೂ ಮೈಕೊ ಲೇಔಟ್‌ನ ಬಿ.ಟಿ. ಮೋಹನ್, ಠೇವಣಿದಾರರ ಹಣವನ್ನೇ ಸಾಲ ಪಡೆದು ವಾಪಸು ಪಾವತಿಸದೇ ವಂಚಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ನಿಯಮಬಾಹಿರವಾಗಿ ಸಾಲ ಮಂಜೂರು: '2011ರಿಂದ 2022ರವರೆಗಿನ ಅವಧಿಯಲ್ಲಿ ಅಕ್ರಮ ನಡೆದಿರುವುದಾಗಿ ದೂರುದಾರರು ಆರೋಪಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಈಗಾಗಲೇ ಜಪ್ತಿ ಮಾಡಲಾಗಿದ್ದು, ಲೆಕ್ಕ ಪರಿಶೋಧಕರ ಸಹಾಯದಿಂದ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಸಾಲ ಕೋರಿ ಅರ್ಜಿ ಸಲ್ಲಿಸುವವರ ದಾಖಲೆಗಳನ್ನು ಸರಿಯಾಗಿ ಪರಿಶೀಲನೆ ಮಾಡಿರಲಿಲ್ಲ. ನಿಯಮಬಾಹಿರವಾಗಿ ಸುಸ್ತಿದಾರರಿಗೂ ನೂರಾರು ಕೋಟಿ ರೂಪಾಯಿ ಮಿತಿಮೀರಿದ ಸಾಲ ಮಂಜೂರು ಮಾಡಲಾಗಿತ್ತು. ಸುರಭಿ ಚಿಟ್ಸ್ ಸಂಸ್ಥೆ ಜೊತೆಗೆ ಒಳ ಒಪ್ಪಂದ ಮಾಡಿಕೊಂಡಿದ್ದ ಅಧ್ಯಕ್ಷ-ಉಪಾಧ್ಯಕ್ಷ, ಠೇವಣಿದಾರರ ಹಣವನ್ನು ತಮಗೆ ಬೇಕಾದವರಿಗೆ ಸಾಲ ಕೊಡಿಸಿದ್ದರು. ಇದಕ್ಕಾಗಿ ಕಮಿಷನ್ ಸಹ ಪಡೆದಿದ್ದರೆಂಬುದು ಗೊತ್ತಾಗಿದೆ.'

'ಸಾಲ ಪಡೆದ ವ್ಯಕ್ತಿಗಳು ವಾಪಸು ಪಾವತಿ ಮಾಡಿರಲಿಲ್ಲ. ಇದರಿಂದಾಗಿ ಬ್ಯಾಂಕ್ ಆರ್ಥಿಕವಾಗಿ ನಷ್ಟಕ್ಕೆ ಸಿಲುಕಿತ್ತು. ಠೇವಣಿದಾರರು ತಮ್ಮ ಹಣ ವಾಪಸು ನೀಡುವಂತೆ ಒತ್ತಾಯಿಸಲಾರಂಭಿಸಿದ್ದರು. ಆಡಳಿತ ಮಂಡಳಿಯವರು ನಿಗದಿತ ವೇಳೆಗೆ ಹಣ ನೀಡದಿದ್ದರಿಂದ ಠಾಣೆಗೆ ಠೇವಣಿದಾರರು ದೂರು ನೀಡಿದ್ದಾರೆ' ಎಂದರು.

'ಹಲವೆಡೆ ಆಸ್ತಿ ಸಂಪಾದನೆ'

'ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಇತರರು ಅಕ್ರಮ ಹಣ ಗಳಿಕೆ ಮೂಲಕ ಹಲವೆಡೆ ಆಸ್ತಿ ಸಂಪಾದಿಸಿರುವ ಮಾಹಿತಿ ಇದೆ. ಸದ್ಯ ಆಸ್ತಿಗಳ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಪಟ್ಟಿ ಅಂತಿಮವಾದ ನಂತರ, ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ಪೊಲೀಸರು ಹೇಳಿದರು.

ನ್ಯೂಜಿಲೆಂಡ್ –ಪಾಕಿಸ್ತಾನ ನಡುವಣ ಸೆಮಿಫೈನಲ್ ಹಣಾಹಣಿ ಇಂದು

ಬಾಬರ್ ಬಳಗಕ್ಕೆ ಕಿವೀಸ್ ಸವಾಲು

ಸಿಡ್ನಿ (ಪಿಟಿಐ): ಎಲ್ಲ ವಿಭಾಗಗಳಲ್ಲಿಯೂ ಸಮತೋಲನ ಕಾಯ್ದುಕೊಂಡಿರುವ ನ್ಯೂಜಿಲೆಂಡ್ ತಂಡವು ಬುಧವಾರ ನಡೆಯಲಿರುವ ಟೂರ್ನಿಯ ಮೊದಲ ಸೆಮಿಫೈನಲ್‌ನಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ.

ಮೊದಲ ಗುಂಪಿನಲ್ಲಿ ಏಳು ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದ ಕಿವೀಸ್ ಬಳಗವು ನಾಲ್ಕರ ಘಟ್ಟ ಪ್ರವೇಶಿಸಿದೆ. ಎರಡನೇ ಗುಂಪಿನಲ್ಲಿ ಮೊದಲೆರಡು ಪಂದ್ಯಗಳಲ್ಲಿ ಸೋತ ನಂತರ ಪುಟಿದೆದ್ದ ಪಾಕಿಸ್ತಾನ ತಂಡಕ್ಕೆ ಅದೃಷ್ಟವೂ ಜೊತೆ ನೀಡಿತ್ತು.

ದಕ್ಷಿಣ ಆಫ್ರಿಕಾ ತಂಡವನ್ನು ನೆದರ್ಲೆಂಡ್ಸ್ ತಂಡವು ಮಣಿಸಿದ್ದರಿಂದ ಸೃಷ್ಟಿಯಾದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ಪಾಕಿಸ್ತಾನ ಸೆಮಿಫೈನಲ್ ಪ್ರವೇಶಿಸಿದೆ. ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆಯುವ ಪಂದ್ಯವು ಉಭಯ ತಂಡಗಳ ವೇಗಿಗಳ ನಡುವಣ ಪೈಪೋಟಿಯಾಗುವ ನಿರೀಕ್ಷೆ ಇದೆ.

ಟ್ರೆಂಟ್ ಬೌಲ್ಟ್, ಟಿಮ್ ಸೌಥಿ ಮತ್ತು ಲಾಕಿ ಫರ್ಗ್ಯುಸನ್ ಕಿವೀಸ್ ತಂಡದ ಬೌಲಿಂಗ್ ಶಕ್ತಿಯಾಗಿದ್ದಾರೆ. ಪಾಕ್ ತಂಡದಲ್ಲಿರುವ ಶಹೀನ್ ಶಾ ಆಫ್ರಿದಿ, ಹ್ಯಾರಿಸ್ ರವೂಫ್ ಹಾಗೂ ನಸೀಮ್ ಶಹಾ ಕೂಡ ಕಿವೀಸ್‌ನ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ನಡುಗಿಸುವ ಸಮರ್ಥರಾಗಿದ್ದಾರೆ.

ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್ ಅವರು ಅಮೋಘ ಲಯದಲ್ಲಿದ್ದು ಪಾಕ್ ಬೌಲಿಂಗ್ ಪಡೆಗೆ ಕಠಿಣ ಸವಾಲೊಡ್ಡಬಲ್ಲರು. ನಾಯಕ ಬಾಬರ್ ಆಜಂ ಲಯ ಕಂಡುಕೊಳ್ಳುವಲ್ಲಿ ಸಫಲರಾಗಿಲ್ಲ. ರಿಜ್ವಾನ್ ಕೂಡ ಅಸ್ಥಿರ ಪ್ರದರ್ಶನ ತೋರಿದ್ದಾರೆ. ಶಾದಾಬ್ ಖಾನ್, ಶಾನ್ ಮಸೂದ್ ಮತ್ತು ಇಫ್ತಿಕಾರ್ ಅಹಮದ್ ಅವರ ಆಟವೇ ಪಾಕ್ ಪಾಲಿಗೆ ಮಹತ್ವದ್ದಾಗಲಿದೆ. ನ್ಯೂಜಿಲೆಂಡ್ ಎದುರು ಈ ಹಿಂದಿನ ಮುಖಾ ಮುಖಿಗಳಲ್ಲಿ ಪಾಕ್ ಸಿಹಿ ಉಂಡಿದ್ದೇ ಹೆಚ್ಚು. 1992ರ ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಪಾಕ್ ಎದುರು ಕಿವೀಸ್ ಶರಣಾಗಿತ್ತು. ಆ ವರ್ಷ ಪಾಕ್ ಚಾಂಪಿಯನ್ ಆಗಿತ್ತು. 1992, 1999ರಲ್ಲಿ ಮುಖಾಮುಖಿಯಾದಾಗಲೂ ಪಾಕ್ ಬಳಗವು ಮೇಲುಗೈ ಸಾಧಿಸಿತ್ತು. 2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕೂಡ ಕಿವೀಸ್ ಎದುರು ಪಾಕ್ ಗೆಲುವು ಸಾಧಿಸಿತ್ತು. ಇದೇ ಸಾಧನೆಯನ್ನು ಮುಂದುವರಿಸುವ ವಿಶ್ವಾಸದಲ್ಲಿ ಪಾಕಿಸ್ತಾನವಿದೆ.

ನ್ಯೂಜಿಲೆಂಡ್ ತಂಡದ ಟ್ರೆಂಟ್ ಬೌಲ್ಟ್ ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಪಾಕಿಸ್ತಾನ ತಂಡದ ಶಾಹೀನ್ ಆಫ್ರಿದಿ

ಟಿ20 ಕ್ರಿಕೆಟ್‌ನಲ್ಲಿ ಬಲಾಬಲ

28	ಪಂದ್ಯ
11	ನ್ಯೂಜಿಲೆಂಡ್ ಜಯ
17	ಪಾಕಿಸ್ತಾನ ಜಯ

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪಿಚ್ ಹೇಗಿದೆ: ಮೊದಲು ಬ್ಯಾಟಿಂಗ್ ಮಾಡುವವರಿಗೆ ಹೆಚ್ಚು ರನ್‌ಗಳನ್ನು ಗಳಿಸುವ ಅವಕಾಶವನ್ನು ಪಿಚ್ ನೀಡಲಿದೆ. ಈ ಟೂರ್ನಿಯ ಮೊದಲ ಪಂದ್ಯವು ಇಲ್ಲಿಯೇ ನಡೆದಿತ್ತು. ಅದರಲ್ಲಿ ಕಿವೀಸ್ ಬಳಗವು ಆಸ್ಟ್ರೇಲಿಯಾವನ್ನು ಸೋಲಿಸಿತ್ತು. ನ್ಯೂಜಿಲೆಂಡ್ ಬೌಲರ್‌ಗಳಾದ ಟ್ರೆಂಟ್ ಬೌಲ್ಟ್ ಮತ್ತು ಟಿಮ್ ಸೌಥಿ ಮಿಂಚಿದ್ದರು.

ತಂಡಗಳು: ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಮಾರ್ಟಿನ್ ಗಪ್ಟಿಲ್, ಫಿನ್ ಅಲೆನ್ (ವಿಕೆಟ್‌ಕೀಪರ್), ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪಮನ್, ಮಿಚೆಲ್ ಬ್ರೇಸ್‌ವೆಲ್, ಮಿಚೆಲ್ ಸ್ಯಾಂಟನರ್, ಆ್ಯಡಂ ಮಿಲ್ನೆ, ಈಶ್ ಸೋಧಿ, ಲಾಕಿ ಫರ್ಗ್ಯುಸನ್, ಟಿಮ್ ಸೌಥಿ, ಡೆವೊನ್ ಕಾನ್ವೆ, ಡೆರಿಲ್ ಮಿಚೆಲ್, ಜೇಮ್ಸ್ ನಿಶಾಮ್, ಟ್ರೆಂಟ್ ಬೌಲ್ಟ್.

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಆಸಿಫ್ ಅಲಿ, ಹೈದರ್ ಅಲಿ, ಖುಷ್‌ದಿಲ್ ಶಹಾ, ಶಾನ್ ಮಸೂದ್, ಮೊಹಮ್ಮದ್ ಹ್ಯಾರಿಸ್, ಇಫ್ತಿಕಾರ್ ಅಹಮದ್, ಶಾದಾಬ್ ಖಾನ್, ಮೊಹಮ್ಮದ್ ನವಾಜ್, ಮೊಹಮ್ಮದ್ ವಾಸೀಂ ಜೂನಿಯರ್, ಮೊಹಮ್ಮದ್ ರಿಜ್ವಾನ್ (ವಿಕೆಟ್‌ಕೀಪರ್), ಹ್ಯಾರಿಸ್ ರವೂಫ್, ಮೊಹಮ್ಮದ್ ಹಸನೈನ್, ನಸೀಮ್ ಶಹಾ, ಶಾಹೀನ್ ಆಫ್ರಿದಿ.

ನೆಟ್ಸ್‌ನಲ್ಲಿ ರೋಹಿತ್ ಕೈಗೆ ಪೆಟ್ಟು

ಅಡಿಲೇಡ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ಮಂಗಳವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವ ಸಂದರ್ಭದಲ್ಲಿ ಬಲಗೈಗೆ ಚೆಂಡು ಬಡಿದು ಪೆಟ್ಟಾಯಿತು.

ಗುರುವಾರ ಅಡಿಲೇಡ್‌ನಲ್ಲಿ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ತಂಡವು ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ. ಈ ಪಂದ್ಯಕ್ಕಾಗಿ ಮಂಗಳವಾರ ಇಲ್ಲಿ ಭಾರತ ತಂಡವು ಅಭ್ಯಾಸ ನಡೆಸಿತು.

ನೆಟ್ಸ್‌ನಲ್ಲಿ ಥ್ರೋಡೌನ್ ಪರಿಣತ ರಾಘವೇಂದ್ರ ಅವರು ಹಾಕಿದ ಶಾಟ್ ಪಿಚ್ ಎಸೆತವನ್ನು ಪುಲ್ ಮಾಡಲು ಪ್ರಯತ್ನಿಸಿದ ರೋಹಿತ್ ಬಲಗೈಗೆ ಚೆಂಡು ಅಪ್ಪಳಿಸಿತು. ತೀವ್ರ ನೋವು ಅನುಭವಿಸಿದರು. ತಂಡದ ವೈದ್ಯಕೀಯ ಸಿಬ್ಬಂದಿಯು ಐಸ್‌ಪ್ಯಾಕ್ ಹಾಕಿ ಆರೈಕೆ ಮಾಡಿತು. ಸ್ವಲ್ಪ ಹೊತ್ತಿನ ವಿಶ್ರಾಂತಿಯ ನಂತರ ರೋಹಿತ್ ಮತ್ತೆ ಅಭ್ಯಾಸ ಮುಂದುವರಿಸಿದರು.

ರೋಹಿತ್ ಗಾಯಕ್ಕೆ ಪ್ರಥಮ ಚಿಕಿತ್ಸೆ ನೀಡುತ್ತಿರುವ ಫಿಸಿಯೊ

‘ಗಾಯ ಗಂಭೀರವಿದ್ದಂತೆ ಕಾಣುತ್ತಿಲ್ಲ. ಪ್ರಥಮ ಚಿಕಿತ್ಸೆಯ ನಂತರ ಅವರು ಬಹಳ ಹೊತ್ತು ಬ್ಯಾಟಿಂಗ್ ಮಾಡಿದ್ದಾರೆ. ಎಕ್ಸ್‌ರೇ ಅಥವಾ ಸಿ.ಟಿ ಸ್ಕ್ಯಾನಿಂಗ್ ಸದ್ಯಕ್ಕೆ ಅಗತ್ಯವಿಲ್ಲ’ ಎಂದು ತಂಡದ ಮೂಲಗಳು ತಿಳಿಸಿವೆ.

ಈ ಟೂರ್ನಿಯಲ್ಲಿ ರೋಹಿತ್ ಬ್ಯಾಟಿಂಗ್ ಲಯ ಕಂಡುಕೊಳ್ಳುವಲ್ಲಿ ಸಫಲರಾಗಿಲ್ಲ. ಐದು ಪಂದ್ಯಗಳಿಂದ ಕೇವಲ 89 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ ಒಂದು ಅರ್ಧಶತಕ ಇದೆ.

ಮಾರ್ಕ್ ವುಡ್ ಫಿಟ್‌ನೆಸ್ ಸಮಸ್ಯೆ: ಇಂಗ್ಲೆಂಡ್ ತಂಡದ ಪ್ರಮುಖ ವೇಗಿ ಮಾರ್ಕ್ ವುಡ್ ಅವರು ಪಂದ್ಯದಲ್ಲಿ ಆಡಲು ಇನ್ನೂ ಫಿಟ್ ಆಗಿಲ್ಲ.

ದೇಹದಲ್ಲಿ ಸ್ನಾಯುಗಳ ಸೆಳೆತ ಇರುವುದರಿಂದ ಅವರು ಮಂಗಳವಾರ ಓಟದ ಅಭ್ಯಾಸವನ್ನು ಮೊಟಕುಗೊಳಿಸಿ ವಿಶ್ರಾಂತಿ ಪಡೆದರು. ಇದರಿಂದಾಗಿ ಅವರು ಸೆಮಿಫೈನಲ್ ಪಂದ್ಯಕ್ಕೆ ಫಿಟ್ ಆಗುವುದು ಅನುಮಾನವಾಗಿದೆ. ಒಂದೊಮ್ಮೆ ಅವರು ಕಣಕ್ಕಿಳಿಯದಿದ್ದರೆ ಟೈಮಲ್ ಮಿಲ್ಸ್ ಅಥವಾ ಕ್ರಿಸ್ ಜೋರ್ಡಾನ್ ಅವರರಲ್ಲಿ ಒಬ್ಬರಿಗೆ ಅವಕಾಶ ಸಿಗಬಹುದು.

ಸೂರ್ಯಕುಮಾರ್‌ಗೆ ಉಜ್ವಲ ಭವಿಷ್ಯವಿದೆ: ಡಿವಿಲಿಯರ್ಸ್

ನವದೆಹಲಿ (ಪಿಟಿಐ): ‘ಸೂರ್ಯಕುಮಾರ್ ಯಾದವ್ ಅವರಿಗೆ ಉಜ್ವಲ ಭವಿಷ್ಯವಿದೆ. ಅವರು ಈಗ ಅದ್ಭುತವಾದ ಬ್ಯಾಟಿಂಗ್ ಮಾಡುತ್ತಿದ್ದಾರೆ’– ‘ಮಿಸ್ಟರ್ 360 ಡಿಗ್ರಿ’ ಎಂದೇ ಖ್ಯಾತರಾದ ದಕ್ಷಿಣ ಆಫ್ರಿಕಾದ ಮಾಜಿ ಕ್ರಿಕೆಟಿಗ ಎಬಿ ಡಿವಿಲಿಯರ್ಸ್ ಅವರು ಮಾತುಗಳಿವು.

ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಸೂರ್ಯಕುಮಾರ್ ಯಾದವ್ ಅವರು ಮಿಂಚುತ್ತಿದ್ದಾರೆ. ಅವರ ಬ್ಯಾಟಿಂಗ್ ಶೈಲಿಯನ್ನು ಎಬಿಡಿಯವರಿಗೆ ಹೋಲಿಕೆ ಮಾಡಲಾಗುತ್ತಿದೆ. ‘ಭಾರತದ ಮಿಸ್ಟರ್ 360 ಡಿಗ್ರಿ ಬ್ಯಾಟರ್’ ಎಂದು ಸುನಿಲ್ ಗಾವಸ್ಕರ್ ಅವರೇ ಶ್ಲಾಘಿಸಿದ್ದಾರೆ.

ಸದ್ಯ ಭಾರತ ಪ್ರವಾಸದಲ್ಲಿರುವ ಎಬಿಡಿ, ‘ಈ ಮೊದಲು ಅವರು ಸಾಂಪ್ರದಾಯಿಕ ಶೈಲಿಯಲ್ಲಿ ಆಡುವುದನ್ನು ನೋಡಿದ್ದೇನೆ.

ಸೂರ್ಯಕುಮಾರ್ ಯಾದವ್

ಈಗ ಅವರು ಕ್ರೀಸ್‌ಗೆ ಕಾಲಿಟ್ಟ ಆರಂಭದಲ್ಲಿ ಸೆಟ್ ಆಗುತ್ತಾರೆ. ನಂತರ ಬೌಲರ್‌ಗಳ ಮೇಲೆ ಸವಾರಿ ಮಾಡುತ್ತಾರೆ. ಅವರ ಶೈಲಿಯು ಮನಮೋಹಕವಾಗಿದೆ. ಅವರ ಆಟವನ್ನು ನೋಡುವುದೇ ಆನಂದ. ಅವರಿಗೆ ಉಜ್ವಲವಾದ ಭವಿಷ್ಯವಿದೆ’ ಎಂದರು.

ಮುಂಬೈನ ಬ್ಯಾಟರ್ ಸೂರ್ಯ ಐದು ಪಂದ್ಯಗಳಿಂದ 225 ರನ್‌ಗಳನ್ನು ಗಳಿಸಿದ್ದಾರೆ. ಅದರಲ್ಲಿ ಮೂರು ಅರ್ಧಶತಕಗಲಿವೆ. 193.97ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್‌ನಿಂದ ಶಾರ್ದೂಲ್ ಬಿಡುಗಡೆ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಡಲ್ಲಿ ಕ್ಯಾಪಿಟಲ್ಸ್ ತಂಡದ ಶಾರ್ದೂಲ್ ಠಾಕೂರ್, ಕೆ.ಎಸ್. ಭರತ್ ಹಾಗೂ ನ್ಯೂಜಿಲೆಂಡ್ ಆಟಗಾರ ಟಿಮ್ ಸೀಫರ್ಟ್ ಅವರನ್ನು ಬಿಡುಗಡೆ ಮಾಡಲಾಗುತ್ತಿದೆ.

ಮುಂದಿನ ಐಪಿಎಲ್ ಟೂರ್ನಿಯಲ್ಲಿ ಆಡುವ ತಂಡಗಳು ತಮ್ಮ ಆಟಗಾರರನ್ನು ಉಳಿಸಿಕೊಳ್ಳಲು ನವೆಂಬರ್ 15 ಕೊನೆಯ ದಿನವಾಗಿದೆ. ಮುಂದಿನ ತಿಂಗಳು ಬೆಂಗಳೂರಿನಲ್ಲಿ ನಡೆಯಲಿರುವ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಹೊಸ ಆಟಗಾ ರರನ್ನು ಖರೀದಿಸುವ ಅವಕಾಶ ತಂಡಗಳಿಗೆ ಇರುವುದರಿಂದ ಈಗ ಕೆಲವು ಆಟಗಾರರನ್ನು ಬಿಡುಗಡೆ ಮಾಡುತ್ತಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ಕಳೆದ ಆವೃತ್ತಿಯಲ್ಲಿ ಶಾರ್ದೂಲ್ ಅವರನ್ನು ₹ 10.75 ಕೋಟಿ ಕೊಟ್ಟು ಖರೀದಿಸಿತ್ತು.

ವಾರಿಯರ್ಸ್– ಯೋಧಾಸ್ ಪಂದ್ಯ ಟೈ

ಪ್ರೊ ಕಬಡ್ಡಿ ಲೀಗ್: ಮಿಂಚಿದ ಮಣಿಂದರ್ ಸಿಂಗ್, ರೋಹಿತ್ ತೋಮರ್

ಪುಣೆ: ಮಣಿಂದರ್ ಸಿಂಗ್ ಅವರು ದ್ವಿತೀಯಾರ್ಧದಲ್ಲಿ ತೋರಿದ ಅಮೋಘ ಆಟದ ನೆರವಿನಿಂದ ಬೆಂಗಾಲ್ ವಾರಿಯರ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಯು.ಪಿ.ಯೋಧಾಸ್ ವಿರುದ್ಧದ ಪಂದ್ಯವನ್ನು ‘ಟೈ’ ಮಾಡಿಕೊಂಡಿತು.

ಬಾಳೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಮಂಗಳವಾರ ನಡೆದ ಹಣಾಹಣಿ 41–41 ರಲ್ಲಿ ಸಮಬಲದಲ್ಲಿ ಕೊನೆಗೊಂಡಿತು.

ರೋಹಿತ್ ತೋಮರ್ (16) ಮತ್ತು ಪ್ರದೀಪ್ ನರ್ವಾಲ್ (11) ಅವರ ಚುರುಕಿನ ರೇಡಿಂಗ್ ನೆರವಿನಿಂದ ಪ್ರಥಮಾರ್ಧದಲ್ಲಿ ಯೋಧಾಸ್ ತಂಡ 25–15 ರಲ್ಲಿ ಮುನ್ನಡೆ ಸಾಧಿಸಿ, ಸುಲಭ ಗೆಲುವಿನ ನಿರೀಕ್ಷೆಯಲ್ಲಿತ್ತು. ಆದರೆ ವಿರಾಮದ ಬಳಿಕ ಮಣಿಂದರ್, (18 ಪಾಯಿಂಟ್ಸ್) ಪಂದ್ಯದ ಗತಿಯನ್ನೇ ಬದಲಾಯಿಸಿದರು.

ಆಟದ ಆರಂಭದಲ್ಲಿ ಮೇಲುಗೈ ಸಾಧಿಸಿದ ಯೋಧಾಸ್ 4–0 ರಲ್ಲಿ ಮುನ್ನಡೆ ಪಡೆಯಿತು. ಐದನೇ ನಿಮಿಷದಲ್ಲಿ ಎದುರಾಳಿ ತಂಡವನ್ನು ಆಲೌಟ್ ಮಾಡಿ ಮುನ್ನಡೆಯನ್ನು 9–3ಕ್ಕೆ ಹೆಚ್ಚಿಸಿಕೊಂಡಿತು.

12ನೇ ನಿಮಿಷದಲ್ಲಿ ಮತ್ತೊಮ್ಮೆ ವಾರಿಯರ್ಸ್ ತಂಡವನ್ನು ಆಲೌಟ್ ಮಾಡಿ 20–7 ರಲ್ಲಿ ಮೇಲುಗೈ ಸಾಧಿಸಿತು. 10 ಪಾಯಿಂಟ್‌ಗಳ ಮುನ್ನಡೆಯೊಂದಿಗೆ ವಿರಾಮಕ್ಕೆ ತೆರಳಿತು.

ಆದರೆ ಎರಡನೇ ಅವಧಿಯಲ್ಲಿ ಪಂದ್ಯದ ಮೇಲೆ ಹಿಡಿತ ಬಿಗಿಗೊಳಿಸಿದ ವಾರಿಯರ್ಸ್ ತಂಡದವರು, ಹಿನ್ನಡೆಯ ಅಂತರ ತಗ್ಗಿಸುತ್ತಾ ಸಾಗಿದರು. ಯೋಧಾಸ್ ತಂಡವನ್ನು ಆಲೌಟ್ ಮಾಡಿ ಹಿನ್ನಡೆಯನ್ನು 33–34ಕ್ಕೆ ಕಡಿಮೆಗೊಳಿಸಿದರು. ಕೊನೆಯ ನಿಮಿಷಗಳಲ್ಲಿ ಉಭಯ ತಂಡಗಳು ಜಿದ್ದಾಜಿದ್ದಿನ ಹೋರಾಟ ನಡೆಸಿದ್ದರಿಂದ ಪಂದ್ಯ ರೋಚಕ ಟೈನಲ್ಲಿ ಕೊನೆಗೊಂಡಿತು.

ದಿನದ ಎರಡನೇ ಪಂದ್ಯದಲ್ಲಿ ದಬಾಂಗ್ ಡೆಲ್ಲಿ 40–33 ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು.

ಇಂದಿನ ಪಂದ್ಯಗಳು
ಬೆಂಗಳೂರು ಬುಲ್ಸ್– ಹರಿಯಾಣ ಸ್ಟೀಲರ್ಸ್
ತಮಿಳ್ ತಲೈವಾಸ್– ಪುಣೇರಿ ಪಲ್ಟನ್

ಯು.ಪಿ.ಯೋಧಾಸ್ ಮತ್ತು ಬೆಂಗಾಲ್ ವಾರಿಯರ್ಸ್ ತಂಡಗಳ ಪೈಪೋಟಿ

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	11	6	3	2	38
ಜೈಪುರ	11	7	4	0	37
ಬೆಂಗಳೂರು	11	6	4	1	36
ಡೆಲ್ಲಿ	12	6	6	0	35
ಮುಂಬಾ	11	6	5	0	33
ತಲೈವಾಸ್	11	5	4	2	33

ವಿಶ್ವ ಸ್ನೂಕರ್: ನಾಕೌಟ್‌ಗೆ ಪಂಕಜ್

ನವದೆಹಲಿ (ಪಿಟಿಐ): ಭಾರತದ ಪಂಕಜ್ ಅಡ್ವಾಣಿ ಅವರು ಟರ್ಕಿಯ ಅಂತಾಲ್ಯದಲ್ಲಿ ನಡೆಯುತ್ತಿರುವ ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್‌ನ ಲೀಗ್ ಹಂತದ ಎಲ್ಲ ಪಂದ್ಯಗಳನ್ನು ಗೆದ್ದು ನಾಕೌಟ್ ಹಂತ ಪ್ರವೇಶಿಸಿದರು.

ಗುಂಪು ಹಂತದ ಮೊದಲ ಪಂದ್ಯದಲ್ಲಿ ಪಂಕಜ್, 3–0 ರಲ್ಲಿ (62-2, 117-8, 75-15) ಸ್ಥಳೀಯ ಆಟಗಾರ ಅಬ್ದುರಹ್ಮಾನ್ ಯಿಲ್ಮಾಜ್ ಅವರನ್ನು ಮಣಿಸಿ ಶುಭಾರಂಭ ಮಾಡಿದರು.

ಎರಡನೇ ಪಂದ್ಯದಲ್ಲಿ 3-0 ರಲ್ಲಿ (57-23, 80-34, 61-22) ಈಜಿಪ್ಟ್‌ನ ಅಹ್ಮದ್ ಸಮೀರ್ ವಿರುದ್ಧ ಗೆದ್ದರೆ, ಕೊನೆಯ ಲೀಗ್ ಪಂದ್ಯದಲ್ಲಿ ನೆದರ್ಲೆಂಡ್ಸ್‌ನ ಮಾರ್ಕೊ ರೀಜೆರ್ಸ್ ಅವರನ್ನು 57-23, 80-34, 61-22 ರಲ್ಲಿ ನೇರ ಫ್ರೇಮ್‌ಗಳಿಂದ ಮಣಿಸಿದರು.

ನಾಕೌಟ್ ಹಂತದ ಪಂದ್ಯಗಳು ಬುಧವಾರದಿಂದ ನಡೆಯಲಿವೆ. ಅಡ್ವಾಣಿ ಅವರು ಕಳೆದ ತಿಂಗಳು ಕ್ವಾಲಾಲಂಪುರದಲ್ಲಿ ನಡೆದಿದ್ದ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್‌ಷಿಪ್ ಗೆದ್ದು, ವೃತ್ತಿಜೀವನದ 25ನೇ ವಿಶ್ವ ಕಿರೀಟ ಮುಡಿಗೇರಿಸಿಕೊಂಡಿದ್ದರು.

ಅಮೆರಿಕದ ಟೆಕ್ಸಾಸ್‌ನಲ್ಲಿ ಸೋಮವಾರ ಕೊನೆಗೊಂಡ ಡಬ್ಲ್ಯುಟಿಎ ಫೈನಲ್ಸ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಫ್ರಾನ್ಸ್‌ನ ಕರೋಲಿನ್ ಗಾರ್ಸಿಯಾ ಟ್ರೋಫಿಯೊಂದಿಗೆ ಸಂಭ್ರಮಿಸಿದರು. ಫೈನಲ್‌ನಲ್ಲಿ ಅವರು ಬೆಲಾರಸ್‌ನ ಆರಿನಾ ಸಬಲೆಂಕಾ ಅವರನ್ನು ಸೋಲಿಸಿದರು– ಎಎಫ್‌ಪಿ ಚಿತ್ರ

‘ಕ್ರೀಡೆ: ಮಹಿಳೆಯರಿಗೆ ಅವಕಾಶಗಳು ಹೆಚ್ಚಲಿ’

ಮಿಥಾಲಿ

ಬೆಂಗಳೂರು: ಕ್ರೀಡಾಕ್ಷೇತ್ರದಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳು ಲಭಿಸಬೇಕು. ಲಿಂಗ ಅಸಮಾನತೆ ಕೊನೆಯಾಗಬೇಕು ಎಂದು ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಆಶಿಸಿದರು.

ನಗರದಲ್ಲಿ ಮಂಗಳವಾರ ಜಾಬ್‌ಟೆಕ್ ಸಂಸ್ಥೆ ಮಸಾಯ್ ಸ್ಕೂಲ್ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಭೈಚುಂಗ್ ಭುಟಿಯಾ ಇದ್ದರು.

ಹೂಡಿಕೆಗೆ ಸಹಿ: ಮಿಥಾಲಿ ಮತ್ತು ಭುಟಿಯಾ ಇದೇ ವೇಳೆ ಮಸಾಯ್ ಸ್ಕೂಲ್‌ನೊಂದಿಗೆ ಹೂಡಿಕೆ ಮತ್ತು ಪಾಲುದಾರಿಕೆಗೆ ಸಹಿ ಹಾಕಿದರು. ಹೂಡಿಕೆಯ ಮೊತ್ತ ಬಹಿರಂಗಪಡಿಸಲಿಲ್ಲ. ವಿವಿಧ ಉದ್ದೇಶಗಳಿಗೆ ಸಂಸ್ಥೆಯು ₹ 81 ಕೋಟಿ ನಿಧಿ ಸಂಗ್ರಹಿಸಿದ್ದನ್ನೂ ಇದೇ ವೇಳೆ ಸಂಸ್ಥೆಯ ಅಧಿಕಾರಿಗಳು ಪ್ರಕಟಿಸಿದರು.

ಕರಾಟೆ: ಚೈತ್ರಶ್ರೀಗೆ ಚಿನ್ನ, ಬೆಳ್ಳಿ ಪದಕ

ಚೈತ್ರಶ್ರೀ ಎನ್.

ಬೆಂಗಳೂರು: ನಗರದ ಚೈತ್ರಶ್ರೀ ಎನ್. ಅವರು ರಾಜ್ಯಮಟ್ಟದ ಕರಾಟೆ ಚಾಂಪಿಯನ್‌ಷಿಪ್‌ನಲ್ಲಿ ತಲಾ ಒಂದು ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಇಲ್ಲಿಯ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಚಾಂಪಿಯನ್‌ಷಿಪ್‌ನ 21 ವರ್ಷದೊಳಗಿನ ಮಹಿಳೆಯರ ಕಟಾ ವಿಭಾಗದಲ್ಲಿ ಚಿನ್ನ ಮತ್ತು ಸೀನಿಯರ್ ಕಟಾ ವಿಭಾಗದಲ್ಲಿ ಬೆಳ್ಳಿ ಗೆದ್ದರು. ಇದರೊಂದಿಗೆ ದಕ್ಷಿಣ ವಲಯ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದಾರೆ.

ಫುಟ್‌ಬಾಲ್: ಸ್ಪೋರ್ಟಿಂಗ್ ಕ್ಲಬ್‌ಗೆ ಜಯ

ಬೆಂಗಳೂರು: ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು (ಎಸ್‌ಸಿಬಿ) ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಮಂಗಳವಾರ ನಡೆದ ಪಂದ್ಯದಲ್ಲಿ ಎಸ್‌ಸಿಬಿ 2–0 ಗೋಲುಗಳಿಂದ ಬಿಎಫ್‌ಸಿ ತಂಡವನ್ನು ಮಣಿಸಿತು. ವಿಜೇತ ತಂಡಕ್ಕೆ ರಾಬಿನ್ ಸಿಂಗ್ 12ನೇ ನಿಮಿಷದಲ್ಲಿ ಹಾಗೂ ಕೋಸಿ ಬರ್ನಾರ್ಡ್ ಯಾವೊ 24ನೇ ನಿ.ದಲ್ಲಿ ಗೋಲು ತಂದಿತ್ತರು. ಬಿಎಫ್‌ಸಿಯ ಏಕೈಕ ಗೋಲನ್ನು ಮೊನೀರುಲ್ ಮೊಲ್ಲಾ 23ನೇ ನಿ.ದಲ್ಲಿ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ 6–0 ಗೋಲುಗಳಿಂದ ಎಡಿಇ ಎಫ್‌ಸಿ ತಂಡವನ್ನು ಸೋಲಿಸಿತು.

ಹಮ್ಜಾ 3 ಗೋಲುಗಳನ್ನು (15, 38 ಮತ್ತು 61ನೇ ನಿ.) ಗಳಿಸಿದರೆ, ಕೆ.ಎಸ್.ಅಬ್ದುಲ್ಲಾ (55 ಮತ್ತು 66ನೇ ನಿ.) 2 ಗೋಲು ತಂದಿತ್ತರು. ಇನ್ನೊಂದು ಗೋಲನ್ನು ನಿಮಾ ಲೆಪ್ಚಾ (77 ನೇ ನಿ.) ತಂದು ಕೊಟ್ಟರು. ಕೊಡಗು ಎಫ್‌ಸಿ–ಥಾಂಕೋಸ್ ಸ್ಟೂಡೆಂಟ್ಸ್ ಎಫ್‌ಸಿ ಮತ್ತು ಬೆಂಗಳೂರು ಇಂಡಿಪೆಂಡೆಂಟ್ಸ್– ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡಗಳ ನಡುವಣ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಎಫ್‌ಸಿ ಅಗ್ನಿಪುತ್ರ ತಂಡದ ಹಮ್ಜಾ ಅವರು ಚೆಂಡಿನೊಂದಿಗೆ ಮುನ್ನುಗ್ಗಿದ ಕ್ಷಣ – ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ರಷ್ಯಾದ ತೈಲ ಖರೀದಿ ಸಮರ್ಥಿಸಿದ ಭಾರತ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳು, ಪರಸ್ಪರರ ಹಿತಾಸಕ್ತಿ ಹಾಗೂ ದ್ವಿಪಕ್ಷೀಯ ಸಹಕಾರ ಬಲಪಡಿಸುವ ಸಂಬಂಧ ಭಾರತ ಮತ್ತು ರಷ್ಯಾ ಮಂಗಳವಾರ ಮಾಸ್ಕೊದಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಿದವು.

ಭಾರತೀಯ ವಿದೇಶಾಂಗ ಸಚಿವ ಎಸ್. ಜೈಶಂಕರ್ ಮತ್ತು ರಷ್ಯಾ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರು ಮಾತುಕತೆಯಲ್ಲಿ ಭಾಗಿಯಾಗಿದ್ದರು.

ಫೆಬ್ರುವರಿಯಲ್ಲಿ ರಷ್ಯಾ ಮತ್ತು ಉಕ್ರೇನ್ ಸಂಘರ್ಷ ಶುರುವಾದ ನಂತರ ಉಭಯ ಸಚಿವರು ಈಗಾಗಲೇ ನಾಲ್ಕು ಬಾರಿ ಭೇಟಿಯಾಗಿ ಪರಸ್ಪರ ಮಾತುಕತೆ ನಡೆಸಿದ್ದರು.

‘ಭಾರತ ಮತ್ತು ರಷ್ಯಾ ನಡುವಿನ ಹಿತಾಸಕ್ತಿಗಳ ಬಗ್ಗೆ ಸಹಜ ಚರ್ಚೆ ನಡೆಸಿದ್ದೇವೆ. ಅಸ್ಥಿರತೆಯ ಈ ಕಾಲದಲ್ಲಿ, ನಾವು ನಿಜವಾಗಿಯೂ ಜಾಗತಿಕ ಆರ್ಥಿಕತೆಯ ಸ್ಥಿರತೆಗೆ ನೆರವಾಗುವ ಒಳ್ಳೆಯ ಕೆಲಸ ಮಾಡುತ್ತಿದ್ದೇವೆ. ತೈಲ ಮತ್ತು ಅನಿಲ ಖರೀದಿಯಲ್ಲಿ ಮೂರನೇ ಅತಿದೊಡ್ಡ ಗ್ರಾಹಕ ಎನಿಸಿರುವ ನಮ್ಮ ದೇಶದ ಆದಾಯವು ಹೆಚ್ಚಿಲ್ಲದ ಕಾರಣ, ನಾವು ಕೈಗೆಟಕುವ ದರದಲ್ಲಿ ಇಂಧನ ಪಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ರಷ್ಯಾ ಜತೆಗಿನ ಸಂಬಂಧ ಭಾರತಕ್ಕೆ ಪ್ರಯೋಜನಕಾರಿಯಾಗಿದೆ. ರಷ್ಯಾ ಜತೆಗೆ ನಮ್ಮ ಬಾಂಧವ್ಯವನ್ನು ಮುಂದುವರಿಸುತ್ತೇವೆ’ ಎಂದು ಜೈಶಂಕರ್, ರಷ್ಯಾದಿಂದ ತೈಲ ಖರೀದಿ ಸಮರ್ಥಿಸಿಕೊಂಡರು.

‘ಇದು ಯುದ್ಧ ಕಾಲವಲ್ಲ’ವೆಂದು ಪುಟಿನ್ ಅವರಿಗೆ ಮೋದಿ ಹೇಳಿದ್ದ ಕಿವಿ ಮಾತನ್ನು ನೆನಪಿಸಿದ ಅವರು, ಉಕ್ರೇನ್ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಗಮನಿಸಿಯೇ ಉಭಯ ರಾಷ್ಟ್ರಗಳಿಗೂ ಮಾತುಕತೆಗೆ ಮರಳುವಂತೆ ಭಾರತ ಬಲವಾಗಿ ಒತ್ತಾಯಿಸುತ್ತಲೇ ಇದೆ’ ಎಂದು ಎಸ್. ಜೈಶಂಕರ್ ಹೇಳಿದರು.

ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವನ್ನು ಭಾರತ ಈವರೆಗೆ ಖಂಡಿಸಿಲ್ಲ. ರಾಜತಾಂತ್ರಿಕತೆ ಮತ್ತು ಮಾತುಕತೆ ಮೂಲಕವೇ ಬಿಕ್ಕಟ್ಟು ಶಮನಕ್ಕೆ ಭಾರತ ಉಭಯತ್ರರನ್ನು ಒತ್ತಾಯಿಸುತ್ತಲೇ ಇದೆ.

ಪುಟಿನ್ ಜತೆ ಮಾತುಕತೆಗೆ ಒಲವು

ಕೀವ್ (ಎಪಿ): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಲು ನಿರಾಕರಿಸಿದ್ದ ಉಕ್ರೇನ್ ನಿಲುವಿನಲ್ಲಿ ಮಹತ್ವದ ಬದಲಾವಣೆಯಾಗಿದ್ದು, ಶಾಂತಿ ಮಾತುಕತೆ ಸಾಧ್ಯತೆಯತ್ತ ಸಾಗುವ ಸುಳಿವು ನೀಡಿದೆ.

ಅಮೆರಿಕದಲ್ಲಿ ನಡೆಯಲಿರುವ ಪ್ರಮುಖ ಚುನಾವಣೆಯ ಹಿನ್ನೆಲೆಯಲ್ಲಿ ಉಕ್ರೇನ್ ನಿಲುವು ಬದಲಿಸಿಕೊಂಡಿದ್ದು, ಪುಟಿನ್ ಜತೆಗೆ ಶಾಂತಿ ಮಾತುಕತೆ ನಡೆಸುವ ಸಾಧ್ಯತೆಯ ಬಗ್ಗೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸುಳಿವು ನೀಡಿದ್ದಾರೆ.

ಸೋಮವಾರ ತಡವಾಗಿ ವಿಶ್ವ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಝೆಲೆನ್‌ಸ್ಕಿ ಅವರು ‘ರಷ್ಯಾವನ್ನು ನಿಜವಾದ ಶಾಂತಿ ಮಾತುಕತೆಗಳಿಗೆ ಮರಳುವಂತೆ ಒತ್ತಡ ಹೇರಬೇಕು’ ಎಂದು ಒತ್ತಾಯಿಸಿದರು.

ನಾಮಪತ್ರ ಹಿಂಪಡೆಯಲು ಇಂದು ಕೊನೆಯ ದಿನ

ಕೆಎಸ್‌ಸಿಎ: ರಘುರಾಮ್ ಭಟ್ ನಾಮಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಎ. ರಘುರಾಮ್ ಭಟ್ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

ನವೆಂಬರ್ 20ರಂದು ನಿಗದಿಯಾಗಿರುವ ಕೆಎಸ್‌ಸಿಎ ಚುನಾವಣೆಗಾಗಿ ನಾಮಪತ್ರ ಸಲ್ಲಿಸಿದವರ ಪಟ್ಟಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

1980 ರಿಂದ 1993ರವರೆಗೆ ರಘುರಾಮ್ ಭಟ್ ಅವರು ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿದ್ದಾರೆ. ಭಾರತ ತಂಡವನ್ನು ಎರಡು ಟೆಸ್ಟ್ ಪಂದ್ಯಗಳಲ್ಲಿ ಪ್ರತಿನಿಧಿಸಿದ್ದರು. ಕರ್ನಾಟಕ ತಂಡದಲ್ಲಿ ಎಡಗೈ ಸ್ಪಿನ್ನರ್ ಆಗಿ ಮಿಂಚಿದ್ದ ಅವರು 82 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿ 374 ವಿಕೆಟ್‌ಗಳನ್ನು ಗಳಿಸಿದ್ದಾರೆ.

ನಿವೃತ್ತಿಯ ನಂತರ ಅಂಪೈರ್, ಕೋಚ್ ಮತ್ತು ರಾಜ್ಯ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ರಘುರಾಮ್ ಭಟ್

ಕಳೆದ ಮೂರು ವರ್ಷಗಳಿಂದ ಖಜಾಂಚಿಯಾಗಿದ್ದ ವಿನಯ್ ಮೃತ್ಯುಂಜಯ ಅವರೂ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಸ್ಥಾನಗಳಿಗೆ ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಹಿಂಪಡೆಯಲು ಬುಧವಾರ ಕೊನೆಯ ದಿನವಾಗಿದೆ. ಇದರಲ್ಲಿ ಕೆಲವರು ಹಿಂಪಡೆಯುವ ಸಾಧ್ಯತೆ ಇದೆ ಎಂದು ಕೆಎಸ್‌ಸಿಎ ಮೂಲಗಳು ತಿಳಿಸಿವೆ.

ನಾಮಪತ್ರ ಸಲ್ಲಿಸಿದವರು: ಅಧ್ಯಕ್ಷ; ಬಿ.ಎನ್. ಮಧುಕರ್, ರಘುರಾಮ್ ಭಟ್ ಎ., ಸಂಜಯ್ ಪೋಳ್, ವಿನಯ್ ಮೃತ್ಯುಂಜಯ.

ಉಪಾಧ್ಯಕ್ಷ: ವಿ.ಎಂ. ಮಂಜುನಾಥ್, ಕೆ.ಎಸ್. ರಘುರಾಮ್, ರಘುರಾಮ್ ಭಟ್ ಎ., ಬಿ.ಕೆ. ಸಂಪತ್ ಕುಮಾರ್

ಕಾರ್ಯದರ್ಶಿ: ಬಿ.ಎನ್ ಮಧುಕರ್, ಕೆ.ಎಸ್. ರಘುರಾಮ್, ಸಂತೋಷ್ ಮೆನನ್, ವಿನಯ್ ಮೃತ್ಯುಂಜಯ, ಎ. ಶಂಕರ್, ಬಿ.ಎನ್. ಸುಬ್ರಮಣ್ಯ

ಜಂಟಿ ಕಾರ್ಯದರ್ಶಿ: ಕೆ.ಎಸ್. ರಘುರಾಮ್, ಶಾವೀರ್ ತಾರಾಪುರ

ಖಜಾಂಚಿ: ಇ.ಎಸ್. ಜೈರಾಮ್, ಸಿ.ಆರ್. ಕೃಷ್ಣ, ಬಿ.ಎನ್. ಮಧುಕರ್

ವಲಯ ನಿಮಂತ್ರಕರು (ಅವಿರೋಧ)

- ಧಾರವಾಡ: ನಿಖಿಲ್ ಎಂ ಭೂಸದ್ (ಬಿಡಿಕೆ ಕ್ರೀಡಾ ಪ್ರತಿಷ್ಠಾನ)
- ರಾಯಚೂರು: ಸುಜಿತ್ ಬೊಹರಾ, (ಸಿಟಿ ಇಲೆವನ್ ಕ್ರಿಕೆಟ್ ಕ್ಲಬ್)
- ಮೈಸೂರು: ಹರಿಕೃಷ್ಣ ಕುಮಾರ್ ಆರ್.ಕೆ. (ಫ್ರೆಂಡ್ಸ್‌ಯೂನಿಯನ್ ಸಿಸಿ, ನ್ಯಾಷನಲ್, ಸರಸ್ವತಿಪುರಂ ಸಿಸಿ, ರೈಸಿಂಗ್ ಸ್ಟಾರ್ ಸಿಸಿ)

ವಲಯ ನಿಮಂತ್ರಕರು (ಸ್ಪರ್ಧೆ ಸಂಭವ)

- ಶಿವಮೊಗ್ಗ: ಎಚ್.ಎಸ್. ಸದಾನಂದ (ದುರ್ಗಿಗುಡಿ ಸಿಎ), ಎ.ವಿ. ಸಂಜಯಕುಮಾರ್ (ಫ್ರೆಂಡ್ಸ್ ಸಿಸಿ)
- ತುಮಕೂರು: ಸಿ.ಆರ್. ಹರೀಶ್ (ತುಮಕೂರು ಸಿಸಿ), ಕೆ. ಶಶಿಧರ್ (ವೀನಸ್ ಸಿಸಿ), ಜಿ.ಕೆ. ಸತೀಶಚಂದ್ರ (ತುಮಕೂರ ಒಕೇಷನಲ್ಸ್)
- ಮಂಗಳೂರು: ಮಹಾಬಲ ಮಾರ್ಲ (ಸಿಟಿ ಕ್ರಿಕೆಟರ್ಸ್, ಮಂಗಳೂರು), ರತನ್ ಕುಮಾರ್ (ಮಂಗಳೂರು ಸ್ಪೋರ್ಟ್ಸ್ ಕ್ಲಬ್)

ಸಂಕ್ಷಿಪ್ತ ಸುದ್ದಿ

ಭಾರತ ಮೂಲದ ಪ್ರಾಧ್ಯಾಪಕಿ ಪವಿತ್ರಾಗೆ ಅಮೆಜಾನ್ ಪ್ರಶಸ್ತಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಕಾನ್ಸಾಸ್ ಸ್ಟೇಟ್ ಯೂನಿವರ್ಸಿಟಿಯ ಭಾರತೀಯ ಮೂಲದ ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕಿ ಪವಿತ್ರಾ ಪ್ರಭಾಕರ್ ಅವರು ಬಳಕೆದಾರರ ನಕಾರಾತ್ಮಕ ಅನುಭವಗಳನ್ನು ಕಡಿಮೆ ಮಾಡುವ ತಂತ್ರಾಂಶವನ್ನು ವಿನ್ಯಾಸಗೊಳಿಸಿದ್ದಕ್ಕಾಗಿ ಅಮೆಜಾನ್ ಸಂಶೋಧನಾ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪವಿತ್ರಾ ಅವರು ಇತರ 74 ಮಂದಿಯ ಜತೆಗೆ ಈ ಪ್ರಶಸ್ತಿ ಪಡೆಯಲಿದ್ದಾರೆ. ಪ್ರಶಸ್ತಿಯು ಅಸಂಖ್ಯ ಉಡುಗೊರೆ, 300ಕ್ಕೂ ಹೆಚ್ಚಿನ ಅಮೆಜಾನ್ ಸಾರ್ವಜನಿಕ ಡೇಟಾಸೆಟ್‌ಗಳಿಗೆ ಬಳಕೆಗೆ ಅನುಮತಿ, ಅಮೆಜಾನ್ ವೆಬ್ ಸರ್ವೀಸ್‌ನ ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕಾ ಸೇವೆ ಹಾಗೂ ಇತರ ಉಪಕರಣಗಳನ್ನು ಒಳಗೊಂಡಿದೆ ಎಂದು ವಿಶ್ವವಿದ್ಯಾಲಯದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತದ ಔಷಧಿಯಿಂದ ಕೋವಿಡ್ ಸಂಬಂಧಿತ ಹೃದಯ ಸಮಸ್ಯೆ ದೂರ

ವಾಷಿಂಗ್ಟನ್ (ಪಿಟಿಐ): ಭಾರತದ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ 2ಡಿಯೋಕ್ಸಿ–ಡಿ– ಗ್ಲೂಕೋಸ್ (2ಡಿಜಿ) ಎಂಬ ಔಷಧ ಕೋವಿಡ್‌ನ ಸಾರ್ಸ್–ಕೋವ್–2 ವೈರಸ್‌ನಿಂದ ಉಂಟಾಗುವ ಹೃದಯ ಸಂಬಂಧಿ ಸಮಸ್ಯೆಯನ್ನು ನಿವಾರಿಸುತ್ತದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಮೇರಿಲ್ಯಾಂಡ್ ವಿಶ್ವವಿದ್ಯಾಲಯ ಹಾಗೂ ಡಿಆರ್‌ಡಿಒ ಸಂಯೋಗದಲ್ಲಿ ಡಾ.ರೆಡ್ಡಿ ಲ್ಯಾಬೊರೇಟರಿಯಲ್ಲಿ ಈ ಔಷಧ ತಯಾರಿಸಲಾಗಿದ್ದು, ಇಲಿ ಹಾಗೂ ಹಣ್ಣಿನ ನೊಣಗಳ ಮೇಲೆ ಪ್ರಯೋಗ ನಡೆಸಿ ಅಧ್ಯಯನ ಮಾಡಲಾಗಿದೆ.

ಕೊರೊನಾ ಸೋಂಕಿಗೆ ಒಳಗಾದ ಜನರು ಹೃದಯ ಸ್ನಾಯುವಿನ ಉರಿಯೂತ, ಅಸಹಜ ಹೃದಯ ಲಯ, ರಕ್ತ ಹೆಪ್ಪುಗಟ್ಟುವಿಕೆ, ಪಾರ್ಶ್ವವಾಯು, ಹೃದಯಾಘಾತ ಸೇರಿದಂತೆ ಇತರ ಹೃದಯ ಸಂಬಂಧಿ ಸಮಸ್ಯೆಗೆ ಒಳಗಾಗುತ್ತಾರೆ. ಇವರಿಗೆ ಅಗತ್ಯವಿರುವ ನಿರ್ದಿಷ್ಟ ಪ್ರೋಟಿನ್‌ಯುಕ್ತ 2ಡಿಜಿ ಔಷಧವನ್ನು ನೀಡಬಹುದು ಎಂದು ಹೇಳಲಾಗಿದೆ

ಕೋವಿಡ್ ನಿಯಮದ ವಿರುದ್ಧ ಜನರ ದಂಗೆ: ಏಳು ಮಂದಿ ಬಂಧನ

ಬೀಜಿಂಗ್ (ಎಪಿ): ಕೋವಿಡ್–19 ನಿಯಮಗಳ ವಿರುದ್ಧ ದಂಗೆ ಎದ್ದು, ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದ ಏಳು ಜನರನ್ನು ಬಂಧಿಸಲಾಗಿದೆ ಎಂದು ಈಶಾನ್ಯ ಚೀನಾದ ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಚೀನಾದಲ್ಲಿ ಸೋಮವಾರ ಒಂದೇ ದಿನ 5,600 ಕೋವಿಡ್ ಪ್ರಕರಣಗಳು ವರದಿಯಾಗಿದ್ದವು.

‘ನ.18 ಮಕ್ಕಳ ಲೈಂಗಿಕ ದೌರ್ಜನ್ಯ ತಡೆ ದಿನ’

ವಿಶ್ವಸಂಸ್ಥೆ (ಎಪಿ): ಪ್ರತಿ ವರ್ಷ ನವೆಂಬರ್ 18 ಅನ್ನು ಮಕ್ಕಳ ಲೈಂಗಿಕ ದೌರ್ಜನ್ಯ ಮತ್ತು ಶೋಷಣೆ ತಡೆ ದಿನ ಎಂಬ ನಿರ್ಣಯವನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸೋಮವಾರ ಕೈಗೊಳ್ಳಲಾಗಿದ್ದು, ಈ ನಿರ್ಣಯಕ್ಕೆ 110 ದೇಶಗಳು ಬೆಂಬಲ ವ್ಯಕ್ತಪಡಿಸಿವೆ.

ಸಿಯೆರಾ ಲಿಯೋನ್‌ನ ಅಧ್ಯಕ್ಷ ಜೂಲಿಯಸ್ ಮಾದಾ ಬಯೊ ಅವರ ಪತ್ನಿ ಫಾತಿಮಾ ಮಾದಾ ಬಯೋ ಅವರು ನಿರ್ಣಯವನ್ನು ಮಂಡಿಸಿದ್ದು, ಮಕ್ಕಳ ಮೇಲಿನ ಲೈಂಗಿಕ ಶೋಷಣೆಯನ್ನು ತಡೆಗಟ್ಟುವ ಅವಶ್ಯಕತೆ ಇದೆ. ಇದೊಂದು ಘೋರ ಅಪರಾಧ, ಪ್ರತಿ ವರ್ಷ ನವೆಂಬರ್ 18ರಂದು ಈ ವಿಷಯದ ಕುರಿತು ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದಿದ್ದಾರೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ಪರಿಣಾಮ, ಶೋಷಣೆಯನ್ನು ತಡೆಗಟ್ಟುವ ಅಗತ್ಯತೆ ಕುರಿತು ಸಾರ್ವಜನಿಕರಿಗೆ ಆನ್‌ಲೈನ್ ಹಾಗೂ ಆಫ್‌ಲೈನ್‌ನಲ್ಲಿ ಜಾಗೃತಿ ಮೂಡಿಸಬೇಕಿದೆ ಎಂದೂ ಸಭೆಯಲ್ಲಿ ಚರ್ಚಿಸಲಾಯಿತು.

12, 13 ರಂದು ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್: ಒಟ್ಟು ₹ 10 ಲಕ್ಷ ಬಹುಮಾನ ಮೊತ್ತ

ಖ್ಯಾತನಾಮ ಈಜುಪಟುಗಳ ಪೈಪೋಟಿ

ಪ್ರಜಾವಾಣಿ ವಾರ್ತೆ

ನೆಟ್ಟಕಲ್ಲಪ್ಪ ಈಜು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. (ಎಡದಿಂದ) ಅಭಿಷೇಕ್, ಶರತ್‌ಚಂದ್ರ, ಲೋಕೇಶ್ ಮತ್ತು ಅಂಕುಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ಆಶ್ರಯದಲ್ಲಿ ನವೆಂಬರ್ 12 ಹಾಗೂ 13 ರಂದು ನಗರದಲ್ಲಿ 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್' ಆಯೋಜಿಸಲಾಗಿದ್ದು, ಭಾರಿ ನಗದು ಬಹುಮಾನ ಮತ್ತು ಸ್ಪರ್ಧೆಯಲ್ಲಿ ಹೊಸ ಮಾದರಿ 'ಸ್ಕಿನ್ಸ್' ವಿಶೇಷ ಆಕರ್ಷಣೆ ಎನಿಸಿದೆ.

'ಈಜುಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ನಗರದಲ್ಲಿ 2012 ರಲ್ಲಿ ಎನ್‌ಎಸಿ ಆರಂಭಿಸಲಾಗಿದೆ. ಈಜು ಕೇಂದ್ರದ ದಶಮಾನೋತ್ಸವ ಆಚರಣೆ ಅಂಗವಾಗಿ ಈಗ ಕೂಟ ಆಯೋಜಿಸಲಾಗುತ್ತಿದೆ' ಎಂದು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಂದ ಮಾತ್ರವಲ್ಲದೆ ಹರಿಯಾಣ, ಗುಜರಾತ್ ಮತ್ತು ಪಶ್ಚಿಮ ಬಂಗಾಳದಿಂದಲೂ ಈಜುಪಟುಗಳು ಭಾಗವಹಿಸಲಿದ್ದಾರೆ. ಕರ್ನಾಟಕದ 100ಕ್ಕೂ ಅಧಿಕ ಸ್ಪರ್ಧಿಗಳು ಸೇರಿದಂತೆ 260 ಈಜು ಪಟುಗಳು ಈ ಆಹ್ವಾನಿತ ಕೂಟದಲ್ಲಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

'ಬಾಲಕ ಮತ್ತು ಬಾಲಕಿಯರಿಗೆ 12 ರಿಂದ 14 ವರ್ಷ (ಗುಂಪು 2), 15 ರಿಂದ 17 ವರ್ಷ (ಗುಂಪು 1) ಹಾಗೂ 18 ವರ್ಷಕ್ಕಿಂತ ಮೇಲಿನ (ಸೀನಿಯರ್) ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ. ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಛಾಪು ಮೂಡಿಸಿರುವ ಶಿವ ಶ್ರೀಧರ್, ವೈಷ್ಣವ್ ಹೆಗ್ಡೆ, ಎಸ್.ಧನುಷ್ ಮತ್ತು ರಿಧಿಮಾ ವೀರೇಂದ್ರಕುಮಾರ್ ಅವರು ಪಾಲ್ಗೊಳ್ಳುವರು' ಎಂದರು.

'ಇಂತಹ ದೊಡ್ಡಮಟ್ಟದ ಕೂಟ ಆಯೋಜಿಸಿ, ಈಜು ಸ್ಪರ್ಧೆಗೆ ಹೊಸ ದಿಶೆಯನ್ನು ತೋರುವುದು ನಮ್ಮ ಉದ್ದೇಶ. ಸ್ಪರ್ಧಿಗಳನ್ನು ಪ್ರೋತ್ಸಾಹಿಸಲಿಕ್ಕಾಗಿ ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು. ಈ ಚಾಂಪಿಯನ್‌ಷಿಪ್ ₹ 10 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ಇದು ಭಾರತದಲ್ಲಿ ಖಾಸಗಿ ಈಜು ಸಂಸ್ಥೆಯೊಂದು ಆಯೋಜಿಸುವ ಅತಿದೊಡ್ಡ ಕೂಟ ಎನಿಸಿಕೊಳ್ಳಲಿದೆ' ಎಂದು ಹೇಳಿದರು.

'ಪ್ರತಿ ವರ್ಷವೂ ಈ ಚಾಂಪಿಯನ್‌ಷಿಪ್ ಆಯೋಜಿಸುವುದು ನಮ್ಮ ಗುರಿ. ಮುಂದಿನ ಬಾರಿ ಅಂತರರಾಷ್ಟ್ರೀಯಮಟ್ಟದ ಕೂಟ ಆಯೋಜಿಸುವ ಚಿಂತನೆಯೂ ಇದೆ' ಎಂದರು.

'ಸ್ಪರ್ಧಿಗಳು, ಕೋಚ್ ಮತ್ತು ಅಧಿಕಾರಿಗಳು ಒಳಗೊಂಡಂತೆ 400ಕ್ಕೂ ಅಧಿಕ ಮಂದಿಗೆ ಎನ್‌ಎಸಿ ವತಿಯಿಂದ ಊಟದ ವ್ಯವಸ್ಥೆ ಮಾಡಲಾಗಿದೆ' ಎಂದು ನುಡಿದರು.

ಸ್ಕಿನ್ಸ್ ಮಾದರಿ ಪರಿಚಯ: ಎನ್‌ಎಸಿ ಕಾರ್ಯಕ್ರಮ ಸಂಯೋಜಕ ಶರತ್‌ಚಂದ್ರ ಮಾತನಾಡಿ, 'ಈ ಚಾಂಪಿಯನ್‌ಷಿಪ್‌ನಲ್ಲಿ ಸಾಂಪ್ರದಾಯಿಕ ಈಜು ಸ್ಪರ್ಧೆಗಳ ಜತೆಯಲ್ಲೇ 'ಸ್ಕಿನ್ಸ್' ಎಂಬ ಹೊಸ ಮಾದರಿಯನ್ನು ಇದೇ ಮೊದಲ ಬಾರಿಗೆ ಪರಿಚಯಿಸುತ್ತಿದ್ದೇವೆ ಎಂದು ತಿಳಿಸಿದರು.

ಯೂರೋಪ್ ಮತ್ತು ಅಮೆರಿಕದಲ್ಲಿ ನಡೆಯುವ ಅಂತರರಾಷ್ಟ್ರೀಯ ಈಜು ಲೀಗ್‌ನಲ್ಲಿ ಸ್ಕಿನ್ಸ್ ಮಾದರಿಯಲ್ಲಿ ಸ್ಪರ್ಧೆಗಳು ನಡೆಯುತ್ತಿದ್ದು, ಭಾರಿ ಜನಪ್ರಿಯತೆ ಪಡೆದುಕೊಂಡಿದೆ. ಈ ಮಾದರಿಯಲ್ಲಿ ಫೈನಲ್ಸ್‌ನಲ್ಲಿ ಒಂದೇ ರೇಸ್‌ನಲ್ಲಿ ವಿಜೇತರ ನಿರ್ಧಾರ ಆಗುವುದಿಲ್ಲ. ಸ್ಪರ್ಧಿಗಳು ಫೈನಲ್ಸ್‌ನಲ್ಲಿ ಹಲವು ಸುತ್ತುಗಳ ರೇಸ್‌ಗಳಲ್ಲಿ ಭಾಗವಹಿಸಬೇಕಿದೆ. 50 ಮೀ. ವಿಭಾಗದ ಎಲ್ಲ ಸ್ಪರ್ಧೆಗಳು ಸ್ಕಿನ್ಸ್ ಮಾದರಿಯಲ್ಲಿ ನಡೆಯಲಿವೆ ಎಂದು ಅವರು ನುಡಿದರು.

ಸಜನ್ ಪ್ರಕಾಶ್ ಉದ್ಘಾಟನೆ: ಬೆಂಗಳೂರಿನ ಉತ್ತರಹಳ್ಳಿ ಮುಖ್ಯರಸ್ತೆ, ಮುನಿರೆಡ್ಡಿ ಬಡಾವಣೆ, ಪದ್ಮನಾಭನಗರದಲ್ಲಿರುವ ಈಜು ಕೇಂದ್ರದಲ್ಲಿ ನಡೆಯುವ ಕೂಟವನ್ನು ಒಲಿಂಪಿಯನ್ ಈಜುಪಟು ಸಜನ್ ಪ್ರಕಾಶ್ ಅವರು ನ.12 ರಂದು ಸಂಜೆ 6ಕ್ಕೆ ಉದ್ಘಾಟಿಸಲಿದ್ದಾರೆ.

ಎನ್‌ಎಸಿ ಕಾರ್ಯಕ್ರಮ ಸಂಯೋಜಕ ಅಂಕುಶ್, ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಅಭಿಷೇಕ್, ಮೇಲ್ವಿಚಾರಕ ಲೋಕೇಶ್ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡರು.

ಗೆದ್ದವರಿಗೆ ₹10 ಸಾವಿರ ನಗದು

ವಿವಿಧ ವಿಭಾಗಗಳ ವಿಜೇತರಿಗೆ ಪದಕದ ಜತೆ ನಗದು ಬಹುಮಾನ ಲಭಿಸಲಿದೆ. ಪ್ರತಿ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆಯುವವರು ಕ್ರಮವಾಗಿ ತಲಾ ₹ 10 ಸಾವಿರ, ₹ 7 ಸಾವಿರ ಹಾಗೂ ₹ 5 ಸಾವಿರ ನಗದು ಬಹುಮಾನ ಪಡೆಯಲಿದ್ದಾರೆ.

ಸ್ಕಿನ್ಸ್ ಮಾದರಿ ಸ್ಪರ್ಧೆಯಲ್ಲಿ ಮೊದಲ ಎಂಟು ಸ್ಥಾನ ಪಡೆಯುವವರಿಗೆ ₹ 6,000 ದಿಂದ ₹ 500ರ ವರೆಗಿನ ನಗದು ಬಹುಮಾನ ದೊರೆಯಲಿದೆ.

ಮುಖ್ಯಾಂಶಗಳು

- ಕೂಟದಲ್ಲಿ 260 ಈಜುಪಟುಗಳು ಭಾಗಿ
- ಇದೇ ಮೊದಲ ಬಾರಿ 'ಸ್ಕಿನ್ಸ್' ಮಾದರಿ ಪರಿಚಯ

ಕತಾರ್‌ನಲ್ಲಿ ನಡೆಯಲಿರುವ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಅಂಗವಾಗಿ ಪೋರ್ಚುಗಲ್ ತಂಡದ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರ 30 ಅಡಿ ಎತ್ತರ ಮತ್ತು 8 ಅಡಿ ಅಗಲದ ಕಟೌಟ್‌ಅನ್ನು ಕೊಡಗು ಜಿಲ್ಲೆಯ ಸುಂಟಿಕೊಪ್ಪ ಸಮೀಪದ ಗದ್ದೆಹಳ್ಳ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲಿಸಿದ್ದು, ಗಮನ ಸೆಳೆಯುತ್ತಿದೆ

ಕ್ರಿಕೆಟ್: ವಿಶಾಲ್ ಕೈತಪ್ಪಿದ ತ್ರಿಶತಕ

ಬೆಂಗಳೂರು: ಕರ್ನಾಟಕದ ವಿಶಾಲ್ ಓನತ್ (296, 459ಎ, 4X32, 6X1) ಅವರು ತ್ರಿಶತಕ ತಪ್ಪಿಸಿಕೊಂಡರು. ತಂಡವು 19 ವರ್ಷದೊಳಗಿನವರ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮುಂಬೈನೊಂದಿಗೆ ಡ್ರಾ ಸಾಧಿಸಿತು. ಆಲೂರು 1ನೇ ಕ್ರೀಡಾಂಗದಲ್ಲಿ ಈ ಪಂದ್ಯ ನಡೆದಿತ್ತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: ಮೊದಲ ಇನಿಂಗ್ಸ್: 160.2 ಓವರ್‌ಗಳಲ್ಲಿ 559 (ವಿಶಾಲ್ ಓನತ್ 296, ಪ್ರಖರ್ ಚತುರ್ವೇದಿ 35, ಧ್ರುವ ಪ್ರಭಾಕರ್ 98; ಪ್ರಿನ್ಸ್ ಬದಿಯಾನಿ 116ಕ್ಕೆ 3, ನಿಖಿಲ್ ಗರಿ 123ಕ್ಕೆ 3, ಮುಶೀರ್ ಖಾನ್ 121ಕ್ಕೆ 2). ಮುಂಬೈ: 87.3 ಓವರ್‌ಗಳಲ್ಲಿ 250 ಮತ್ತು ಎರಡನೇ ಇನಿಂಗ್ಸ್: 109.2 ಓವರ್‌ಗಳಲ್ಲಿ 5ಕ್ಕೆ 270 (ಮುಶೀರ್ ಖಾನ್ 55, ನೂತನ್ ಔಟಾಗದೆ 100, ಮನನ್ ಭಟ್ 37, ಅರ್ಜುನ್ ದನಿ ಔಟಾಗದೆ 46). ಫಲಿತಾಂಶ: ಪಂದ್ಯ ಡ್ರಾ

ಹಾಕಿ: ಡೈನಮೈಟ್ಸ್ ಯುನೈಟೆಡ್‌ಗೆ ಗೆಲುವು

ಬೆಂಗಳೂರು: ಎ.ಎ. ಬೋಪಣ್ಣ ಗಳಿಸಿದ ಎರಡು ಗೋಲುಗಳು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಡೈನಮೈಟ್ಸ್ ಯುನೈಟೆಡ್ ತಂಡಕ್ಕೆ ಗೆಲುವು ತಂದುಕೊಟ್ಟವು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಡೈನಮೈಟ್ಸ್ ಯುನೈಟೆಡ್ ತಂಡವು 4–0ಯಿಂದ ಕಾವೇರಿ ಸ್ಪೋರ್ಟ್ಸ್ ಕ್ಲಬ್ ಎದುರು ಗೆದ್ದಿತು. ವಿಜೇತ ತಂಡದ ಪರ ಬೋಪಣ್ಣ (24, 34ನೇ ನಿಮಿಷ), ಕಾರ್ತಿಕ್ ಪೂವಣ್ಣ (19ನೇ ನಿ.) ಮತ್ತು ಪೂವಣ್ಣ ಎಂ.ಸಿ. (42ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಈಸ್ಟ್ ಇಂಡಿಯಾ ಹಾಕಿ ಕ್ಲಬ್ 4–0ಯಿಂದ ಫ್ರೆಂಡ್ಸ್ ಹಾಕಿ ಕ್ಲಬ್ ಕಲಬುರ್ಗಿ ಎದುರು ಜಯಿಸಿತು. ಈಸ್ಟ್ ಇಂಡಿಯಾ ಪರ ವಿವೇಕ್ (27, 35ನೇ ನಿ.), ಶೈಲೇಶ್ (9ನೇ ನಿ.) ಮತ್ತು ಪೆಮ್ಮಯ್ಯ (41ನೇ ನಿ.) ಗೋಲು ದಾಖಲಿಸಿದರು.

72198 21111 | BAJAJ FINANCE LTD - AF | BAJAJ SECURE • AMC • ROAD SIDE ASSISTANCE

ನಿಯಮ ಮತ್ತು ಷರತ್ತುಗಳು ಅನ್ವಯಿಸುತ್ತವೆ. ಆಯ್ದ ವಲಯಗಳಲ್ಲಿ ಆಯ್ದ ಮಾಡೆಲ್‌ಗಳ ಮೇಲೆ ಕೊಡುಗೆ ಲಭ್ಯವಿದೆ. #CT 125X ಡ್ರಮ್ ಶ್ರೇಣಿಯ ಮೇಲೆ ಕರ್ನಾಟಕದಲ್ಲಿ ಎಕ್ಸ್‌ಶೋರೂಮ್‌ನ ಬೆಲೆಯಾಗಿದೆ. ##ಡೌನ್ ಪೇಮೆಂಟ್ CT 125X ಡ್ರಮ್ ಶ್ರೇಣಿಯದ್ದಾಗಿದೆ. ಡಿಸಿಸಿ ಶುಲ್ಕಗಳು, ಪ್ರೋಸೆಸಿಂಗ್ ಫೀಗಳು ಮತ್ತು ಇತರ ಶುಲ್ಕಗಳನ್ನು ಹೊರತುಪಡಿಸಿ ಡೌನ್ ಪೇಮೆಂಟ್ ಇದೆ. ಹಣಕಾಸು ಸೌಲಭ್ಯವು ಫೈನಾನ್ಶಿಯರ್ ವಿವೇಚನೆಗೆ ಒಳಪಟ್ಟಿರುತ್ತದೆ. ಮೊದಲೇ ಸೂಚನೆ ನೀಡದೇ ಯಾವುದೇ ಅಥವಾ ಎಲ್ಲ ಕೊಡುಗೆಗಳನ್ನು ಹಿಂಪಡೆಯಲು ಬಜಾಜ್ ಆಟೋ ಹಕ್ಕು ಕಾಯ್ದಿರಿಸಿದೆ. RSA ಮತ್ತು MMCಗಾಗಿ ಬಜಾಜ್ ಆಟೋ ಡೀಲರ್ ಬಳಿ ಪರಿಶೀಲಿಸಿ. RSA ಅನ್ನು ತೃತೀಯ ಪಕ್ಷಗಳು ಒದಗಿಸುತ್ತವೆ ಮತ್ತು ಇದು ನಿಯಮ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. *ಡಿಸ್ಕ್ ಬ್ರೇಕ್ ಐಚ್ಛಿಕ ಸೌಲಭ್ಯವಾಗಿದ್ದು, CT 125X ಡಿಸ್ಕ್ ವೇರಿಯಂಟ್‌ನೊಂದಿಗೆ ಮಾತ್ರ ಇರುತ್ತದೆ. ಡ್ರಮ್ ಬ್ರೇಕ್ ವೇರಿಯಂಟ್ ಕೂಡಾ ಲಭ್ಯವಿದೆ.

Authorised Dealers For Bajaj Auto Ltd.: Bangalore Bommanahalli Amba Bajaj 9535411100 • **HSR Layout** Amba Bajaj 8884333732 • **Sarjapur** Amba Bajaj 7406688884 • **BTM Layout** Amba Bajaj 9513926221 • **Madiwala** Amba Bajaj 9945000048 • **Electronic City** Amba Bajaj 8971711118 • **Nayandahalli Mysore Rd** RV Bajaj 6360308373 • **Chandra Layout Moodalapalya** RV Bajaj 9740444545 • **Kengeri** RV Bajaj 7353763305 • **Giri Nagar** RV Bajaj 7353763302 • **Vijaynagar** RV Bajaj 7353763307 • **Banashankari** Popular Bajaj 9945111874 • **Rajajinagar** Popular Bajaj 6366554001 • **Koramangala** Popular Bajaj 9845589079 • **Konankunte** Popular Bajaj 7760967834 • **Ramnagara** Popular Bajaj 7760967832 • **Kanakpura** Popular Bajaj 9972533890 • **Channapatna** Popular Bajaj 9901947666 • **Uttarahalli** Popular Bajaj 9972095890 • **Gottigere** Popular Bajaj 7760996891 • **Mekhri Circle** Kalyani Bajaj 8884413595 • **Yelahanka** Kalyani Bajaj 9449849618 • **Mathikere** Kalyani Bajaj 8884430126 • **Chickbellapur** Kalyani Bajaj 8884413594 • **Devenhalli** Kalyani Bajaj 9449849624 • **Marathahalli** Khivraj Bajaj 9036091986 • **Kasturba Rd** Khivraj Bajaj 9035060140 • **Indiranagar** Khivraj Bajaj 9035060139 • **Hennur** Khivraj Bajaj 9742155225 • **Banaswadi** Khivraj Bajaj 9035060147 • **Yeshwanthpur** Khivraj Bajaj 9449404098 • **Hesargatta** Khivraj Bajaj 9035060148 • **Whitefield** Khivraj Bajaj 8618840097 • **Hoskote** Khivraj Bajaj 9035005075 • **Magadi Rd** Anant Bajaj 9980009166 • **Laggere** Anant Bajaj 7022984402 • **Hubli** Channamma Bajaj 9620614106 • **Arvind Nagar Branch** 8884771881 • **Gadag** Channamma Bajaj 9620747153 • **Sirsi** Channamma Bajaj 8884645609 • **Haveri** Channamma Bajaj 8151884422 • **Belgaum** Jagajampi Bajaj 988690116 • **Jagashree Bajaj** 7349773962 • **Chikodi** Jagajampi Bajaj 9449736406 • **Gokak** Jagajampi Bajaj 7022425616 • **Bellary** AADI Bajaj 9606050246 • **Raichur** Shree Balaji Automobiles 9964626515 • **Koppal** I A Bajaj 8123712938 • **Hospet** AADI Bajaj 9731361414 • **Hagaribommanahalli** AADI Bajaj 9900363010 • **Siruguppa** AADI Bajaj 9110217558 • **Bijapur** Bijjargi Bajaj Blde Road 6362877793 • **Bus Stand Road** 8884000970 • **Bagalkot** Bijjargi Bikes 9148448324 • **Sindagi** Bijjargi Bajaj 8861946802 • **Bidar** Sindol Bajaj 9513226555 • **Chitradurga** BTV Bajaj 8310553554 • **Hiriyur** BTV Bajaj 8310553554 • **Challakere** BTV Bajaj 8310553554 • **Davangere** Jain Bajaj 9343636805 • **Harihara** Jain Bajaj 9632300444 • **Gulbarga** VKG Bajaj 9632018700 • **Yadgir** VKG Bajaj 8722182492 • **Humnabad** VKG Bajaj 8050889160 • **Shimoga** Supreme Bajaj 8105000999 • **Sagar** Supreme Bajaj 9008339799 • **Bhadravathi** Supreme Bajaj 9008352799 • **Chikkamagalur** Supreme Bajaj 9008379799 • **Tarikere** Supreme Bajaj 9008569799 • **Hosanagar** Supreme Bajaj 9731767799 • **Anandpura** Supreme Bajaj 9663501499 • **Hassan** Arpita Bajaj 9902439255 • **Arsikere** Arpita Bajaj 9964094535 • **Kolar** Shree Kamakshi Bajaj 9845784351 • **Malur** Shree Kamakshi Bajaj 9665524409 • **KGF** Shree Kamakshi Bajaj 9900235758 • **Mulbagalu** Shree Kamakshi Bajaj 8892616586 • **Bangarapet** Shree Kamakshi Bajaj 8970688361 • **Tumkur** Akshaya Bajaj 7259040212 • **Tiptur** Akshaya Bajaj 7259040226 • **Sira** Akshaya Bajaj 7259040328 • **Kunigal** Akshaya Bajaj 7338662706 • **Madhugiri** Akshaya Bajaj 7259040340 • **BH Road** 7338662687 • **Mysore Saraswathipuram** Popular Bajaj 9148101113 • **Chamarajapuram** Popular Bajaj 7259786271 • **Vontikoppal** Star Bajaj 9886959722 • **Mandya** Popular Bajaj 7760967900 • **Chamarajanagara** Patel Bajaj 9480494888 • **Hunsur** Star Bajaj 8884374777 • **Kushalnagar** Popular Bajaj 7259786276 • **Nanjangud** Star Bajaj 9742100252 • **NR Mohalla** Star Bajaj 8095777706 • **Balmatta** Supreme Bajaj 9606973192 • **Kuloor** Supreme Bajaj 9606237547 • **Surathkal** Supreme Bajaj 9606973193 • **Thokottu** 9606702429 • **B C Road** 7618715273 • **Bidar** Sindol Bajaj 9513226555 • **Udupi** Saanvi Bajaj 8861135225.